for disposal of scrapped material by suitable grouping depending on possible usage by buyers to attract larger number of those interested in the auction and to secure a more attractive price for the Government.

೨-೦೦ ಪಿ.ಎಂ.

ರಾಜ್ಯದಲ್ಲಿರುವ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ

ಶ್ರೀ ಬಾಬುರೆಡ್ಡಿ ಎ. ತುಂಗಳ್ (ಬೀಳಗಿ).—ಮಾನ್ಯ ಅಧ್ಯಕ್ಷರೇ, ಕೇವಲ ಅತ್ಯಲ್ಪ ಕಾಲದಲ್ಲಿ ಶ್ರೀ ಮಾನ್ ಮಲ್ಲಿಕಾರ್ಜುನ ಖರ್ಗೆಯವರು ಬರಗಾಲದ ಬಗ್ಗೆ ಅಧ್ಯಯನ ಮಾಡಿ ವರದಿಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ನನ್ನ ಕ್ಷೇತ್ರದ ಬೇಕಾದಷ್ಟು ಹಳ್ಳಿಗಳಲ್ಲಿ ಬರಗಾಲ ಆವರಿಸಿದೆ. ಹಾಗೂ ೩೦, ೪೦ ಸಾವಿರ ದನಕರುಗಳಿಗೆ ಮೇವಿಲ್ಲದೆ ತೊಂದರೆಯಾಗಿದೆ. ಇದರ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಾಕಷ್ಟು ಮಾಡಿದ್ದಾರೆ. ಆದರೆ ೧ ಲಕ್ಷ ೫೫ ಸಾವಿರ ಕೃಷಿ ಕಾರ್ಮಿಕರು ಉದ್ಯೋಗವಿಲ್ಲದೆ ತೊಂದರೆಗೆ ಒಳಗಾಗಿದ್ದಾರೆ. ಇದು ವರದಿಯೇ ತಿಳಿಸುವಂತಹ ವಿಷಯವಾಗಿದೆ. ಈಗಾಗಲೇ ಬರಗಾಲದ ಪ್ರದೇಶಗಳಲ್ಲಿ ಅಧಿಕಾರಿಗಳು ಯಾವರೀತಿಯಿಂದ ವರ್ತನೆ ಮಾಡುತ್ತಿದ್ದಾರೆಂದು ನಾನು ಹೇಳಿದೆ. ಇನ್ನೂ ಹೇಳಬೇಕೆಂದರೆ ಖರ್ಗೆ ಯವರು ಬಂದಾಗ ತಹಸೀಲ್ದಾರ್, ಬಿಡಿಓಗಳು, ಇಂಜಿನಿಯರ್‌ಗಳು ತುಂಬಿಕೊಂಡಿದ್ದರು. ಇವರು ಗಳಿಗೆ ತಾಳ್ಮೆ ಇಲ್ಲ. ನಮ್ಮ ಜಿಲ್ಲೆಯಲ್ಲಿರುವ ಕೆರೆಗಳ ಹೂಳು ತೆಗೆದುಹಾಕುವ ಕೆಲಸವನ್ನು ಯುದ್ಧ ದೋಪಾದಿಯಲ್ಲಿ ಮಾಡಬೇಕು. ಹಾಗೂ ಕಾಮಗಾರಿಗಳಲ್ಲಿ ಹೆಚ್ಚು ಹೆಚ್ಚು ಜನರನ್ನು ತೊಡಗಿಸಿ ಕೆಲಸ ಮಾಡುವಂಥ ಕ್ರಮ ತೆಗೆದುಕೊಳ್ಳಬೇಕು.

ನಮ್ಮ ಸರ್ಕಾರ ೧೮೦ ವೆಲ್ಸ್‌ಗಳ ಯೋಜನೆ ಇಟ್ಟುಕೊಂಡಿದೆ. ಯಾವುದೇ ಕೆಲಸವನ್ನು ಮಾಡು ವಾಗ ತಿರುಪತಿ ಹಜಾಮತಿ ಮಾಡಿದಹಾಗೆ ಮಾಡುವ ಪರಿಪಾಠವಿಟ್ಟುಕೊಂಡಿದ್ದಾರೆ. ೧೮೦ ವೆಲ್ಸ್‌ಗಳ ಪೈಕಿ ಒಂದೆರಡನ್ನಾದರೂ ತೋಡುವ ಕಾರ್ಯಕ್ರಮ ಇಟ್ಟುಕೊಂಡರೆ ೧೦ ಸಾವಿರ ೨೦ ಸಾವಿರ ಎಕರೆ ಗಳಿಗೆ ನೀರು ಉಣಿಸಲು ಅವಕಾಶವಾಗುತ್ತದೆ. ಇದರಿಂದ ಭ್ರಷ್ಟಾಚಾರಕ್ಕೆ ಅವಕಾಶವಿರುವುದಿಲ್ಲ. ತಾವು ಇದಕ್ಕೆ ವ್ಯವಸ್ಥೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ೪ ನದಿಗಳಿವೆ, ಕೃಷ್ಣ, ಭೀಮ, ಘಟಪ್ರಭಾ, ಮಲಪ್ರಭಾ, ಶಾಶ್ವತವಾದ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ತೆಗೆದುಕೊಳ್ಳಬೇಕು.

ನಮ್ಮ ಜಿಲ್ಲೆಯಲ್ಲಿ ಬರಗಾಲ ಇದ್ದರೂ ಕೂಡ ಇವತ್ತು ನೂರಾರು ಟ್ರ್ಯಾಕ್ಟರ್‌ಗಳಲ್ಲಿ ಕಣಿಕೆ ಹುಲ್ಲು ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಇದನ್ನು ತಪ್ಪಿಸುವ ವ್ಯವಸ್ಥೆ ಮಾಡಬೇಕು. ಬಿಜಾಪುರ ಜಿಲ್ಲೆಯು ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತದೆ. ಆದ್ದರಿಂದ ತಾವು ಶಾಶ್ವತವಾದ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಅಧಿಕಾರಿಗಳಿಗೆ ತಾವು ಕಟ್ಟುನಿಟ್ಟಿನ ಆದೇಶ ಕೊಟ್ಟು ಈ ಬರಗಾಲ ಪ್ರದೇಶದಲ್ಲಿ ಜನರಿಗೆ ತೊಂದರೆಯಾಗುವಂತಹ ಯಾವುದೇ ಕ್ರಮ ಕೈಗೊಳ್ಳದೆ ಅನುಕೂಲ ವಾಗುವ ಎಲ್ಲ ಕ್ರಮ ಕೈಗೊಳ್ಳಲು ಆದೇಶ ಕೊಡಬೇಕು.

ಶ್ರೀ ಬೊಮ್ಮಾಯಿಯವರು ಈಗಾಗಲೇ ಸೂಕ್ತ ಆದೇಶ ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಅವರೇ ನಮಗೆ ಯಾವ ಆದೇಶವೂ ಬಂದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಜಿಲ್ಲಾಧಿಕಾರಿ ಗಳಿಗೆ ಹೆಚ್ಚಿನ ಅಧಿಕಾರವನ್ನು ಮತ್ತು ದುಡ್ಡು ಖರ್ಚು ಮಾಡಲು ಹೆಚ್ಚಿನ ಸಂಪತ್ತನ್ನು ಕೊಡಬೇಕು

ಕಳೆದ ೫೫ ವರ್ಷದಲ್ಲಿ ನಮ್ಮ ಜಿಲ್ಲೆಯಲ್ಲಿ ಇದು ೩೨ನೇಯ ಸಾಲಿನ ಬರಗಾಲದ ಅವಧಿ. ಆದ್ದರಿಂದ ಶಾಶ್ವತ ವಿಮೋಚನೆಗಾಗಿ ಪ್ರಯತ್ನಿಸುವುದು ಅತ್ಯಂತ ಅವಶ್ಯಕ. ಕೃಷಿ ಕಾರ್ಮಿಕರು, ರೈತ ಕಾರ್ಮಿಕರು, ಅತಿ ಸಣ್ಣ ರೈತರು ಹೀಗೆ ಎಲ್ಲ ಕಷ್ಟಕ್ಕೆ ತುತ್ತಾಗಿದ್ದಾರೆ. ಬಿತ್ತಿದ್ದ ಶೇಕಡ ೬೦ ರಷ್ಟು ಬೀಜಗಳು ಕೂಡ ನಷ್ಟವಾಗಿವೆ. ಆದ್ದರಿಂದ ಇಂತಹ ಸಣ್ಣ ರೈತರಿಗೆ ಅವಶ್ಯಕವಾದ ಹೆಚ್ಚಿನ ಪರಿ ಹಾರ ಒದಗಿಸಿಕೊಡಲು ಸರ್ಕಾರ ಕ್ರಮಕೈಗೊಳ್ಳಬೇಕು. ಈ ಬರಗಾಲ ಕಾಮಗಾರಿಗಳ ಬಗ್ಗೆ ಕಳೆದ ೨-೩ ವರ್ಷಗಳಿಂದಲೂ ಸಹ ನಮ್ಮ ಸ್ನೇಹಿತರು ಹೇಳಿದ ಹಾಗೆ ವರದಿ ಬರುತ್ತಲೇ ಇದೆ. ಈವಾಗ ಅಲ್ಲಲ್ಲಿ ಮಳೆ ಆಗಿರಬಹುದು. ಮಳೆ ಆದಮಾತ್ರಕ್ಕೇನೇ ತಕ್ಷಣ ಬೆಳೆ ಬರುವುದಿಲ್ಲ, ಬೆಳೆ ಬರಬೇಕಾದರೆ ೪ ತಿಂಗಳು ಕಾಯಬೇಕಾಗುತ್ತದೆ. ಆದುದರಿಂದ ಬೆಳೆ ಬರುವವರೆಗೆ ಬಿಜಾಪುರ ಜಿಲ್ಲೆಯಲ್ಲಿ ಈಗ ನಡೆಸಿ

ಕೊಂಡು ಹೋಗುತ್ತಾ ಇರತಕ್ಕಂಥಾ ಕೆಲಸಗಳನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ಮಾನ್ಯ ಕಂದಾಯ ಮಂತ್ರಿಗಳಿಗೆ, ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಮನವಿ ಮಾಡಿಕೊಂಡು, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ನಂಜಯ್ಯನಮಠ್‌ರವರು ಮಾತನಾಡಲಿ.

ಶ್ರೀ ಎಂ.ಎಸ್. ಕೃಷ್ಣನ್.—ಈ ಕಡೆಯ ಮಾನ್ಯ ಭೂಪತಿಯವರಿಗೆ ತಾವು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೋ ಅಧ್ಯಕ್ಷರಿಗೆ ನಮ್ಮ ಪಕ್ಷದವರ ಮೇಲೆ ಕೋಪ ಬಂದಿದೆ ಎಂದು ಕಾಣುತ್ತದೆ.

ಅಧ್ಯಕ್ಷರು.—ನೀವು ಮಾತನಾಡಿಲ್ಲವೇ ?

ಶ್ರೀ ಎಂ.ಎಸ್. ಕೃಷ್ಣನ್.—ನಾನು ಸಹ ಮಾತನಾಡಿಲ್ಲ.

ಅಧ್ಯಕ್ಷರು.—ನೀವು ಮಾತನಾಡಿರಬಹುದು ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಮಾತನಾಡಿಲ್ಲ.

ಅಧ್ಯಕ್ಷರು.—ನಿಮಗೆ ಮಾತನಾಡುವುದಕ್ಕೆ ಆಮೇಲೆ ಅವಕಾಶ ಕೊಡುತ್ತೇನೆ. ಶ್ರೀ ನಂಜಯ್ಯನಮಠ್‌ರವರನ್ನು ಕರೆದಿರುವುದರಿಂದ ಅವರು ಮೊದಲು ಮಾತನಾಡಲಿ.

ಶ್ರೀ ನಂಜಯ್ಯನ್‌ಮಠ್ ಎಸ್. ಜಿ.(ಗುಳೇದಗುಡ್).—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಹೇಳಬೇಕಾದರೆ ಈ ಬರಗಾಲದ ಬಗ್ಗೆ ಶ್ರೀಮಾನ್ ಖರ್ಗೆಯವರು ಮತ್ತು ಅವರ ತಂಡದವರು ಸಮರೋಪಾದಿಯಲ್ಲಿ ಇಡೀರಾಜ್ಯಾದ್ಯಂತ ಸಂಚರಿಸಿ ಇದರ ಬಗ್ಗೆ ಅತ್ಯಮೂಲ್ಯವಾದ ಒಂದು ವರದಿಯನ್ನು ಈ ಸದನಕ್ಕೆ ಕೊಟ್ಟಿದ್ದಾರೆ ಎಂದು ಹೇಳಲು ಇಚ್ಛಿಸುತ್ತೇನೆ, ಅಷ್ಟೇ ಅಲ್ಲ ಇದಕ್ಕೆ ಕಾರಣ ಕರ್ತರಾದ ಶ್ರೀಮಾನ್ ಬೊಮ್ಮಾಯಿಯವರು ಏನು ಇದ್ದಾರೆ ಅವರಿಗೂ ಮತ್ತು ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆ ಹಾಗೂ ಅವರ ತಂಡದವರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಈ ಭೀಕರವಾದ ಬರಗಾಲವನ್ನು ಎದುರಿಸಲಿಕ್ಕೆ ಇದುವರೆವಿಗೆ ಸರ್ಕಾರದವರು ಸಾಕಷ್ಟು ಪರಿಣಾಮಕಾರಿಯಾಗಿ ಕೈಗೊಳ್ಳಲಿಲ್ಲ, ಎಂದು ಹೇಳುತ್ತೇನೆ. ನಮ್ಮ ಬಿಜಾಪುರ ಜಿಲ್ಲೆ ಗೋಳಗುಮ್ಮಟ ಶಿಲಾವಿನ್ಯಾಸದಲ್ಲಿ ಜಕಣಾಚಾರಿಯವರು ಹೇಗೆ ಪ್ರಸಿದ್ಧರಾಗಿದ್ದರೋ ಹಾಗೆಯೇ ಬರಗಾಲಕ್ಕೂ ಸಹ ಪ್ರಸಿದ್ಧಿಯಾಗಿದೆ. ನಾನು ೧೯೭೦ ನೇ ಇಸವಿಯಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಓದುತ್ತಿದ್ದಾಗಿನಿಂದಲೂ ಕೂಡ ಬರಗಾಲ ಸಮರದೋಪಾದಿಯಲ್ಲಿ ಬರುತ್ತಿದೆ, ಇದಕ್ಕೆ ಹಿಂದಿನ ಮುಖ್ಯ ಮಂತ್ರಿಗಳು ಈ ಬರಗಾಲಕ್ಕೆ ಸಾಕಷ್ಟು ಹಣ ಕೊಟ್ಟು ಒಂದು ಹತೋಟಿಗೆ ತಂದಿದ್ದರು ತಮಗೆ ಹೇಳಬೇಕಾದರೆ ಆವಾಗ ದನಗಳಿಗೆ ಮೇವು ಇಲ್ಲದೆ ಜನಗಳು ತಮ್ಮ ಎತ್ತು ಆಕಳುಗಳನ್ನು ಬಿಜ್ಜಿ ಮೆಣಸಿನಕಾಯಿಗೆ ಮಾರುತ್ತಿದ್ದರು. ಆ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆ ಭೀಕರ ಬರಗಾಲವನ್ನು ಎದುರಿಸಬೇಕಾಯಿತು. ಮೊದಲಿನಿಂದಲೂ ಈ ಬಿಜಾಪುರ ಜಿಲ್ಲೆ ಬರಗಾಲಕ್ಕೆ ಪ್ರಸಿದ್ಧವಾದುದು ಎಂದು ಗೊತ್ತಾಗಿದ್ದರೂ ಕೂಡ ಪ್ರಾರಂಭದಲ್ಲೆ ಬರಗಾಲ ಎಂದು ಕಂಡು ಬಂದತಕ್ಷಣವೇ ತಕ್ಕ ಪರಿಹಾರವನ್ನು ಕೊಟ್ಟು ನಿರ್ಧಿಷ್ಟವಾದ ಸಮಯದಲ್ಲಿ ಈ ಬರಗಾಲ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು, ಆ ಸಂದರ್ಭದಲ್ಲಿ ಸರ್ಕಾರದವರು ಎಷ್ಟು ಹಣ ಕೊಡಬೇಕಾಗಿತ್ತೋ ಅಷ್ಟು ಹಣವನ್ನು ಕೊಡದೇ ಇದ್ದುದರಿಂದ ಸಾಕಷ್ಟು ಜನ ನಿರಾಶರಾಗಿ ಅವರು ಗೋವಾಕ್ಕೆ ಮಹಾರಾಷ್ಟ್ರಕ್ಕೆ ವಲಸೆ ಹೋಗುವ ಪರಿಸ್ಥಿತಿ ಉಂಟಾಯಿತು. ಈವೊತ್ತು ಇರತಕ್ಕಂಥ ಪರಿಸ್ಥಿತಿ ನೋಡಿದರೆ ಈ ಬಗ್ಗೆ ಶ್ರೀಮಾನ್ ಖರ್ಗೆಯವರು ಹಾಗೂ ಅವರ ತಂಡದವರು ಪ್ರವಾಸ ಮಾಡಿ ಏನು ಒಂದು ವರದಿಯನ್ನು ಕೊಟ್ಟಿದ್ದಾರೆ ಅದನ್ನು ನೋಡಿದರೆ ಆ ಜಿಲ್ಲೆಯಲ್ಲಿ ಬರಗಾಲ ಬರುತ್ತದೆ ಎನ್ನುವ ಸೂಚನೆ ಕಂಡು ಕೂಡಲೇ ತಕ್ಕಪರಿಹಾರವನ್ನು ಒದಗಿಸಿ ಕಾರ್ಯಕ್ರಮಗಳನ್ನು ತೆಗೆದುಕೊಂಡು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗಿತ್ತು ಎನ್ನುವುದು ಗೊತ್ತಾಗುತ್ತದೆ. ಏತಕ್ಕೆಂದರೆ ನಾನು ಮೊದಲೇ ಹೇಳಿದ ಹಾಗೆ ಬರಗಾಲದಲ್ಲಿ ಬಹಳ ನೊಂದಿರತಕ್ಕಂಥಾ ಜನ ಇಲ್ಲಿ ಏನೂ ಕೆಲಸಗಳು ಸಿಗವೇ? ಗೋವಾಕ್ಕೋ, ಮಹಾರಾಷ್ಟ್ರಕ್ಕೋ ಅಥವಾ ಬೇರೆ ರಾಜ್ಯಗಳಿಗೋ ವಲಸೆ ಹೋಗುತ್ತಾರೆ ಅನ್ನುವುದರ ಬಗ್ಗೆ ಅವರೂ

ಸಹ ಗಮನಕ್ಕೆ ತಂದಿದ್ದಾರೆ. ಬರಗಾಲ ಪ್ರಾರಂಭವಾದಾಗಲೇ ಆ ಜನರಿಗೆ ಸರಿಯಾಗಿ ಉದ್ಯೋಗವನ್ನು ಕೊಡಬೇಕಾಗಿತ್ತು, ಇದರಿಂದ ೯ ಜನ ತುತ್ತಾಗಿದ್ದಾರೆ. ಈ ವಿಚಾರದಲ್ಲಿ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಹಿಂದೆ ಸ್ಕೇರ್ಸಿಟಿ ಮೀಟಿಂಗಿಗೆ ನಾವು ಹೋಗಿ ಈ ಬಗ್ಗೆ ಎಷ್ಟೋ ಠರಾವು ಮಾಡಿದ್ದೇವೆ. ಅವೆಲ್ಲವೂ ಪೆಂಡಿಂಗ್‌ನಲ್ಲಿ ಇರುತ್ತದೆ. ನಾವು ೧೫ ದಿವಸಕೊಮ್ಮೆ ಮೀಟಿಂಗ್ ಮಾಡಿ ಏನೇನು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಠರಾವು ಮಾಡಿದ್ದೆವೋ ಆ ಬಗ್ಗೆ ಮುಂದಿನ ಮೀಟಿಂಗ್‌ನಲ್ಲಿ ಏತಕ್ಕಾಗಿ ಈ ಕೆಲಸಗಳನ್ನು ತೆಗೆದುಕೊಳ್ಳಲಿಲ್ಲವೆಂದು ಕೇಳಿದಾಗ ನಮ್ಮ ಹತ್ತಿರ ಹಣ ಇಲ್ಲ ಎನ್ನುವ ಉತ್ತರ ಬಂತು. ನಾವು ಸುಮಾರು ೨೦ ಮೀಟಿಂಗ್ ಮಾಡಿದ್ದೇವೆ. ಇದೇ ಉತ್ತರ. ಹೀಗಾದರೆ ಸ್ಕೇರ್ಸಿಟಿ ಮೀಟಿಂಗ್ ಅನ್ನು ಮಾಡಬೇಕಾದ ಅವಶ್ಯಕತೆ ಏನು ಇದೆ ? ನಾವು ಈ ರೀತಿಯಾಗಿ ಠರಾವು ಮಾಡಿ ಮುಂದಿನ ಸಭೆಯಲ್ಲಿ ಹೋದಾಗ ಯಾವುದಾದರೂ ಕೆಲಸಗಳನ್ನು ಪ್ರಾರಂಭ ಮಾಡಿದ್ದರೆ ಒಂದೇ ರೀತಿಯಾಗಿ ಸಮಾಧಾನವಾಗುತ್ತದೆ, ಹಣ ಇಲ್ಲ ಆದ್ದರಿಂದ ಆ ಕೆಲಸ ಮಾಡಲಿಲ್ಲ ಎಂದರೆ ಈ ಮೀಟಿಂಗ್ ಆದರೂ ಮಾಡುವ ಅವಶ್ಯಕತೆ ಏನು ಇದೆ ? ಇನ್ನೊಂದು ವಿಷಯ. ಏನೆಂದರೆ Stripulated works will be Continued ಎಂದು ಸರ್ಕಾರದಿಂದ ಆದೇಶ ಹೋಗಿದೆಯಂತೆ ಕನ್‌ಸ್ಟ್ರಕ್ಷನ್ ಕೆಲಸವನ್ನು ಮುಂದುವರಿಸಬೇಕು ಎಂದು ಹೇಳಿದರೆ ಈ ಭೀಕರ ಬರಗಾಲ ಪರಿಸ್ಥಿತಿಯಲ್ಲೂ ಕೂಡ ಈ ಕನ್‌ಸ್ಟ್ರಕ್ಷನ್ ಕೆಲಸವನ್ನು ಮುಂದುವರಿಸಿಕೊಂಡು ಹೋದರೆ ಅಗ್ರಿಕಲ್ಚರಲ್ ಲೇಬರರ್ಸ್ ಗತಿ ಏನಾಗಬೇಕು ? ಈ ಭೀಕರ ಬರಗಾಲ ಪರಿಸ್ಥಿತಿಯಲ್ಲಿ ಪೆಂಡಿಂಗ್ ಕೆಲಸ, ಕೆರೆ ಹೂಳು ತೆಗೆಯತಕ್ಕಂಥಾ ಕೆಲಸ ಪಕ್ಕಲುತನಕ್ಕೆ ಬೇಕಾದಂಥಾ ಕಾಮಗಾರಿ ಕೆಲಸಗಳನ್ನು ಕೈಗೆತ್ತಿಕೊಂಡು ಮಾಡದೇ ಹೋದರೆ ಅಗ್ರಿಕಲ್ಚರಲ್ ಲೇಬರ್ಸ್ ಗತಿ ಏನಾಗಬೇಕು ? ಭೀಕರ ಬರಗಾಲದ ಸೂಚನೆಗಳನ್ನು ಕಂಡ ತಕ್ಷಣ ಕನ್‌ಸ್ಟ್ರಕ್ಷನ್ ವರ್ಕ್ಸ್ ಅನ್ನು ಸ್ಟಾಪ್ ಮಾಡಿ ಅನ್ನ ಕೊಡತಕ್ಕಂಥಾ ಉದ್ಯೋಗಗಳನ್ನು ಒದಗಿಸಿ ಕೊಡಬೇಕಾಗಿತ್ತು. ನಾನು ಇಲ್ಲಿ ಸೆಷನ್ ನಡೆಯುತ್ತಾ ಇದ್ದುದರಿಂದ ೨-೩ ಮೀಟಿಂಗ್‌ಗೆ ಹೋಗಲಿಲ್ಲ. ಹಿಂದಿನ ಮೀಟಿಂಗ್‌ನಲ್ಲಿ ಯಾವ ಕೆಲಸವನ್ನು ಕೈಗೊಳ್ಳಬೇಕು ಎಂದು ಹೇಳಿರುತ್ತೇವೆಯೋ ಆ ಕೆಲಸಗಳನ್ನು ಹಣ ಬಂದ ತಕ್ಷಣ ಕೈಗೆತ್ತಿಕೊಂಡರೆ ಅನುಕೂಲವಾಗುತ್ತದೆ. ಕೂಲಿಗಾರರಿಗೆ ಕೆಲಸ ಕೊಡುವುದು ಬಹಳ ಮುಖ್ಯ. ಮಾನ್ಯ ಅಧ್ಯಕ್ಷರೇ, ಈ ಭೀಕರ ಬರಗಾಲನ್ನು ಎದುರಿಸತಕ್ಕಂಥಾ ಸಮಯದಲ್ಲಿ ತಾವು ಕೂಡಲೇ ಕೇಂದ್ರ ಸರ್ಕಾರದ ಮನವೊಲಿಸಿ ಅವರಿಂದ ಹಣ ತೆಗೆದುಕೊಳ್ಳುವ ಹಾಗೆ ಮನಸ್ಸು ಮಾಡಬೇಕೆಂದು ನಾನು ಮನವರಿಕೆ ಮಾಡಿಕೊಳ್ಳುತ್ತೇನೆ. ಅಥವಾ ಅದುವರೆವಿಗಾದರೂ ನಿಮ್ಮ ಪ್ರಭಾವ ಬೀರಿ ಬೇರೆ ಎಲ್ಲಿಂದಲಾದರೂ ಹಣ ತಂದು ಅಥವಾ ಬೇರೆ ಯಾವುದಾದರೂ ಹಣ ಇದ್ದರೆ ಅದನ್ನಾದರೂ ವಿನಿಯೋಗ ಮಾಡಿ ಈವೊತ್ತಿನ ದಿವಸ ಬಿಜಾಪುರ ಜಿಲ್ಲೆಯಲ್ಲಿರತಕ್ಕಂಥ ಭೀಕರ ಬರಗಾಲವನ್ನು ಎದುರಿಸಲಿಕ್ಕೆ ತಾವು ಸಮರೋಪಾದಿಯಲ್ಲಿ ಕೆಲಸ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈವಾಗೇನಾದರೂ ಅಲ್ಲಿ ಅಲ್ಪ ಸ್ವಲ್ಪ ಮಳೆಯಾಗಿರಬಹುದು. ಮಳೆಯಾದ ಮಾತ್ರಕ್ಕೆ ಆ ಮಳೆ ಅದಕ್ಕೆ ಪರಿಹಾರವಲ್ಲ. ಮಳೆ ಆದ ಕೂಡಲೇ ಬೆಳೆ ತಕ್ಷಣ ಬರುವುದಿಲ್ಲ. ಬೆಳೆ ಬರುವುದಕ್ಕೆ ೪-೫ ತಿಂಗಳಾಗುತ್ತದೆ. ಅಲ್ಲಿಯವರೆಗೆ ತಾವು ಬರಗಾಲ ಪರಿಹಾರ ಕಾರ್ಯಕ್ರಮಗಳನ್ನು ಹೆಚ್ಚಿನ ರೀತಿಯಲ್ಲಿ ಮಾಡಿ ಈ ಕೆಲಸವನ್ನು ಮುಂದುವರಿಸಿದ್ದೇ ಆದರೆ ಆ ಜಿಲ್ಲೆಯ ಜನಗಳ ಸಮಸ್ಯೆ ಬಗೆ ಹರಿಸಿದಂತೆ ಆದೀತು ಎಂದು ಸ್ಪಷ್ಟಪಡಿಸುತ್ತೇನೆ ಯಾವ್ಯಾವ ಜಿಲ್ಲೆಯಲ್ಲಿ ಈ ಭೀಕರ ಬರಗಾಲ ಬಂದಿದೆಯೋ ಅಲ್ಲಿ ಶಾಶ್ವತ ಬರಗಾಲ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡು ಅದು ದೂರವಾಗುವ ಹಾಗೆ ಮಾಡಬೇಕೆಂದು ಹೇಳುತ್ತೇನೆ. ೫ ನದಿಗಳು ಹರಿಯುವ ಹಾಗೆ ನಮ್ಮಲ್ಲೂ ೫ ನದಿಗಳು ಹರಿಯುತ್ತವೆ. ೫ ನದಿಗಳು ಹರಿದರೂ ಸಹ ಆ ನೀರನ್ನು ಉಪಯೋಗಿಸಿಕೊಳ್ಳುವ ಹಾಗೆ ಪರಿಣಾಮಕಾರಿಯಾದ ವ್ಯವಸ್ಥೆ ಮಾಡಲಿಲ್ಲ. ಮಹಾರಾಷ್ಟ್ರದಲ್ಲಿ ನೀರಾವರಿ ಯೋಜನೆಗಳನ್ನು ಕೈಗೊಂಡು ಅವರು ಆ ನೀರನ್ನು ಬಳಕೆ ಮಾಡಿಕೊಂಡಿದ್ದಾರೆ. ಈ ಒಂದು ದೃಷ್ಟಿಯಿಂದ ನಾನು ಹೇಳುವುದು ಈವೊತ್ತು ನಮ್ಮ ರಾಜ್ಯದಲ್ಲಿ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಏನು ಕಟ್ಟುವುದಕ್ಕೆ ಯೋಜನೆಗಳನ್ನು ಹಾಕಿಕೊಂಡಿದ್ದೀರೋ ಅದರ ಬದಲು ಸಣ್ಣ ಸಣ್ಣ ನೀರಾವರಿ ಯೋಜನೆಗಳ ಕೆಲಸಗಳನ್ನು ತೆಗೆದುಕೊಂಡರೆ ೨-೩-೪ ವರ್ಷದಲ್ಲಿ ಆ ಜನಗಳಿಗೆ ಬಹಳ ಅನುಕೂಲವಾಗುತ್ತದೆ. ನನ್ನ ಕ್ಷೇತ್ರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರವಾಸಕ್ಕೆ ಬಂದಿದ್ದಾಗ ನಾನು ಅವರ ಗಮನಕ್ಕೆ ತಂದಿದ್ದೇನೆ. ಸಣ್ಣ ಪ್ರಮಾಣದ ಯೋಜನೆಗಳನ್ನು ಅಂದರೆ ೧೬-೧೭-೨೦ ಲಕ್ಷರೂಪಾಯಿಯ ಯೋಜನೆಗಳನ್ನು ಈ ವರ್ಷ ಮಾಡಿದರೆ ಈ ಭಾಗದ ಜನಗಳಿಗೆ ಅನುಕೂಲವಾಗುತ್ತದೆ, ಅದನ್ನು ಮಾಡಬೇಕು ಎಂದು ಹೇಳಿದಾಗ ಮುಂದಿನ ವರ್ಷ ನೋಡೋಣ ಎಂದರು. ಅದರಿಂದ ನನಗೆ ಸಮಾಧಾನಕರವಾಗಲಿಲ್ಲ. ಮುಂದಿನ ವರ್ಷವಾದರೂ ಈ ಕೆಲಸಗಳನ್ನು ಮಾಡುತ್ತಾರೆ ಎನ್ನುವ ಆಸೆ ನಾನು ಮಾಡುತ್ತೇನೆ. ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿದರೆ ಖಂಡಿತವಾಗಿಯೂ ಶಾಶ್ವತವಾದರೂ ಪರಿಹಾರ ಒದಗಿಸಿಕೊಟ್ಟಂತಾಗುತ್ತದೆ ಎಂದು ಹೇಳುತ್ತೇನೆ. ದೊಡ್ಡ ದೊಡ್ಡ

ಯೋಜನೆಗಳನ್ನು ಮಾಡಬೇಕಾದರೆ ಅದು ಪ್ಲಾನಿಂಗ್ ಕಮೀಷನ್ ಮತ್ತು ಸೆಂಟ್ರಲ್‌ವಾಟರ್ ಬೋರ್ಡ್ ಈ ಒಂದು ವ್ಯಾಪ್ತಿಯಲ್ಲಿ ಬರುತ್ತದೆ. ಆದುದರಿಂದ ನಾನು ಮೊದಲೇ ಹೇಳಿದ ಹಾಗೆ ೧೫–೨೦–೩೦ ಲಕ್ಷ ರೂಪಾಯಿಗಳಲ್ಲಿ ಆಗುವ ನಿಮ್ಮ ವ್ಯಾಪ್ತಿಯಲ್ಲೇ ಬರುವ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು ಕಾರ್ಯಗತ ಮಾಡಿದರೆ ಶಾಶ್ವತವಾದ ಪರಿಹಾರವಾಗುವುದಲ್ಲದೆ ಅದರಿಂದ ಸಫಲವಾಗುತ್ತದೆ. ಹಾಗೆಯೇ ಮುಳವಾಡ ಏತ ನೀರಾವರಿ ಯೋಜನೆಯನ್ನು ಸರ್ಕಾರ ಕೈಗೊಂಡರೆ ಅರ್ಧದಷ್ಟು ಆ ಜನರಿಗೆ ಪರಿಹಾರವಾಗುತ್ತದೆ, ಈ ವರದಿ ಕೊಟ್ಟಿರುವ ಶ್ರೀ ಮಲ್ಲಿಕಾರ್ಜುನಖರ್ಗೆ ಯವರು ಈ ಬರಗಾಲ ಪ್ರದೇಶದಲ್ಲಿ ೬ ತಿಂಗಳು ಕೆಲಸ ತೆಗೆದುಕೊಳ್ಳುವುದಕ್ಕೆ ೫ ಕೋಟಿ ರೂಪಾಯಿ ಖರ್ಚು ಮಾಡಬೇಕೆಂಬ ಒಂದು ಸೂಚನೆ ಕೊಟ್ಟಿದ್ದಾರೆ, ಅವರ ಸೂಚನೆಯಂತೆ ಸರ್ಕಾರ ೫ ಕೋಟಿ ರೂಪಾಯಿಯನ್ನು ಕೂಡಲೇ ಬಿಡುಗಡೆ ಮಾಡಿ ಬರಗಾಲ ಪರಿಹಾರ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ಕೆಲಸಕ್ಕೆ ಸರಿಯಾದ ಸಿಬ್ಬಂದಿ ಕೊಟ್ಟು ಸಮರದೋಪಾದಿಯಲ್ಲಿ ಕೆಲಸ ಮಾಡದೇ ಹೋದರೆ ಈ ಬರಗಾಲವನ್ನು ಎದುರಿಸುವುದು ಕಷ್ಟ ಆದೀತು. ಆದುದರಿಂದ ಇದರ ಬಗ್ಗೆ ಗಮನಹರಿಸಿ ಅವರು ಏನು ಸೂಚನೆ ಹೇಳಿದ್ದಾರೆ ಅದರಂತೆ ಮಾಡಬೇಕು ಜೊತೆಗೆ ಸಣ್ಣ ಸಣ್ಣ ನೀರಾವರಿ ಯೋಜನೆಗಳ ಕೆಲಸಗಳನ್ನೂ ತೆಗೆದುಕೊಳ್ಳಬೇಕು. ಇದರ ಜೊತೆಗೆ ೫ ಕೋಟಿ ಬಿಡುಗಡೆ ಮಾಡಬೇಕೆಂದು ಸಮಿತಿಯವರು ಏನು ಸೂಚನೆ ಮಾಡಿದ್ದಾರೋ ಆ ದುಡ್ಡನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಮಂತ್ರಿಗಳಾದ ಶ್ರೀ ಎಸ್.ಆರ್. ಬೊಮ್ಮಾಯಿಯವರಿಗೆ ತಮ್ಮ ಮುಖಾಂತರ ವಿನಂತಿ ಮಾಡಿಕೊಂಡು, ನನಗೆ ಮಾತನಾಡಲು ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್.ಎಸ್. ಖೇಡ್(ಇಂಡಿ).—ಮಾನ್ಯ ಅಧ್ಯಕ್ಷರೆ, ಈ ಸಮಯದವರೆಗೆ ಸಾಕಷ್ಟು ಹಿರಿಯ ಸದಸ್ಯರು, ಅನುಭವಿಗಳು ಬರಗಾಲ ಮತ್ತು ಅದರ ನಿವಾರಣೆಗೆ ಮುಂಜಾಗ್ರತೆ ವಹಿಸತಕ್ಕ ಕಾರ್ಯಕ್ರಮಗಳ ಬಗ್ಗೆ ಸೂಚನೆಯನ್ನು, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೆ ತಾವು ನೇಮಿಸಿದಂಥ ಸಮಿತಿಯೂ ಕೂಡ ಒಳ್ಳೆಯ ರಿಪೋರ್ಟನ್ನು ಒಪ್ಪಿಸಿದೆ. ಅದರಲ್ಲಿ ಜಿಲ್ಲಾವಾರು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸೂಚಿಸಿದ್ದಾರೆ. ನಮ್ಮ ಜಿಲ್ಲೆಯ ವಿಷಯವಾಗಿ ಎರಡು, ಮೂರು ಜನ ಹಿರಿಯ ಶಾಸಕರು ಮಾತನಾಡಿದ್ದಾರೆ. ನಮ್ಮ ಮಿತ್ರ ಶಾಸಕರಾದ ಶ್ರೀ ನಂಜಯ್ಯನಮಠ ಅವರು ಹೇಳಿದಂತೆ ಕೇವಲ ಬರಗಾಲ ಬಂದಾಗ ನೆನೆಸಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಕೇವಲ ಕೂಲಿಗಾರರಿಗೆ ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಹೊಟ್ಟೆಗೆ ಒಂದು ತೊರೆಯಾಗಿ ಖರ್ಚು ಮಾಡುವುದಕ್ಕಿಂತ ಬರಗಾಲವನ್ನು ಹೋಗಲಾಡಿಸುವಂಥ ಯೋಜನೆಯನ್ನು ಹಮ್ಮಿಕೊಂಡು ಕೂಲಿ, ಕೆಲಸ ಮತ್ತು ಅನ್ನ ಸಿಗುವ ಯೋಜನೆ ಮಾಡಿ, ಆಯಾ ತಾಲ್ಲೂಕುಗಳನ್ನು ಯೋಜನೆಗಳ ಕೆಳಗೆ ಅಳವಡಿಸಿ, ಅವುಗಳಿಗೆ ಹಣವನ್ನು ಖರ್ಚು ಮಾಡಿದರೆ ಹೆಚ್ಚು ಫಲಪ್ರದವಾಗುತ್ತದೆ ಎಂದು ಹೇಳುತ್ತೇನೆ ಇವತ್ತಿನ ದಿವಸ ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವಾಗ ಮಾನ್ಯ ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಕೂಡ ಇದ್ದಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ನಮ್ಮ ಜಿಲ್ಲೆಯಲ್ಲಿ ಡಿಪಿಎಪಿ, ಐಆರ್‌ಡಿಪಿ, ಎನ್‌ಆರ್‌ಇಪಿ ಯಂಥ ಉತ್ತಮ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಕಷ್ಟು ಸ್ಕೋಪ್ ಇದೆ. ಕರ್ನಾಟಕ ಲ್ಯಾಂಡ್ ಆರ್ಮಿ ಕಾರ್ಪೋರೇಷನ್ ಕೂಡ ಹಿಂದೆ ಒಳ್ಳೆಯ ಕೆಲಸಗಳನ್ನು ಮಾಡಿ, ಒಳ್ಳೆಯ ಕೆಲಸಗಳನ್ನು ಕೊಟ್ಟು ಹಳ್ಳಿಯ ಜನರನ್ನು ಆ ಕಾರ್ಯಕ್ರಮಗಳಲ್ಲಿ ಅಳವಡಿಸಿದ್ದು ಇದೆ. ಬಹುಶಃ ಪ್ರಾಸರ್ ಬಿಜಾಪುರದಲ್ಲಿ ಮನೆ ಕಟ್ಟುವ ಕೆಲಸ ಬಿಟ್ಟರೆ ಜನಗಳಿಗೆ ಕೆಲಸವನ್ನು ಒದಗಿಸುವ ಯಾವ ಕೆಲಸವನ್ನೂ ಕೊಟ್ಟಿಲ್ಲ. ಜಿಲ್ಲಾ ಕಮಿಟಿಯ ಸಭೆ ಕರೆದಾಗ ಇದನ್ನು ತಿಳಿಸಿದ್ದೇನೆ. ಅದನ್ನು ಇಲ್ಲಿ ನಮೂದಿಸಿಲ್ಲ. ಇದರ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಕೆಲಸ ಹಮ್ಮಿಕೊಂಡು ಮಾಡುವುದಿದೆ, ವರ್ಲ್ಡ್ ಬ್ಯಾಂಕ್ ಆದೇಶ ಇದೆ, ಅದನ್ನು ಮಾಡಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಇನ್ನು ಡ್ರಿಂಕಿಂಗ್ ವಾಟರ್ ಸಲುವಾಗಿ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಪದೇ ಪದೇ ಬರಗಾಲ ಬೀಳುತ್ತಿದೆ. ನಮ್ಮ ಸರ್ಕಾರವಾಗಲಿ, ಹಿಂದೆ ಇದ್ದಂಥ ಯಾವುದೇ ಸರ್ಕಾರದ ಪ್ರೇರಣೆಯೊಂದಿಗೆ ಸಾಕಷ್ಟು ಬೋರ್‌ವೆಲ್ ಆಗಿದೆ. ಆದರೆ ಅವಕ್ಕೆ ಹಾಕತಕ್ಕಂಥ ಕೇಸಿಂಗ್ ಕೆಳಮಟ್ಟದ ಕ್ವಾಲಿಟಿಯದ್ದಾಗಿರುವುದರಿಂದ ಪದೇ ಪದೇ ಕೆಟ್ಟು ರಿಪೇರಿಗೆ ಬರುವುದಕ್ಕೆ ಅವಕಾಶವಾಗಿದೆ. ಕೆಲವು ಕಡೆ ಹ್ಯಾಂಡ್ ಪಂಪ್ಸ್, ಸಬ್‌ಮರ್ಸಿಬಲ್ ಪಂಪ್ಸ್ ಕೆಟ್ಟು ಹೋಗಿ, ಅದು ಒಳಗಡೆ ಬಿದ್ದರೆ ತಿರಿಗಿ ೨೫–೩೦ ಸಾವಿರ ಖರ್ಚು ಮಾಡುವಂಥ ಪರಿಸ್ಥಿತಿ ಇದೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಈಗಾಗಲೇ ೧೪೯೯ ಬೋರ್‌ವೆಲ್ಸ್ ಕೆಟ್ಟಿವೆ ಎಂದು ರಿಪೋರ್ಟ್‌ನಲ್ಲಿರಬಹುದು, ಇದಕ್ಕಿಂತ ಹೆಚ್ಚು ಕೆಟ್ಟಿದೆ ಎಂದು ನಮ್ಮ ಸಮೀಕ್ಷೆಯಿಂದ ಗೊತ್ತಾಗಿದೆ. ಅದನ್ನು ಸುವ್ಯವಸ್ಥಿತವಾಗಿಡಲು ಮ್ಯಾನೇಜ್‌ಮೆಂಟ್‌ಗೆ ಕೊಟ್ಟು ಬೋರ್‌ವೆಲ್ಸ್ ನಮ್ಮ ಸಂಪತ್ತು, ಆಸ್ತಿ ಎಂದು ತಿಳಿದುಕೊಂಡು ಅದಕ್ಕೆ ಪಕ್ಕ ಯೋಜನೆ ಅಳವಡಿಸಬೇಕು ಎಂದು ಕೇಳಿಕೊಳ್ಳುತ್ತಾ ಇದ್ದೇನೆ. ಇನ್ನು ಬರಗಾಲದ ಬವಣೆಯನ್ನು ತಪ್ಪಿಸುವ ಸಲುವಾಗಿ ಬಿಜಾಪುರ ಜಿಲ್ಲೆಯಲ್ಲಿ ಅಫೋರ್‌ಸ್ಟೇಷನ್ ಮತ್ತು ಫಾರೆಸ್ಟ್ ಡೆವಲಪ್‌ಮೆಂಟ್, ಸಾಯಿಲ್ ಕನ್ಸರ್ವೇಷನ್, ವಾಟರ್ ಮ್ಯಾನೇಜ್‌ಮೆಂಟ್ ಮುಂತಾದ ಉತ್ತಮವಾದ ಯೋಜನೆಗಳಿವೆ, ಕೃಷಿ ಇಲಾಖೆಯಾಗಲಿ, ರೆವಿನ್ಯೂ ಡಿಪಾರ್ಟ್‌ಮೆಂಟ್ ಆಗಲಿ ಮತ್ತು ರೂರಲ್ ಡಿಪಾರ್ಟ್‌ಮೆಂಟ್ ಆಗಲಿ ಒಂದಕ್ಕೊಂಡು ಹೊಂದಿಕೊಂಡು ಈ ಕೆಲಸಗಳನ್ನು ಮಾಡಬೇಕು. ವಾಟರ್ ಷೆಡ್ ಏರಿಯ ೨೫ ಸಾವಿರ ಎಕರೆ ತೆಗೆದುಕೊಂಡಿದ್ದಾರೆ, ಅದು ಬಹಳ ಉತ್ತಮವಾದಂಥ ಸ್ಕೀಂ. ಮಾನ್ಯ ಅಗ್ರಿಕಲ್ಚರ್ ಮಿನಿಸ್ಟರ್ ಹೇಳಿದಂತೆ ಒಳ್ಳೆಯ ಸ್ಕೀಂಗಳನ್ನು ತೆಗೆದುಕೊಂಡಿದ್ದಾರೆ, ಒಳ್ಳೆಯ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಬರತಕ್ಕಂಥ ನಮ್ಮ ಬರಗಾಲದ ಹಣದಲ್ಲಿ ಇಂತಹ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ ಅವರಿಗೆ ಕೆಲಸ ಕೊಟ್ಟ ಹಾಗೆ ಆಗುತ್ತದೆ, ನಮ್ಮ ಜಿಲ್ಲೆಯ ಬರಗಾಲ ಪರಿಸ್ಥಿತಿ ಕಡಿಮೆ ಮಾಡಿದ ಹಾಗೆ ಆಗುತ್ತದೆ. ಅಲ್ಲಿ ಅಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇದಲ್ಲದೆ, ಮಾನ್ಯ ರೆವಿನ್ಯೂ ಮಂತ್ರಿಗಳಿದ್ದಾರೆ, ಆಣೆವಾರಿ ಪದ್ಧತಿ ಇದೆ. ನಮ್ಮ ಬೆಳೆಗಳನ್ನು ಸೂಚನೆ ಮಾಡತಕ್ಕಂಥ ಪಟ್ಟಿ ಮಾಡಿ ಯಾವರೀತಿಯಾಗಿ ಸ್ಕೇರ್ಸಿಟಿ ಇದೆ ಎಂದು ತಿಳಿದುಕೊಳ್ಳುವುದಕ್ಕೆ ಆಣೆವಾರಿ ಪದ್ಧತಿ ಇದೆ. ಆ ಪದ್ಧತಿ ಬಹುತೇಕ, ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಎಲ್ಲೋ ಅಧಿಕಾರಿಗಳು ಕುಳಿತುಕೊಂಡು ಮಾಡುವಂಥ ಕೆಲಸ ಎಂದು ತಮ್ಮ ನಜರಿಗೆ ತರುತ್ತಿದ್ದೇನೆ. ಅಂಥವೇಲೆ ಅದಕ್ಕೆ ಒಂದು ಸಿಸ್ಟಮ್ಯಾಟಿಕ್ ಆಗಿ ತರುವುದಕ್ಕೆ ಪ್ರಯತ್ನ ಮಾಡಿದರೆ ನಿಜವಾಗಿಯೂ ರೈತರಿಗೆ ಎಲ್ಲೆಲ್ಲಿ ಬರಗಾಲವಿದೆ, ಕಷ್ಟನಷ್ಟವನ್ನು ಅನುಭವಿಸುತ್ತಿದ್ದಾರೆ ಅವರಿಗೆ ಪರಿಹಾರ ಕೊಡುವ ರೀತಿಯಲ್ಲಿ ಒಳ್ಳೆಯ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ ಇನ್ನು ಬರಗಾಲ ಪ್ರದೇಶದಲ್ಲಿ ಕಬ್ಬು, ಬಾಳೆ ಮುಂತಾದ ಬೆಳೆಗಳನ್ನು ಬೆಳೆಯುವ ಕಡೆ ಸಾಕಷ್ಟು ಮಳೆ ಇಲ್ಲದೆ, ಬಾವಿಯಿಂದ ನೀರಾವರಿಯಾಗತಕ್ಕ ಪ್ರದೇಶಗಳಲ್ಲಿ ಬಾವಿ ಒಣಗಿ, ಫಸಲೂ ಕೂಡ ಒಣಗಿ ಹೋಗಿದೆ. ಬಿಜಾಪುರ ಜಿಲ್ಲೆ ಬಹಳಷ್ಟು ಬರಗಾಲದ ನಾಡು, ಅಲ್ಲಿ ಕಲ್ಲು ಮುಳ್ಳು ಇರಬಹುದು ಎಂದು ನನಗನ್ನಿಸುತ್ತದೆ. ಇಡೀ ರಾಜ್ಯದಲ್ಲಿ ಹಾರ್ಟಿಕಲ್ಚರ್ ಕ್ರಾಪ್ಸ್ ಆದರ್ಶವಾದಂಥ ಬೆಳೆಗಳು. ಮಹಾರಾಷ್ಟ್ರದಲ್ಲಿ ಹಣ್ಣುಹಂಪಲುಗಳನ್ನು ರೈತರು ಬೆಳೆದು ರಾಷ್ಟ್ರ ಪ್ರಶಸ್ತಿ ಪಡೆದಿದ್ದಾರೆ. ಅಲ್ಲಿ ಲಿಫ್ಟ್ ಇರಿಗೇಷನ್ ಮಾಡಿ, ಸ್ಕೀಮುಗಳನ್ನು ಮಾಡಿ ಕೋಟ್ಯಾಂತರ ರೂಪಾಯಿ ಕೊಡುತ್ತಾರೆ. ಅಂತಹ ಯೋಜನೆಗಳನ್ನು ಅಳವಡಿಸಿ ನಮ್ಮ ಬರಗಾಲ ಪ್ರದೇಶಗಳ ಜನತೆಗೆ ಸಣ್ಣ ರೈತರಿಗೆ ಅನುಕೂಲವಾಗುವಂತೆ ಮಾಡಬೇಕು. ಇಷ್ಟೇ ಅಲ್ಲದೆ ನಮ್ಮ ಜಿಲ್ಲೆಯಿಂದ ಆಹಾರಧಾನ್ಯಗಳು, ಫಾಡರ್ ಹೊರಗೆ ಹೋಗದಂತೆ ನಮ್ಮ ಜಿಲ್ಲೆಯಲ್ಲೇ ಉಳಿದುಕೊಳ್ಳುವಂತೆ ಪೋಲೀಸ್ ಸಿಬ್ಬಂದಿಯನ್ನಾಗಲಿ, ಫುಡ್‌ಸೆಲ್ ಆಗಲಿ ತೀವ್ರವಾಗಿ ವ್ಯವಸ್ಥೆ ಮಾಡಬೇಕು. ಈಗ ಸಣ್ಣ ಮಳೆಯಾಗಿದೆ. ಇದು ಒಂದು ಬೆಳೆ ಪೂರ್ಣವಾಗುವವರೆಗೆ ಬರುತ್ತದೆ ಎನ್ನುವ ಭರವಸೆ ಇಲ್ಲ. ಮುಂದಿನ ಸೀಸನ್‌ನಲ್ಲಿ ಅಂದರೆ ೬ ತಿಂಗಳಲ್ಲಿ ಕೆಲಸ, ಆಹಾರ ಮತ್ತು ಒಂದು ವ್ಯವಸ್ಥೆ—ಇವನ್ನು ಒಂದು ಸಿಸ್ಟಮ್ಯಾಟಿಕ್ ಮ್ಯಾನರ್‌ನಿಂದ ಮಾಡಬೇಕು. ಅಧಿಕಾರಿಗಳಿಂದ ಯಾವರೀತಿ ಆಗಬೇಕು ಎಂದು ಸೂಪರ್‌ವಿಷನ್ ಆಗಬೇಕು. ಒಳ್ಳೆಯ ಕೆಲಸಗಳು ನಡೆಯಬೇಕು. ಜನತೆಯ ಬರಗಾಲದ ಬವಣೆಗೆ ಪರಿಹಾರ ಸಿಗಬೇಕು ಎಂದು ಸೂಚನೆ ಕೊಟ್ಟು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

೨-೩೦ ಪಿ. ಎಂ.

ಅಧ್ಯಕ್ಷರು.—ಈಗ ಕೃಷ್ಣನ್‌ರವರು ಮಾತನಾಡಲಿ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಮಾತನಾಡುವುದಿಲ್ಲ. ಶ್ರೀ ಭೂಪತಿಯವರು ಮಾತನಾಡುತ್ತಾರೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ......

ಶ್ರೀ ಎಸ್.ಆರ್. ಬೊಮ್ಮಾಯಿ.—ಅವರು ಕಮಿಟಿಯ ಸದಸ್ಯರಿದ್ದು, ವರದಿಯನ್ನು ಕೊಟ್ಟಿದ್ದಾರೆ. ನಾರ್ಮಲ್ ಆಗಿ ಕಮಿಟಿಯ ಸದಸ್ಯರು ಮಾತನಾಡುವ ಅವಶ್ಯಕತೆ ಇಲ್ಲ.

ಶ್ರೀ ಯು. ಭೂಪತಿ.—ಇಲ್ಲವೆಂದು ಹೇಳುವುದಿಲ್ಲ. ಎಷ್ಟೋ ಕಮಿಟಿ ರಿಪೋರ್ಟ್ ಇದೆ. ನಾನು ಆ ಸಮಿತಿಯ ಸದಸ್ಯನಾಗಿ ಹೋಗಿದ್ದು ನಿಜ. ನಾವು ಕೊಟ್ಟಂತಹ ವರದಿಯ ಬಗ್ಗೆ ಮಾತ ನಾಡುವುದಿಲ್ಲ. ಅದರ ಜವಾಬ್ದಾರಿ ನನಗೂ ಇದೆ.

ಅಧ್ಯಕ್ಷರು.—ನೀವು ಕಮಿಟಿಯಲ್ಲಿ ಇದ್ದಮೇಲೆ, ರಿಪೋರ್ಟ್ ಕೊಟ್ಟಮೇಲೆ, ಮಾತನಾಡುವುದು ಸರಿಯಲ್ಲ. ಬೇರೆಯವರು ಮಾತನಾಡಲು ಅವಕಾಶ ಕೊಡೋಣ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಹೇಳುವುದು ನ್ಯಾಯ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ನಾನು ತಮ್ಮನ್ನು ಕೇಳುವುದು ಇಷ್ಟೇ. ನಾನು ಬರಗಾಲ ಪೀಡಿತ ಜಿಲ್ಲೆಯಿಂದ ಬಂದವನಲ್ಲ, ನಾನು ಮಾತನಾಡುವುದು ಸರಿಯಾಗುದಿಲ್ಲ. ಆದುದರಿಂದ ನಮ್ಮ ಪಕ್ಷದ ವತಿಯಿಂದ ಮಾನ್ಯ ಭೂಪತಿ ಯವರು ಮಾತನಾಡುತ್ತಾರೆ.

ಅಧ್ಯಕ್ಷರು.—ನೀವು ರಿಪೋರ್ಟ್ ಕೊಟ್ಟಿರುವಾಗ ಮಾತನಾಡುವುದು ಸರಿಯಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಯು. ಭೂಪತಿ.—ಇನ್ನೂ ಒಬ್ಬರು ಈ ಕಮಿಟಿಯಲ್ಲಿದ್ದವರು ಮಾತನಾಡಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಐದು ನಿಮಿಷದಲ್ಲಿ ಏನೂ ತೊಂದರೆಯಾಗುವುದಿಲ್ಲ.

ಶ್ರೀ ಎಂ.ಎಸ್. ಪಾಟೀಲ್.—ಇನ್ನೂ ಒಬ್ಬರು ಮಾತನಾಡಿದ್ದಾರೆಂದರೆ, ಅದೂ ಕೂಡ ತಪ್ಪು. ಕಮಿಟಿಯ ಸದಸ್ಯರಿದ್ದಮೇಲೆ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು.—ಮಾತನಾಡಿದ್ದು ತಪ್ಪು. ಅವರಿಗೆ ಅವಕಾಶ ಕೊಟ್ಟಿದ್ದಾಗಿತ್ತು. ಕಮಿಟಿ ಮೆಂಬರ್ ಇದ್ದಮೇಲೆ ಮಾತನಾಡುವುದು ಸರಿಯಲ್ಲ ಕಮಿಟಿ ರಿಪೋರ್ಟನ್ನು ಬೊಮ್ಮಾಯಿಯವರೂ ಅಪ್ರಿಷಿಯೇಟ್ ಮಾಡಿದ್ದಾರೆ. ಒಳ್ಳೆಯ ರಿಪೋರ್ಟನ್ನು ಕೊಟ್ಟಿದ್ದಾರೆಂದು ಕಮಿಟಿಯ ಸದಸ್ಯರನ್ನೂ ಮತ್ತು ಖರ್ಗೆಯವರನ್ನು ಎಲ್ಲರೂ ಕೂಡ ಅಪ್ರಿಷಿಯೇಟ್ ಮಾಡಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಐದು ನಿಮಿಷ ಅವಕಾಶ ಮಾಡಿಕೊಡಿ.

ಶ್ರೀ ಯು. ಭೂಪತಿ.—ಐದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ರಿಪೋರ್ಟನ್ನು ಎಲ್ಲರೂ ಅಪ್ರಿಷಿಯೇಟ್ ಮಾಡಿದ್ದಾರೆ. ಅಪ್ರಿಷಿಯೇಟ್ ಮಾಡಲಿಲ್ಲವೆಂದರೆ, ನೀವು ಮಾತನಾಡುವುದಕ್ಕೆ ಅವಕಾಶ ಇತ್ತು.

ಅಧ್ಯಕ್ಷರು.—ದಯವಿಟ್ಟು ಕೊಡಿ. ಕೃಷ್ಣನ್‌ರವರೆ ಅವರಿಗೆ ನೀವು ಹೇಳಿ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಅವರಿಗೆ ಹೇಳುವುದಕ್ಕೆ ತಯಾರಾಗಿಲ್ಲ. ಬರಗಾಲದ ಬಗ್ಗೆ ನಮ್ಮ ಪಕ್ಷದ ವತಿಯಿಂದ ಅವರು ಮಾತನಾಡಲಿ.

ಅಧ್ಯಕ್ಷರು.—ಅವರು ಕಮಿಟಿಯ ಮೆಂಬರ್ ಆಗಿ ಇರುವಾಗ ಮಾತನಾಡುವುದು ಸರಿಯಲ್ಲ. ಬೇರೆಯವರಿಗೆ ಅವಕಾಶ ಕೊಡೋಣ.

ಶ್ರೀ ಎಂ.ಎಸ್. ಕೃಷ್ಣನ್.—ಇನ್ನೂ ಒಬ್ಬ ಕಮಿಟಿ ಮೆಂಬರ್ ಮಾತನಾಡಿದ್ದಾರೆ. ಹಾಗಿರು ವಾಗ ಇವರಿಗೆ ಮಾತ್ರ ಬೇಡವೆಂದು ತಾರತಮ್ಯ ಮಾಡುವುದು ಏತಕ್ಕೆ ?

ಶ್ರೀ ಎಂ.ಎಸ್. ಪಾಟೀಲ್.—ಶ್ರೀ ಎಂ. ಎಸ್. ಕೃಷ್ಣನ್‌ರವರು ಹೇಳಿದರು, ಕಮಿಟಿಯ ಸದಸ್ಯರು ಮಾತನಾಡಿದ್ದಾರೆಂದು, ಅದೂ ಕೂಡ ತಪ್ಪೆಂದು ನಾನು ಆಗಲೇ ಹೇಳಿದೆ.

ಅಧ್ಯಕ್ಷರು.—ಕೃಷ್ಣನ್‌ರವರೇ ನೀವು ಮಾತನಾಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಕಮಿಟಿ ಮೆಂಬರ್ ಇದ್ದವರು ಮಾತನಾಡುವುದು ಸರಿಯಲ್ಲ.

ಶ್ರೀ ಯು. ಭೂಪತಿ.—ನೀವು ದಯವಿಟ್ಟು ಕುಳಿತುಕೊಳ್ಳಿ. ಆ ರಿಪೋರ್ಟ್‌ನಲ್ಲಿರುವುದನ್ನೇ ಮಾತನಾಡುವುದಕ್ಕೆ I am not a fool. ನಾನು ರಿಪೋರ್ಟಿನ ಬಗ್ಗೆ ಮಾತನಾಡುವುದಿಲ್ಲ. ಎರಡು ಮೂರು ಸಲಹೆಗಳನ್ನು ಕೊಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಸದಸ್ಯರಿಗೆ ಕೊಡಿ ಎಂದು ಹೇಳಿದರೆ ಹೇಗೆ? ಕಮಿಟಿಯ ಮೆಂಬರ್ ಆಗಿ ಈ ರೀತಿ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು.—ಅವರಿಗೆ ಕೊಡಿ, ಇವರಿಗೆ ಕೊಡಿ ಎಂದು ಹೇಳುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ದಯವಿಟ್ಟು ನೀವು ಕುಳಿತುಕೊಳ್ಳಿ. ನೀವು ಕಮಿಟಿಯ ಸದಸ್ಯರಾಗಿದ್ದು, ರಿಪೋರ್ಟ್ ಕೊಟ್ಟಿದ್ದೀರಿ. ಇನ್ನು ಬೇರೆ ಮಾತನಾಡುವ ಸದಸ್ಯರಿದ್ದಾರೆ, ಅವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಯು. ಭೂಪತಿ.—ರಿಪೋರ್ಟ್ ಬಗ್ಗೆ ಮಾತನಾಡುವುದಿಲ್ಲ. ೨-೩ ಸಲಹೆಗಳನ್ನು ಮಾತ್ರ ಕೊಡುತ್ತೇನೆ. ರಿಪೋರ್ಟ್ ಮೇಲೆ ಕಾಮೆಂಟ್ ಮಾಡುವುದಿಲ್ಲವೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಕೃಷ್ಣನ್‌ರವರೇ, ಅವರು ಹೊಸಬರು, ನೀವು ಹಳಬರಾಗಿದ್ದೀರಿ, ನೀವು ದಯವಿಟ್ಟು ಅವರಿಗೆ ಹೇಳಬೇಕು.

ಶ್ರೀ ಯು. ಭೂಪತಿ.—ಹೊಸಬರು, ಹಳಬರು ಎನ್ನುವ ಪ್ರಶ್ನೆ ಬರುವುದಿಲ್ಲ. ಜನರು ನಮ್ಮನ್ನೂ ಆರಿಸಿ ಕಳಿಸಿದ್ದಾರೆ.

Statement by the Chief Minister

Sub: Clarification reg. Land acquisition for House building Co-op Society

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಒಂದು ಸಣ್ಣ ಪ್ರಮಾದ ಆದಹಾಗ ಕಾಣುತ್ತದೆ. ಮೊನ್ನೆಯಲ್ಲಿ ಪ್ರಧಾನ ಮಂತ್ರಿಗೆ ಬರೆದಂತಹ ಪತ್ರದ ನಕಲನ್ನು ಸದನದ ಮುಂದಿಡುತ್ತೇನೆಂದು ಹೇಳಿ, ಇಡುವುದಕ್ಕೆ ಮುಂಚೆ ಮಾನ್ಯ ಸದಸ್ಯರಿಗೆ ಹಂಚಿಯಾಗಿದೆ. ಅದನ್ನು ಇಲ್ಲಿ ಇಡುತ್ತೇನೆ. ಸಣ್ಣ ಪ್ರಮಾದವಾದುದಕ್ಕಾಗಿ ಕ್ಷಮಿಸಬೇಕು. ಇವತ್ತು ಬೆಳಿಗ್ಗೆ ಪೂರಕ ಬೇಡಿಕೆ ಮೇಲೆ ಚರ್ಚೆ ಆದಾಗ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿಯ ಕರೆಕ್ಟ್ ಡೇಟ್ ಕೊಡಬೇಕೆಂದಿದ್ದೆ. ಅದು ೨೦-೪-೮೩ (೧೯೮೩). On 20-4-1983, the letter from the Government of India was received calling for information. On 28-4-1983, the D.O. letter of Hon'ble Minister for Youth Services was received. On 7-5-1983, a letter addressed to the Land Acquisition Officer to furnish the report. On 11-5-1983, the Special Land Acquisition Officer has sent his report. On 4-6-1983, the Report was sent to the Government by Special Deputy Commissioner, seeking permission for acquisition and on 6-8-1984, Government conveyed its approval for acquisition in Survey Nos. 34, 36, 37 and 38 Arehalli village in favour of Accountant General Office Co-operative Housing Society." ಸರ್ಕಾರದ ರಿಪೋರ್ಟ್ ಪ್ರಕಾರ ಇದು ಸರಿಯಾಗಿದೆ. ಇದರಲ್ಲಿ ೨೪ ಗಂಟೆಗಳ ಪ್ರಶ್ನೆ ಬರುವುದಿಲ್ಲ. ಅವರು ತಮ್ಮ ಎಫಿಷಿಯೆನ್ಸಿ ತೋರಿಸುವುದಕ್ಕೆ ಇದನ್ನು ಹೇಳಿರಬಹುದು.

ಶ್ರೀ ಯು. ಭೂಪತಿ.—ಹೊಸಬರೆಂದು ಹೇಳಿ ಅವಮಾನ ಮಾಡುವುದು ಸರಿಯಲ್ಲ.

ಅಧ್ಯಕ್ಷರು.—ಹಳಬರು ಅನುಭವಸ್ಥರಿರುತ್ತಾರೆ. ಮಾನ್ಯ ಕೃಷ್ಣನ್‌ರವರೂ ಅನುಭವಸ್ಥರಿರುತ್ತಾರೆ. ಅನುಭವಸ್ಥರಿಂದ ನಾವೂ ಕೇಳಬೇಕಾಗುತ್ತದೆ, ನೀವೂ ಕೇಳಬೇಕಾಗುತ್ತದೆ.

Discussion on Scarcity condition in the state (contd.)

ಶ್ರೀ ಚಂದ್ರಶೇಖರ ಮಾಮನಿ (ಪರಸಗಡ).— ಮಾನ್ಯ ಅಧ್ಯಕ್ಷರೆ, ಬರಗಾಲ ಸಮಿತಿಯವರು ಅಡ್ಡಾಡಿ ಪರಿಣಾಮಕಾರಿಯಾದ ವರದಿಯನ್ನು ಕೊಟ್ಟಿದ್ದಾರೆ. ಸದನ ಸಮಿತಿಯನ್ನು ನೇಮಿಸಿದ್ದಕ್ಕಾಗಿ ಮಾನ್ಯ ಕಂದಾಯ ಮಂತ್ರಿಗಳನ್ನು ನಾನು ವೈಯಕ್ತಿಕವಾಗಿ ಅಭಿನಂದಿಸಲಿಚ್ಛಿಸುತ್ತೇನೆ. ಬೆಳಗಾವಿ ಜಿಲ್ಲೆಯಲ್ಲಿ ೮ ತಾಲ್ಲೂಕುಗಳು ಭೀಕರ ಬರಗಾಲಕ್ಕೆ ತುತ್ತಾಗಿವೆಯೆಂದು ಸದನ ಸಮಿತಿಯು ಸಂಪೂರ್ಣವಾಗಿ ತನ್ನ ವರದಿಯಲ್ಲಿ ಕಾಣಿಸಿಕೊಟ್ಟಿದೆ. ಸವದತ್ತಿ ತಾಲ್ಲೂಕಿನಲ್ಲಿ ಹೋದ ವರ್ಷ ಮತ್ತು ಈ ವರ್ಷ ಮಳೆ ಬೆಳೆಗಳು ಪರಿಣಾಮಕಾರಿಯಾಗಿ ಆಗಿಲ್ಲವೆಂದು ರಿಪೋರ್ಟನ್ನು ಈಗಾಗಲೇ ಅಂದರೆ, ಇವತ್ತು ಮುಂಜಾನೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಕಂದಾಯ ಮಂತ್ರಿಗಳಿಗೆ ಬರಗಾಲಕ್ಕೆ ತುತ್ತಾಗಿ ಬೆಳೆಗಳಿಗೆ ಆದ ಹಾನಿಯ ಫೋಟೊಗಳನ್ನು ಸಹ ಒಪ್ಪಿಸಿದ್ದೇನೆ. ಮಳೆಯ ಪ್ರಮಾಣವನ್ನು ಹೋದವರ್ಷಕ್ಕೂ ಈ ವರ್ಷಕ್ಕೂ ನೋಡಿದರೆ, ನಮ್ಮ ತಾಲ್ಲೂಕಿನಲ್ಲಿ ಶೇಕಡಾ ೨೮ ಪರ್ಸೆಂಟ್‌ನಷ್ಟು ಮಳೆಯಾಗಿದೆ. ಅಲ್ಲಿನ ಜನರು ಭೀಕರ ಬರಗಾಲದ ದವಡೆಯಲ್ಲಿ ಸಿಕ್ಕಿದ್ದಲ್ಲಿ ಎರಡು ಎತ್ತು ಕಟ್ಟಿದಂತಹ ರೈತ ಕೂಲಿಗಾಗಿ ಹೋಗುವಂತಹ ಪರಿಸ್ಥಿತಿ ಬಂದಿದೆ. ಸವದತ್ತಿಯು ಮಲಪ್ರಭಾ ಯೋಜನೆಯಿದ್ದು, ಆ ರಿಸರ್ವಾಯರ್‌ನಲ್ಲಿ ಸಮುದ್ರ ಸಮಪಾತದಿಂದ ೮೦ ಫೂಟ್ ನೀರು ಇರಬೇಕಾದರೆ, ೨೦೫೬ ಮಾತ್ರ ಇದೆ. ಅಲ್ಲಿ ಬಿತ್ತಿದಂತಹ ಹೈಬ್ರಿಡ್ಜ್ ವರಲಕ್ಷ್ಮಿ ಹತ್ತಿಬೆಳೆ ಪೂರ್ತಿಯಾಗಿ ನಷ್ಟವಾಗುವಂಥ ಪರಿಸ್ಥಿತಿಯಿದ್ದು, ತುಂಬಾ ಹಾಹಾಕಾರವಾಗಿದೆ. ಕೈಯಲ್ಲಿದ್ದಂತಹ ದುಡ್ಡನ್ನು ಹತ್ತಿಬೆಳೆ ಬೆಳೆಯುವುದಕ್ಕೆ ಗೊಬ್ಬರ, ಬೀಜ ಮುಂತಾದ ಬಾಬುಗಳಿಗೆ ಖರ್ಚು ಮಾಡಿದ್ದಾರೆ. ಮಲಪ್ರಭಾ ರಿಸರ್ವಾಯರ್‌ನಲ್ಲಿ ಇದ್ದಂತಹ ನೀರು ನವೆಂಬರ್ ೧೫ರವರೆಗೆ ಮಾತ್ರ ಸಿಗುತ್ತದೆಯೆಂದು ಇಂಜಿನಿಯರ್ಸ್ ಹೇಳುತ್ತಿದ್ದಾರೆ. ಆದರೆ ಹತ್ತಿಬೆಳೆ ಬರಬೇಕಾದರೆ, ಅದಕ್ಕೆ ಆರು ತಿಂಗಳು ಸರಿಯಾಗಿ ನೀರು ಬಂದರೆ ಮಾತ್ರ ಸಾಧ್ಯವಾಗುತ್ತದೆ. ಕೈಯಲ್ಲಿದ್ದಂತಹ ದುಡ್ಡನ್ನು ಹತ್ತಿ ಬೆಳೆಗೆ ಹಾಕಿ, ಅದನ್ನು ಕಳೆದುಕೊಂಡು ತಿರುಗಾಡುವಂತಹ ಪರಿಸ್ಥಿತಿ ನಮ್ಮ ತಾಲ್ಲೂಕಿನ ಜನತೆಗೆ ಬಂದಿದೆ. ಆದುದರಿಂದ ಅಲ್ಲಿ ಖಾಯಂ ಪರಿಹಾರವಾಗುವ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿಗಳು ಚಾಲು ಇದ್ದರೂ ಕೂಡ, ವೇಜಸ್ ಪೇಮೆಂಟ್ ಸಹ ಸರಿಯಾಗಿ ಆಗುತ್ತಿಲ್ಲವೆಂದು ಕೇಳಿದ್ದೇನೆ ಮಾನ್ಯ ಕಂದಾಯ ಮಂತ್ರಿಗಳು ಪಗಾರವನ್ನು ಪ್ರತಿ ವಾರಕ್ಕೆ ಒಮ್ಮೆಯಾದರೂ ಸಿಗುವಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಖಾಯಂ ಆಗಿ ಕೆಲಸ ಕೊಡಲಿಕ್ಕೆ ೪–೫ ಮೈನರ್ ಇರಿಗೇಷನ್ ಟ್ಯಾಂಕ್ ತೆಗೆದುಕೊಂಡರೆ, ಆ ಭಾಗದ ಹಳ್ಳಿಯ ಜನರಿಗೆ ಉಪಯೋಗವಾಗುತ್ತದೆ. ಅಲ್ಲದೆ ಮುಗಲ್‌ವಾಡ್ ಟ್ಯಾಂಕ್ ತೆಗೆದುಕೊಂಡರೆ ೫೦೦ ಎಕರೆ ನೀರಾವರಿಯಾಗುತ್ತದೆ ಮತ್ತು ಅದಕ್ಕೆ ೧೦ ಲಕ್ಷ ರೂಪಾಯಿಯಾಗುತ್ತದೆಂದು ಅಂದಾಜು ಮಾಡಿದ್ದಾರೆ. ಅಂತಹ ನಾಲ್ಕೈದು ಕೆಲಸಗಳನ್ನು ತೆಗೆದುಕೊಂಡಲ್ಲಿ ಬರಗಾಲದ ದವಡೆಗೆ ಸಿಕ್ಕಿರತಕ್ಕಂತಹ ಜನರು ಅದರಿಂದ ಪಾರಾಗುತ್ತಾರೆ. ಇವತ್ತು ರೋಡ್ ಕೆಲಸ ಬಹಳ ಮಂದಗತಿಯಿಂದ ನಡೆದಿದೆ. ೫–೬ ಕಿಲೋಮೀಟರ್ ಒಂದು ಊರಿಗೆ ಕೊಟ್ಟರೆ, ಅದನ್ನು ೫–೬ ದಿವಸದಲ್ಲಿ ಮುಗಿಸುತ್ತಾರೆ. ನಂತರ ಅಲ್ಲಿನ ಶಾಸಕರ ಮತ್ತು ತಹಸೀಲ್ದಾರರ ಮನೆ ಬಾಗಿಲಿಗೆ ಬಂದು ಕುಳಿತುಕೊಳ್ಳುತ್ತಾರೆ. ಮಲಪ್ರಭಾ, ಘಟಪ್ರಭಾ ಯೋಜನೆಗೆ ಸರ್ಕಾರದಿಂದ ಹೆಚ್ಚು ದುಡ್ಡು ಒದಗಿಸುವ ಮೂಲಕ ಬೆಳಗಾಂ ಜಿಲ್ಲೆಯ ಜನರಿಗೆ ಖಾಯಂ ಪರಿಹಾರ ಸಿಗುವಂತಹ ರೀತಿಯಲ್ಲಿ ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೆ, ಈ ರಿಪೋರ್ಟ್ ಬಗ್ಗೆ ಎಲ್ಲರೂ ಅಭಿನಂದಿಸಿದ್ದಾರೆ. ನಾನು ಸಹ ನನ್ನ ಅಭಿನಂದನೆಗಳನ್ನು ಸಲ್ಲಿಸಿ ಕೆಲವು ವಿಷಯಗಳನ್ನು ಮಾತ್ರ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಈ ರಿಪೋರ್ಟಿನಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಈಗ ಅವರು ಹೇಳಿದ ಲೆಕ್ಕದ ಪ್ರಕಾರ ೭೫೮ ಹಳ್ಳಿಗಳನ್ನು ಬಿಟ್ಟರೆ ಬಾಕಿ ಎಲ್ಲಾ ಹಳ್ಳಿಗಳಿಗೂ ಅಫೆಕ್ಟ್ ಆಗಿದೆ. ಅದರ ಪೈಕಿ ದನಗಳು ಎಷ್ಟು? ಯಾವು ಯಾವುದು ಎಷ್ಟೆಷ್ಟು ಎಂದು ಹೇಳಿದ್ದಾರೆ. ಚಾಮರಾಜನಗರ ಗುಂಡ್ಲುಪೇಟೆ. ಪಿರಿಯಾಪಟ್ಟಣ, ಕೊಳ್ಳೆಗಾಲ, ಮೈಸೂರು ತಾಲ್ಲೂಕುಗಳು ಅಫೆಕ್ಟ್ ಆಗಿದೆ ಎಂದು ರಿಪೋರ್ಟಿನಲ್ಲಿ ಹೇಳಿದ್ದಾರೆ ಈಗ ನಾನು ಪ್ರಸ್ತಾಪ ಮಾಡತಕ್ಕದ್ದು ಗುಂಡ್ಲುಪೇಟೆ ತಾಲ್ಲೂಕಿಗೆ ಸಂಬಂಧಪಟ್ಟಂತೆ ಹೇಳುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಗುಂಡ್ಲುಪೇಟೆಯಲ್ಲಿ ಬರಗಾಲ ಇದ್ದಿದ್ದರೆ ನಾಗರತ್ನಮ್ಮನವರು ಏತಕ್ಕೆ ಇಂಥ ಸೀರೆ ಉಡುತ್ತಿದ್ದರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ೧೯೫೭ನೇ ಇಸವಿಯಿಂದ ಮೆಂಬರ್ ಆಗಿ ಬರುತ್ತಿದ್ದೇನೆ. ೧೯೫೫ನೇ ಇಸವಿಯಲ್ಲಿ ಮೊದಲು ಬಂದಿದ್ದಾಗ ಎಂ. ಪಿ. ಪಾಟೀಲರು ರೆವಿನ್ಯೂ ಮಂತ್ರಿಗಳಾಗಿದ್ದರು ನಾನು ಆಗಿನಿಂದಲೂ ಬರಗಾಲದ ವಿಚಾರದ ಬಗ್ಗೆ ಹೇಳುತ್ತಲೇ ಬಂದಿದ್ದೇನೆ. ಎಲ್ಲ ಸದಸ್ಯರಿಗೂ ಈ ಬರಗಾಲ ಹೊಸದು, ಎಲ್ಲರೂ ನಮ್ಮಲ್ಲಿ ನೀರು ಇಲ್ಲ, ಊಟ ಇಲ್ಲ ಎಂದು ಹೇಳುತ್ತಾರೆ. ನನ್ನ ತಾಲ್ಲೂಕು ಯಾವುದಕ್ಕೆ ಪ್ರಸಿದ್ಧಿಯಾಗಿತ್ತು ಅಂದರೆ ಬರಗಾಲಕ್ಕೆ ಪ್ರಸಿದ್ಧಿಯಾದಂಥ ತಾಲ್ಲೂಕು. ನಮ್ಮ ಕಡಿದಾಳ್ ಮಂಜಪ್ಪನವರು ಬಂದನಂತರ ಆಗಲೂ ನಾನು ನಮ್ಮ ತಾಲ್ಲೂಕಿನ ಬರಗಾಲದ ಪರಿಸ್ಥಿತಿಯ ಬಗ್ಗೆ ಹೇಳುತ್ತಿದ್ದೆ. ಅವರೂ ಸಹ ನೀವು ಯಾವಾಗಲೂ ಬರಗಾಲ ಪರಿಸ್ಥಿತಿ ಇದೆ ಎಂದು ಹೇಳುತ್ತಿರುತ್ತೀರಿ ಎಂದು ಹೇಳುತ್ತಿದ್ದರು. ಆಗಿಂದಾಗ ಮಾತು ಕತೆಗಳು ಆಗುತ್ತಿದ್ದವು. ವಾಸ್ತವವಾಗಿ ಗುಂಡ್ಲುಪೇಟೆ ಬಹಳ ಬಹಳ ಬರಗಾಲ ಪೀಡಿತ ತಾಲ್ಲೂಕು. ನಮ್ಮ ತಾಲ್ಲೂಕಿನ ಜನರ ಊಟ ಹಿಟ್ಟು, ರೊಟ್ಟಿ ಅಲ್ಲ. ಅವರು ಯಾವದಿವಸವಾದರೂ ಅನ್ನ ಊಟ ಮಾಡಿದರು ಅಂದರೆ ಅದು ಸಂಭ್ರಮದ ಹಬ್ಬದ ದಿನ ಇದ್ದ ಹಾಗೆ. ಅವರು ಪ್ರತಿ ದಿವಸ ತಿನ್ನತಕ್ಕದ್ದೆಲ್ಲಾ ಕಡಲೆಪುರಿ, ಹುರುಳಿ ಕಾಳು ಬೇಯಿಸಿಕೊಂಡು ತಿನ್ನುತ್ತಿರುತ್ತಾರೆ. ಅದರ ಜೊತೆಗೆ ನೀರಿಗೆ ಬೆಲ್ಲ ಹಾಕಿಕೊಂಡು ಟೀ ಎಂದು ಕಾಯಿಸಿಕೊಂಡು ಕುಡಿಯುತ್ತಾರೆ. ಕಡಲೆ ಕಾಯಿಗಳನ್ನು ತಿನ್ನುವುದು ಬೆಲ್ಲ ಹಾಕಿಕೊಂಡು ಟೀ ಕಾಯಿಸಿಕೊಂಡು ಕುಡಿಯುವುದೇ ಇದೇ ಇವರುಗಳ ಪ್ರತಿನಿತ್ಯದ ಊಟ. ಇಂಥ ಬಡತಾಲ್ಲೂಕು ಇದೆ, ನೀರು ಇಲ್ಲದೇ ಇರತಕ್ಕ ತಾಲ್ಲೂಕು, ಬೋರ್‌ವೆಲ್‌ಗಳನ್ನು ಹಾಕಿ ಕುಡಿಯುವ ನೀರನ್ನು ಕೊಟ್ಟಿದ್ದೇವೆಂದು ಹೇಳಿದರೂ ಸಹ ನಮ್ಮಲ್ಲಿರತಕ್ಕ ಬೋರ್‌ವೆಲ್‌ಗಳಲ್ಲಿ ನೀರು ಇಲ್ಲ. ಈಗ ಕಾಲಕ್ಕೆ ಸರಿಯಾಗಿ ಮಳೆ ಬಾರದೇ ಇರುವುದರಿಂದ ನೀರು ಪಾತಾಳಕ್ಕೆ ಹೋಗಿದೆ. ನೀರು ಪೈಪ್‌ಗೆ ಎಟುಕಿಸದೇ ಪಂಪ್ ಮಾಡಿದರೂ ಸಹ ಮೇಲಕ್ಕೆ ನೀರು ಬರಲಿಕ್ಕೆ ಸಾಧ್ಯವಿಲ್ಲದಂತಾಗಿದೆ ಪುನಃ ನೀರಿನ ಕ್ಷಾಮ ನಮ್ಮಲ್ಲಿ ಬಂದಿದೆ. ನೀವು ಬೋರ್‌ವೆಲ್ ಎಷ್ಟೇ ಆಳಕ್ಕೆ ಹಾಕಿದರೂ ಸಹ ನೀರು ಸಿಕ್ಕದೇ ಇರುವಂಥ ಪರಿಸ್ಥಿತಿ ಇದೆ. ನಮ್ಮಲ್ಲಿ ನೀರಿನ ಕ್ಷಾಮ ಹೆಚ್ಚು ಆಗುತ್ತಿದೆ. ಇನ್ನು ಊಟ ಅಂತೂ ಇಲ್ಲವೇ ಇಲ್ಲ. ಇನ್ನು ದನಗಳು ಜೋಳದ ಕಡ್ಡಿ, ರಾಗಿ ಹುಲ್ಲು, ಭತ್ತದ ಹುಲ್ಲು, ಮೇಯುವುದು ಸ್ವಾಭಾವಿಕ. ಈಗ ಅವುಗಳು ಯಾವುದೂ ಇಲ್ಲದೇ ಜನರು ಆಲದ ಎಲೆಗಳನ್ನು ಕಿತ್ತು ದನಗಳಿಗೆ ಹಾಕುತ್ತಿದ್ದಾರೆ. ನಮ್ಮ ಭಾಗದಲ್ಲಿ ಯಾವ ಆಲದ ಮರಗಳನ್ನು ನೋಡಿರೂ ಎಲೆಗಳನ್ನೆಲ್ಲಾ ಕಡಿದು ಹಾಕಿದ್ದಾರೆ. ಅಂಥ ಪರಿಸ್ಥಿತಿ ನಮ್ಮ ತಾಲ್ಲೂಕಿನ ದನಗಳಿಗೆ ಬಂದಿದೆ. ಅದೇ ರೀತಿ ಕುಡಿಯುವುದಕ್ಕೆ ನೀರಿಲ್ಲದ ಪರಿಸ್ಥಿತಿ ಜನಗಳಿಗೆ ಬಂದಿದೆ. ಇದರ ಜೊತೆಗೆ ನಮ್ಮಲ್ಲಿರತಕ್ಕ ಜನಗಳಲ್ಲಿ ನೂರಕ್ಕೆ ನಲವತ್ತೈದು ಜನರ ಟಿ. ಬಿ. ಕಾಯಿಲೆಯಿಂದ ನರಳುತ್ತಿದ್ದಾರೆ. ನಮ್ಮಲ್ಲಿ ಹುಟ್ಟತಕ್ಕ ಮಕ್ಕಳಿಗೆ ಕ್ಷಯ ಇರುತ್ತದೆ. ನಾಳೆ ಬೆಳೆಯತಕ್ಕ ಮಕ್ಕಳು ಈ ರೀತಿ ಕ್ಷಯದಿಂದ ಸಾಯುವಾಗ, ನಾವು ಮಾಡತಕ್ಕ ಕೆಲಸಗಳು ಒಳ್ಳೆಯವು ಆದರೂ ಪ್ರಯೋಜನವಾಗುವುದಿಲ್ಲ. ಇವೊತ್ತು ಶಾಲೆಗಳನ್ನು ಕಟ್ಟುತ್ತೇವೆ, ಪ್ರಾಜೆಕ್ಟ್‌ಗಳನ್ನು ಕಟ್ಟುತ್ತೇವೆ. ನಾವು ಯಾವುದೇ ಒಳ್ಳೆಯ ಕೆಲಸಗಳನ್ನು ಮಾಡಿದರೂ ಅದನ್ನು ಅನುಭವಿಸುವ ಜನರು ಕಷ್ಟದಲ್ಲಿ ಸಿಕ್ಕಿರುವಾಗ ಅಷ್ಟು ಪ್ರಯೋಜನ ಆಗುವುದಿಲ್ಲ. ಇಂಥ ಕೆಟ್ಟ ಕಾಯಿಲೆಯಿಂದ ನಮ್ಮ ತಾಲ್ಲೂಕಿನ ನರಳುತ್ತಿದ್ದಾರೆ. ಕಷ್ಟದಿಂದ ಜನರು ನರಳುತಿದ್ದವರಿಗೆ ಪರಿಹಾರ ಹೇಗೆ ಆಗಬೇಕೆಂದು ಕೇಳಿದರೆ ತಾವು ಕಬಿನಿ ಸೆಕೆಂಡ್ ಸ್ಟೇಜ್ ಕೂಡಲೇ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಂಡರೆ ಇರಿಗೇಷನ್ ಮಾಡಲಿಕ್ಕೆ ಅನುಕೂಲವಾಗುವುದರ ಜೊತೆಗೆ ಕುಡಿಯುವ ನೀರು ಸಹ ದೊರಕಲಿಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು ಸರ್ಕಾರದವರು ಇದರ ಬಗ್ಗೆ ನಿಗಾ ಇಡಬೇಕು. ಕಾವೇರಿ ನೀರು ಬೆಂಗಳೂರಿಗೆ ಬರಬೇಕು ಇದರ ಮೇಲೆ ಜಾಸ್ತಿ ನಿಗಾ ಇದೆ ಎನ್ನುವಂತೆ ಆಗಬಾರದು. ಕಬಿನಿಯನ್ನು ಸ್ಟೇಜ್ ಬೈ ಸ್ಟೇಜ್ ಆದರೂ ಮಾಡಿ ಹಳ್ಳಿಗಳಿಗೆ ಕುಡಿಯಲಿಕ್ಕೆ ನೀರು ಕೊಡುವಂಥ ವ್ಯವಸ್ಥೆ ಮಾಡಬೇಕು. ಇವೊತ್ತು ಬೋರ್‌ವೆಲ್‌ಗಳ ಬಗ್ಗೆ ನಂಬಿಕೆ ಇಲ್ಲ. ಏಕೆಂದರೆ, ನೀರಾಗಲಿ, ಅಥವಾ ಆಯಿಲ್ ಆಗಲಿ, ಭೂಗರ್ಭದಲ್ಲಿ ಎಕ್ಸ್‌ಸೆಸ್ಟ್ ಆದಮೇಲೆ ನೀರು ಆಗಲಿ, ಆಯಿಲ್ ಆಗಲಿ ಕಡಿಮೆ ಆಗಲೇಬೇಕು. ಇದೇ ನೀರನ್ನು ನಂಬಿಕೊಂಡರೆ ಆಗುವುದಿಲ್ಲ. ಇವೊತ್ತು ಚಾನಲ್‌ಗಳು ಮುಖಾಂತರ ಕಾವೇರಿ ನೀರು, ಮತ್ತು ಕಬಿನಿ ನೀರನ್ನು ಹಳ್ಳಿಗಳಿಗೆ ಸಪ್ಲೈ ಮಾಡತಕ್ಕ ಸ್ಕೀಮು ಹಾಕಿಕೊಳ್ಳಬೇಕಾಗುತ್ತದೆ. ತಾವು ಆ ರೀತಿ ಸ್ಕೀಮು ಹಾಕಿಕೊಳ್ಳದೇ ಇದ್ದರೇ ವಿಧಿಯೇ ಇಲ್ಲ. ಇನ್ನು ಲೋನ್ ಬಗ್ಗೆ ಕೆಲವೊಂದು ವಿಚಾರಗಳನ್ನು ತಿಳಿಸಬೇಕೆಂದರೆ, ಇವೊತ್ತು ಬಡವರಿಗೆ ಊಟಕ್ಕೆ ಇಲ್ಲ. ಇಂಥ ಸಂದರ್ಭದಲ್ಲಿ ಅವರ ಮನೆಯಲ್ಲಿರತಕ್ಕ ಸ್ಟೀಲ್ ಪಾತ್ರೆ, ಬೆಳ್ಳಿ ಪಾತ್ರೆ, ಮಡಿಕೆ ಕುಡಿಕೆಗಳನ್ನು ಹೊರಗಡೆ ಹಾಕಿ ಹರಾಜು ಹಾಕುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಅವರು ಯಾವರೀತಿಯಲ್ಲಿ ಸಾಲ ಕಟ್ಟಬೇಕು?

ಈಗ ತಾವು ಏನು ಸೀರೆಗಳನ್ನು ಕೊಡುತ್ತೇವೆ, ಒಡವೆಗಳನ್ನು ಕೊಡುತ್ತೇವೆಂದು ಹೊರಟಿದ್ದೀರಿ ಅದನ್ನು ಬಿಟ್ಟು ಈಗ ಏನು ಅವರು ಬವಣೆ ಪಡುತ್ತಿದ್ದಾರೆ ಅದನ್ನು ತಪ್ಪಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದರ ಜೊತೆಗೆ ಲ್ಯಾಂಡ್ ರೆವಿನ್ಯೂ ಏನಿದೆ ಇದನ್ನು ಮಾಫಿ ಮಾಡಬೇಕೆಂದು ಹೇಳುತ್ತೇನೆ. ಬಡ ಜನರಿಗೆ ಕಂದಾಯ ರದ್ದು ಮಾಡಬೇಕೆಂದು ಕಮಿಟಿಯವರು ಸಹ ರೆಕಮೆಂಡ್ ಮಾಡಿದ್ದಾರೆ. ಅವರ ಜೊತೆಗೆ ನಾನು ಸಹ ಹೇಳುತ್ತಿದ್ದೇನೆ. ಇನ್ನು ಮೇವಿನ ವಿಚಾರದ ಬಗ್ಗೆ ನಾವು ಟ್ರಾನ್ಸ್‌ಪೋರ್ಟೇಷನ್ ಎಕ್ಸ್‌ಪೆನ್ಸ್ ಕೊಡುತ್ತೇವೆ ನೀವು ಎಲ್ಲಿಂದಲಾದರೂ ಹುಲ್ಲು ತನ್ನಿ ಎಂದು ಹೇಳುತ್ತೀರಿ. ಒಂದು ದಿವಸ ಬಿಟ್ಟು ಹೋದರೆ ನೀವು ಕೊಡತಕ್ಕ ಕೆಲಸದ ಕೂಲಿ ಹೋಗುತ್ತದೆ. ಆದ್ದರಿಂದ ಇದರ ಬಗ್ಗೆ ಸಿದ್ದರಾಮಯ್ಯನವರಿಗೆ ನಾನು ಆಗಲೇ ಹೇಳಿದೆ. ಕಟುಕರ ಕೈಗೆ ಏನು ದನಗಳು ಹೋಗುತ್ತಿವೆ ಅವುಗಳನ್ನು ಯಾವರೀತಿಯಿಂದಲಾದರೂ ತಪ್ಪಿಸಿ ಎಂದು ಹೇಳಿದ್ದೇನೆ. ತಾವು ಯಾವರೀತಿಯ ಪ್ರೋಗ್ರಾಮ್ ಹಾದರೂ ಸರಿಯೇ, ಕಟುಕರ ಕೈಗೆ ಹೋಗತಕ್ಕ ದನಗಳನ್ನು ಉಳಿಸಿಕೊಡಬೇಕು ಅದರ ಜೊತೆಗೆ ಅವುಗಳಿಗೆ ಬೇಕಾಗತಕ್ಕ ಮೇವು ಸಹ ತಾವೇ ಒದಗಿಸಿಕೊಡಬೇಕು. ಹುಲ್ಲು ಒದಗಿಸುವ ಬಗ್ಗೆ ಜನಗಳ ಮೇಲೆ ಭಾರವನ್ನು ಹಾಕಬಾರದು. ಇವೊತ್ತು ತಾವು ಟ್ರಾನ್ಸ್‌ಪೋರ್ಟೇಷನ್ ಚಾರ್ಜ್ ಕೊಡುತ್ತೇವೆ ಅಂದರೆ ಅದು ಸಾಧ್ಯವಾಗುವುದಿಲ್ಲ. ಅದರ ಬಗ್ಗೆ ತಾವೇ ಗಮನಹರಿಸಬೇಕು. ಈಗ ಸಮಿತಿಯವರು ನಾಲ್ಕೈದು ವಿಚಾರಗಳ ಬಗ್ಗೆ ರೆಕಮೆಂಡೇಷನ್ ಮಾಡಿದ್ದಾರೆ ಅವೆಲ್ಲವನ್ನೂ ನಡೆಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರ ಜೊತೆಗೆ ಮೂಲೆ ಹೊಳೆ ಪ್ರಾಜೆಕ್ಟ್ ಮಾಡಿಕೊಡಬೇಕು. ಅದನ್ನು ಮಾಡಿಕೊಟ್ಟರೆ ಜನರಿಗೆ ಅರ್ಧ ಕಷ್ಟ ಪರಿಹಾರವಾದಂತೆ ಆಗುತ್ತದೆ. ಎಷ್ಟೋ ಜಮೀನು ನೀರಾವರಿಯಾಗುತ್ತದೆ ಎಂದು ಹೇಳುತ್ತೇನೆ.

ನಮ್ಮ ಅರಣ್ಯ ಮಂತ್ರಿಗಳಿಗೆ ನಮ್ಮ ಭಾಗದಲ್ಲಿ ಟ್ರೆಂಚ್ ಹಾಕಿಸಿಕೊಡಿಯೆಂದು ಕೇಳಿದರೆ ಎನ್.ಆರ್.ಇ.ಪಿ. ಯಲ್ಲಿ ತೆಗೆದುಕೊಳ್ಳುವುದಕ್ಕೆ ನಜೀರ್ ಸಾಹೇಬ್‌ರನ್ನು ಕೇಳಿಯೆಂದು ಹೇಳುತ್ತಾರೆ. ಬೇಕಾದಷ್ಟು ದುಡ್ಡು ಲ್ಯಾಪ್ಸ್ ಆಗಿರುವುದರ ಬಗ್ಗೆ ಮಾನ್ಯ ಮೊಯಿಲಿಯವರು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ, ಹಣ ಲ್ಯಾಪ್ಸ್ ಮಾಡುವುದರ ಬದಲು ಟ್ರೆಂಚ್‌ಗಳನ್ನು ಒಡೆಸಿದರೆ ಅನುಕೂಲವಾಗುತ್ತದೆ. ನಮ್ಮ ಭಾಗದಲ್ಲಿ ಒಂದೇ ಸಾರಿ ನೀರು ನುಗ್ಗಿ ಭತ್ತ, ಕಬ್ಬು ಮತ್ತು ಸೇಂಗಾವನ್ನು ಬೆಳೆಯನ್ನು ದೂಳಿಪಟ ಮಾಡುತ್ತದೆ. ಇವತ್ತು ನಮ್ಮ ಭಾಗದಲ್ಲಿ ಆನೆ ಕಾಟ, ಟಿಟಿ ಕಾಟ ಮತ್ತು ಕಳ್ಳರ ಕಾಟ ಇದ್ದು ಇವುಗಳಿಂದ ಜನ ಪಾರಾಗಬೇಕಾಗಿದೆ, ಇದರ ಕಡೆ ಸರ್ಕಾರದವರು ಹೆಚ್ಚು ನಿಗಾ ಕೊಡಬೇಕೆಂದು ಹೇಳಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಕಲ್ಯಾಣ ರಾವ್ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, ಬರಗಾಲದ ವಿಚಾರವಲ್ಲಿ ಸಮಿತಿಯವರು ಕೊಟ್ಟಂತಹ ವರದಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಬರಗಾಲ ಇಲ್ಲವೆಂದು ಹೇಳಿದ್ದಾರೆ. ೧೯೭೦ನೇ ಇಸವಿಯಿಂದ ಇದುವರೆವಿಗೂ ನಮ್ಮ ಜಿಲ್ಲೆ ಶಾಶ್ವತವಾಗಿ ಬರಗಾಲಕ್ಕೆ ತುತ್ತಾಗುತ್ತಿದೆ. ಈ ಸಾರಿ ಸ್ವಲ್ಪ ಮಳೆಯಾಗಿದ್ದು ಬೆಳೆ ಕೂಡ ಇಡಲಾಗಿದೆ. ಕುಡಿಯುವ ನೀರಿನ ತೊಂದರೆ ಹಳ್ಳಿಯ ಭಾಗದಲ್ಲಿ ವಿಪರೀತವಾಗಿದ್ದು, ಭಾಲ್ಕಿ ನಗರದಲ್ಲಿ ಬಹಳ ತೊಂದರೆ ಇದೆ. ನೀರಿನ ವ್ಯವಸ್ಥೆ ಸಲುವಾಗಿ ನಳದ ಮೂಲಕ ನೀರು ಒದಗಿಸಿಕೊಡುತ್ತೇವೆಂದು ಟ್ಯಾಂಕ್ ಕಟ್ಟುವುದಕ್ಕಾಗಿ ಒಂದು ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ಒಂದು ಎಕರೆ ಜಮೀನಿಗೆ ಹರಿಜನ ಕೋಮಿಗೆ ಸೇರಿದ ಪಧವೀಧರೆ ಹೆಣ್ಣು ಮಗಳೊಬ್ಬಳು ಒಪ್ಪಿಗೆ ಕೊಟ್ಟಿದ್ದಾಳೆ, ಒಪ್ಪಿಗೆ ಕೊಟ್ಟು ಒಂದು ವರ್ಷ ಮೇಲಾದರೂ ಕೂಡ ೪(೧) ನೋಟೀಫಿಕೇಷನ್ ಹೊರಡಿಸಿಲ್ಲ. ರೊಕ್ಕವನ್ನು ಕೊಟ್ಟಿಲ್ಲ. ಇದೇ ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟರೂ ಕೂಡ ಇದುವರೆವಿಗೂ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಅಸಿಸ್ಟೆಂಟ್ ಕಮಿಷನರ್‌ರವರು, ಮುನಿಸಿಪಾಲಿಟಿ ಚೀಫ್ ಆಫೀಸ್‌ನವರೆವಿಗೂ ಪತ್ರ ಬರೆದಿದ್ದಾರೆ. ಅದು ಈ ರೀತಿಯಾಗಿದೆ.—Copy to Kalyana Rao with a request to kindly arrange to pay compensation amount to the land owner as early as possible by raising contribution and intimate in this regard. ಇದು ೪೦ ಲಕ್ಷ ರೂಪಾಯಿಗಳ ಯೋಜನೆ. ಈ ಒಂದು ಕೆಲಸಕ್ಕೆ ಯಾವುದೇ ರೀತಿಯಲ್ಲಿ ಅಡ್ಡಿ ಬರಬಾರದು ಎಂದು ತಿಳಿದುಕೊಂಡು ಒಂದು ಸಾವಿರ ರೂಪಾಯಿಗಳ ಮಂತಿಕೆಯನ್ನು ಕೊಟ್ಟಿದ್ದಾರೆ. ಈ ವಿಚಾರವನ್ನು ನಗರಾಭಿವೃದ್ಧಿ ಮಂತ್ರಿಯವರಿಗೂ ಹೇಳಿದ್ದೇನೆ, ಜಿಲ್ಲಾಧಿಕಾರಿಯವರಿಗೂ ಹೇಳಿದ್ದೇನೆ. ಸಾರ್ವಜನಿಕ ಕಾರ್ಯಕ್ರಮಗಳ ವಿಚಾರದಲ್ಲಿ ಒಪ್ಪಿಗೆ ಕೊಟ್ಟಿದ್ದು ಈಗಾಗಲೇ ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಕೂಡ ಕೆಲಸ ಮುಂದುವರಿದಿಲ್ಲ. ಇವತ್ತು ಆ ಹೆಣ್ಣು ಮಗಳು ಕೊಡುವುದಿಲ್ಲ ಅಂದರೆ ಏನು ಮಾಡುತ್ತೀರಿ ? ಇವತ್ತು ೫ ಲಕ್ಷ ರೂಪಾಯಿಗಳನ್ನು ಖರ್ಚು

ಮಾಡಿ ನಗರದಲ್ಲಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಸಂಬಂಧಪಟ್ಟ ಜಮೀನು ಮಾಲೀಕರಿಗೆ ಪರಿಹಾರ ಧನವನ್ನು ಕೊಟ್ಟು, ೪ (೧) ನೋಟೀಫಿಕೇಷನ್ ಮಾಡುವಂತಹ ವ್ಯವಸ್ಥೆ ಮಾಡಿಲ್ಲ. ನೇರವಾಗಿ ಒಪ್ಪಿಗೆ ಕೊಟ್ಟಿರುವಾಗ ಅಗ್ರಿಮೆಂಟ್ ಮಾಡಿಕೊಂಡು ಸಾರ್ವಜನಿಕ ಕೆಲಸವನ್ನು ಮಾಡುವುದಕ್ಕೆ ಕಾನೂನು ಅಡಚಣೆ ಬಂದಿರುವುದರಿಂದ ಇವರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ೧೫ ಹಳ್ಳಿಗಳು ಇವೆ. ಅಲ್ಲಿ ನೀರಿನ ವ್ಯವಸ್ಥೆ ಇಲ್ಲ. ಈ ವಿಚಾರದ ಬಗ್ಗೆಯೂ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತೇನೆ. ಬೀದರ್ ಜಿಲ್ಲೆ ಯಾವಾಗಲೂ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ಆ ಭಾಗದ ಜನ ತೊಂದರೆ ಪಡುತ್ತಿದ್ದಾರೆ. ಬೀದರ್ ಜಿಲ್ಲೆಯನ್ನು ತಾತ್ಸಾರ ಮಾಡುವುದು ಸರಿಯಲ್ಲ, ಅದು ಕರ್ನಾಟಕದ ಕೊನೆಯ ಭಾಗದಲ್ಲಿದೆ. ಭಾಲ್ಕಿ ಕ್ಷೇತ್ರ ಮತ್ತು ಹೌರಾದ ಕ್ಷೇತ್ರ ಜಿಲ್ಲೆಯ ಕೊನೆಯ ತಾಲ್ಲೂಕುಗಳು ಸರ್ಕಾರದ ಯಾವುದೇ ಸಹಾಯ ಸಲವತ್ತುಗಳಾಗಲಿ ಬೀದರ್ ಜಿಲ್ಲೆಯ ಜನಕ್ಕೆ ಸರಿಯಾಗಿ ಸಿಗುವುದಿಲ್ಲ. ಈ ವಿಚಾರವನ್ನು ಸಮಿತಿಯವರು ಕೂಡ ತಮ್ಮ ವರದಿಯಲ್ಲಿ ಹೇಳಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಕಾರಂಜಾ ಪ್ರಾಜೆಕ್ಟ್ ತೆಗೆದುಕೊಂಡಿದ್ದರು ಸಹಾ ಅದಕ್ಕೆ ಸರಿಯಾಗಿ ಹಣ ಒದಗಿಸಿಲ್ಲ. ಭಾಲ್ಕಿ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ. ಈ ಸಾರಿ ಮಳೆ ಬಂದಿದ್ದಾಗ ಬೆಳೆ ಇಟ್ಟಿದ್ದಾರೆ. ಇದರೆ ಇತ್ತಿಚೆಗೆ ಮಳೆ ಇಲ್ಲ. ನಾನು ಈ ಸಂದರ್ಭದಲ್ಲಿ ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ ಯಾವ ಯಾವ ಜಿಲ್ಲೆಗೆ, ಯಾವ ಯಾವ ಕೆಲಸಗಳನ್ನು ಒದಗಿಸಿದ್ದೀರಿ ? ಎಷ್ಟೆಷ್ಟು ಹಣವನ್ನು ಒದಗಿಸಿದ್ದೀರಿ ? ಎನ್ನುವುದರ ಬಗ್ಗೆ ಒಂದು ಪುಸ್ತಕವನ್ನು ಒದಗಿಸಿಕೊಟ್ಟರೆ, ಶಾಸಕರಾದ ನಾವುಗಳು ಆ ಕ್ಷೇತ್ರದಲ್ಲಿ ಸುತ್ತಾಡಿ ಕೆಲಸ ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ಈ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಡುತ್ತಾರೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಅಧ್ಯಕ್ಷರೇ, ಪ್ರಪ್ರಥಮವಾಗಿ ಬರಗಾಲಕ್ಕೆ ಸಂಬಂಧಪಟ್ಟ ಹಾಗೆ ಸಮಿತಿಯ ಅಧ್ಯಕ್ಷರಾದಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಅಭಿನಂದಿಸುತ್ತೇನೆ. ಇವತ್ತು ಬೆಂಗಳೂರು ಜಿಲ್ಲೆಯಲ್ಲಿ ೨,೭೩೭ ಹಳ್ಳಿಗಳು ಇದ್ದು ೨,೨೪೫ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆಯೆಂದು ವರದಿಯಲ್ಲಿ ಕೊಟ್ಟಿದ್ದಾರೆ. ನಾನು ಸಮಿತಿಯ ಮುಂದೆ ದನಗಳ ಮಾರಾಟದ ಬಗ್ಗೆ ರಾಗಿ ಭತ್ತದ ಬೆಳೆ ಹಾಳಾಗಿರುವ ಬಗ್ಗೆ ಮತ್ತು ನೀರಿನ ಅಭಾವದ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದನ್ನೆಲ್ಲವನ್ನು ಕೂಡ ವರದಿಯಲ್ಲಿ ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಹರಿಜನರು ವಾಸ ಮಾಡುವಂತಹ ೮೫ ಹ್ಯಾಮ್ಲೆಟ್ಸ್ ಇದ್ದು ಅಲ್ಲಿ ಕುಡಿಯುವ ನೀರಿನ ಸೌಲಭ್ಯ ಇಲ್ಲ, ಈ ವಿಷಯವನ್ನು ಕೂಡ ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ವರ್ತೂರು ವಿಧಾನ ಸಭಾ ಕ್ಷೇತ್ರದ ಜನರಿಗೆ ಸರ್ಕಾರದ ಕಾನೂನುಗಳು ಶಾಪವಾಗಿವೆ. ಕಾನೂನಿನ ಚೌಕಟ್ಟಿನಲ್ಲಿ ವರ್ತೂರು ವಿಧಾನಸಭಾ ಕ್ಷೇತ್ರ ಮೂರು ಗುಂಪಾಗಿದೆ. ಬಿ.ಡಿ.ಸಿ. ಮೀಟಿಂಗ್‌ನಲ್ಲಿ ವೀರಣ್ಣನವರು ಮತ್ತು ನಜೀರ್ ಸಾಹೇಬ್‌ರವರು ಹಾಜರಿದ್ದು, ಅವರಿಗೂ ಕೂಡ ವಿಷಯಗಳನ್ನು ತಿಳಿಸಿದ್ದೇನೆ. ಅಗ್ಲಮೊರೇಷನ್ ಕಾನೂನು, ಅರ್ಬನ್ ಲಿಮಿಟ್‌ಗೆ ಸಂಬಂಧಪಟ್ಟ ಕಾನೂನು, ಗ್ರೀನ್ ಬೆಲ್ಟ್‌ಗೆ ಸಂಬಂಧಪಟ್ಟ ಕಾನೂನು ಈ ರೀತಿ ಮೂರು ನಾಲ್ಕು ಕಾನೂನು ಇದ್ದು, ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳಾಗಲಿ, ಕುಡಿಯುವ ನೀರಿನ ವ್ಯವಸ್ಥೆಯಾಗಲಿ ಆಗಿಲ್ಲ.

೩-೦೦ ಪಿ.ಎಂ.

ಈ ಸಂಬಂಧದಲ್ಲಿ ಮಂತ್ರಿಗಳು ಮತ್ತು ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ವರ್ತೂರು ಕ್ಷೇತ್ರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಇದು ೧ ಲಕ್ಷದ ೨೦ ಸಾವಿರ ಜನಸಂಖ್ಯೆ ಇರತಕ್ಕ ಏರಿಯಾ. ಎಚ್.ಎ.ಎಲ್. ಸ್ಯಾನಿಟರಿ ಬೋರ್ಡ್ ಮತ್ತು ಐ.ಟಿ.ಐ. ನೋಟಿಫೈಡ್ ಏರಿಯಾ ಎಂದು ಎರಡು ಭಾಗಗಳನ್ನಾಗಿ ಮಾಡಿ ಎರಡು ಭಾಗಗಳಿಗೂ ಹಣವನ್ನು ಕೊಟ್ಟಿಲ್ಲ. ಹಣದ ವ್ಯವಸ್ಥೆಗೆ ಅವಕಾಶ ಇಲ್ಲದೆ ಇರುವುದರಿಂದ ನೀರಿನ ಸೌಕರ್ಯದ ಕೆಲಸವನ್ನು ಕೈಬಿಟ್ಟಿದ್ದಾರೆ. ೧ ಲಕ್ಷದ ೨೦ ಸಾವಿರ ಜನಸಂಖ್ಯೆ ಇರತಕ್ಕ ಕ್ಷೇತ್ರಕ್ಕೆ ೮ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಹಾಕಿರತಕ್ಕ ಆ ೮ ಬೋರ್‌ವೆಲ್‌ಗಳಲ್ಲಿ ೨ ಫೇಲ್ ಆಗಿ, ಉಳಿದ ಆರು ಬೋರ್‌ವೆಲ್‌ಗಳಲ್ಲಿ ನೀರು ಸಿಗುತ್ತಿದೆ. ಅದರ ಜೊತೆಗೆ ಕ್ಷಾಮ ಪರಿಹಾರ ಕೆಲಸಕಾರ್ಯಗಳಲ್ಲಿ ರಾಜ್ಯಮಟ್ಟದಲ್ಲಿ ಹೆಚ್ಚಿನ ಕೆಲಸ ಕಾರ್ಯಗಳನ್ನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ವರ್ತೂರು ಕ್ಷೇತ್ರದ ಕಡೆಗೂ ಹೆಚ್ಚಿನ ರೀತಿಯಲ್ಲಿ ವಿಶೇಷ ಗಮನ ಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ ವಿಜಯಪುರ, ಬೈಯಪ್ಪನಹಳ್ಳಿ ಈ ತರಹ ನಾಲ್ಕಾರು ಜಾಗಗಳಲ್ಲಿ ಲಕ್ಷಾಂತರ ರೂಪಾಯಿ ಹಣವನ್ನು ಖರ್ಚು ಮಾಡಿದ್ದಾರೆ. ಕಾನೂನಿನ ಅಡಚಣೆ ಬಂದು ಗುತ್ತೇದಾರರು ಬೇಜವಾಬ್ದಾರಿ ತೋರಿರುವುದರಿಂದ ಅಲ್ಲಿ ತೆಗೆದುಕೊಂಡಂತಹ ಕುಡಿಯುವ ನೀರಿನ ಕೆಲಸಕಾರ್ಯಗಳು ಸ್ಥಗಿತಗೊಂಡಿವೆ. ಇದಕ್ಕೆ ಕಾರಣ ಯಾರು ? ಗುತ್ತೇದಾರರು ಕುಡಿಯುವ ನೀರಿನ ಕೆಲಸವನ್ನು ಮುಗಿಸಿಕೊಟ್ಟಿಲ್ಲ. ಸರ್ಕಾರದ ಹಣ ಲಕ್ಷಾಂತರ ರೂಪಾಯಿ ಖರ್ಚಾಗಿದೆ. ಕುಡಿಯುವ ನೀರಿನ ಕೆಲಸಕಾರ್ಯವನ್ನು ಸರ್ಕಾರ ಯಾವಾಗ ಮಾಡುತ್ತದೆ ? ಬೈಯಪ್ಪನಹಳ್ಳಿ, ಗುಂಜೂರು, ವಿಜನಾಪುರ ಅಲ್ಲಿ ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಲ್ಲಿ ಕೆಲಸವನ್ನು ಮುಗಿಸಿದ್ದರೆ ಸುಮಾರು ೨೫ ಸಾವಿರ ಜನಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡಬಹುದಾಗಿತ್ತು. ವಿಜನಾಪುರದಲ್ಲಿ ಹಣವನ್ನು ಪೂರ್ತಿ ಖರ್ಚು ಮಾಡಿದ್ದರೂ, ಆ ಕೆಲಸವನ್ನು ಇನ್ನೂ ಮುಗಿಸಿಲ್ಲವೆಂಬ ವರದಿ ಅಧಿಕಾರಿಗಳಿಂದ ಬಂದಿದೆ. ಇದರ ಕಡೆಗೆ ವಿಶೇಷವಾಗಿ ಗಮನ ಕೊಡಬೇಕೆಂದು ಹೇಳುತ್ತೇನೆ. ಕ್ಷಾಮ ಪರಿಹಾರ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳುವಾಗ ಈ ಕೆಲಸವನ್ನು ಬೇಗ ಮುಗಿಸಿಕೊಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೇನೆ. ಬೆಂಗಳೂರು ನಗರದ ಇಂದಿರಾನಗರ ಇನ್ನಿತರ ಕಡೆಗಳಲ್ಲಿ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿ ಕೊಟ್ಟಿದ್ದಾರೆ. ಒಂದೊಂದು ಮತ ಕ್ಷೇತ್ರದಲ್ಲಿ ೨೦-೩೦-೪೦-೫೦ ಕೆಲವು ಕಡೆಗಳಲ್ಲಿ ೧೦೦ ಬೋರ್‌ವೆಲ್‌ಗಳನ್ನು ಕೊಟ್ಟಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲೂ ಬೆಂಗಳೂರು ನಗರದ ಕೆಲವು ಬಡಾವಣೆಗಳಿವೆ. ಬೈಯಪ್ಪನಹಳ್ಳಿ, ಮೋಟಗಪ್ಪನಪಾಳ್ಯ ಮೈಕೆಲ್‌ಪಾಳ್ಯ ಹಳೇತಿಪ್ಪಸಂದ್ರ, ಹೊಸತಿಪ್ಪಸಂದ್ರ ಈ ಬಡಾವಣೆಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಕಾಗದ ಬರೆದಿದ್ದೇನೆ, ಅದಕ್ಕೆ ಉತ್ತರ ಬಂದಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಯಾವುದೇ ಕ್ರಮವನ್ನು ತೆಗೆದುಕೊಂಡ ಸೂಚನೆ ಕಂಡು ಬಂದಿಲ್ಲ. ಆ ಬಡಾವಣೆಗಳ ಸುತ್ತಮುತ್ತ ಇರತಕ್ಕ ಪ್ರಾಧಿಕಾರದ ಏರಿಯಾದಲ್ಲಿರತಕ್ಕವರಿಗೆ ಕುಡಿಯುವ ನೀರಿನ ಸೌಲಭ್ಯ ಇದೆ. ನನ್ನ ಮತಕ್ಷೇತ್ರದಲ್ಲಿ ಬರತಕ್ಕ ಬಡಾವಣೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಇಲ್ಲವಾಗಿದೆ. ಇದರ ಬಗ್ಗೆ ದಯಮಾಡಿ ಶೀಘ್ರವಾಗಿ ಚರ್ಚೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ೧೯೭೮-೭೯ನೇ ಇಸವಿಯಲ್ಲಿ ಬೆಳ್ಳಂದೂರು ಮತ್ತು ದೊಡ್ಡಕನ್ನೇಹಳ್ಳಿಯಲ್ಲಿ ನೀರಾವರಿ ಕೆಲಸಕಾರ್ಯಗಳನ್ನು ಕೈಗೊಂಡಾಗ ರೈತರ ಜಮೀನುಗಳನ್ನು ವಶಪಡಿಸಿಕೊಂಡು ಅವರಿಗೆ ಪರಿಹಾರದ ಹಣವನ್ನು ಕೊಟ್ಟಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಕೂಡ ಕಾಗದಪತ್ರವನ್ನು ಬರೆಯಲಾಗಿದೆ. ಇದುವರೆವಿಗೂ ರೈತರಿಗೆ ಪರಿಹಾರದ ಹಣ ಸಿಗುವಹಾಗೆ ಯಾರೂ ಕೆಲಸ ಮಾಡಿಲ್ಲ. ಜೊತೆಗೆ ಉಳಿದಿರತಕ್ಕ ನೀರಾವರಿ ಕೆಲಸ ಏನು ಇದೆ, ಮೊದಲು ಆ ಕೆಲಸವನ್ನು ಮುಗಿಸಿಕೊಡಬೇಕು. ಜೊತೆಗೆ ದೊಡ್ಡಕನ್ನೇಹಳ್ಳಿ, ಬೆಳ್ಳಂದೂರು ರೈತರಿಗೆ ಕೊಡದೇ ಇರತಕ್ಕ ಪರಿಹಾರದ ಹಣವನ್ನು ಸರ್ಕಾರ ಶೀಘ್ರವಾಗಿ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಗ್ರಾಮಾಭಿವೃದ್ಧಿ ಸಚಿವರು ಹಿಂದೆ ೨೫೦ ಜನಸಂಖ್ಯೆ ಇರತಕ್ಕ ಗ್ರಾಮಕ್ಕೆ ಒಂದು ಬೋರ್‌ವೆಲ್, ೫೦೦ ಜನ ಸಂಖ್ಯೆ ಇರತಕ್ಕ ಏರಿಯಾಕ್ಕೆ ಒಂದು ಮಿನಿ ವಾಟರ್‌ಸಪ್ಲೈ ಸ್ಕೀಮ್‌ನ್ನೂ ಕೊಡುತ್ತೇವೆಂದು ಹೇಳಿದ್ದರು. ಎಲ್ಲಾ ಕಡೆಗಳಿಗೂ ಬೋರ್‌ವೆಲ್‌ಗಳನ್ನು ಹಾಕಿಸುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ. ಈ ತರಹ ಭರವಸೆಗಳನ್ನು ಮತ್ತು ಪತ್ರಿಕಾ ಹೇಳಿಕೆಗಳನ್ನು ಕೊಟ್ಟು ಶಾಸಕರನ್ನು ಕಷ್ಟಕ್ಕೆ ಸಿಕ್ಕಿಸುತ್ತಿದ್ದಾರೆ, ಈ ತರಹ ಹೇಳಿಕೆಗಳನ್ನು ಕೊಡುವುದಕ್ಕೆ ಬದಲಾಗಿ ನಿಮ್ಮ ಕೈಯಲ್ಲಿ ಎಷ್ಟು ಕೆಲಸ ಆಗುತ್ತಿದೆಯೋ ಅಷ್ಟನ್ನು ಮಾಡಿ. ಆದರೆ ಜನರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ತೀವ್ರವಾಗಿ ಒದಗಿಸಿ ಕೊಡಬೇಕು. ವರ್ತೂರು ವಿಧಾನಸಭಾ ಮತಕ್ಷೇತ್ರದಲ್ಲಿ ನಾಲ್ಕೈದು ಕಾನೂನುಗಳ ಅಡ್ಡಿ ಇದೆ, ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡುವುದರ ಕಡೆಗೆ ಸರ್ಕಾರ ವಿಶೇಷ ಗಮನವನ್ನು ಕೊಡಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕುಡಿಯುವ ನೀರಿನ ಸೌಲಭ್ಯ ಕಿರ್ಲೋಸ್ಕರ ಕೊಳವೆ ಬಾವಿಗಳನ್ನು ಕೊಡುವಾಗ ಒಂದು ತಾಲ್ಲೂಕಿಗೆ ೨-೩ ಲಕ್ಷ ರೂಪಾಯಿ ಕೊಟ್ಟರೆ ೫ ಲಕ್ಷ ಜನಸಂಖ್ಯೆ ಇರುವ ಕಡೆ ಯಾವ ರೀತಿಯಲ್ಲಿ ಹಂಚುವುದಕ್ಕೆ ಸಾಧ್ಯವಾಗುತ್ತದೆ ? ನೀವು ೨ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಎಷ್ಟು ಬೋರ್‌ವೆಲ್‌ಗಳನ್ನು ಸ್ಯಾಂಕ್ಷನ್ ಮಾಡಿದ ಹಾಗೆ ಆಗುತ್ತದೆ ? ಕೊಳವೆ ಬಾವಿಗಳಿಗೆ ಹಣವನ್ನು ಮಂಜೂರು ಮಾಡುವಾಗ ಶಾಸಕರ ಮತಕ್ಷೇತ್ರವನ್ನು ಆಧಾರವಾಗಿಟ್ಟುಕೊಂಡು ಮಂಜೂರು ಮಾಡಬೇಕು. ರೈತರಿಗೆ ಬಾಕಿ ಬರಬೇಕಾದ ಹಣವಿದೆ

ಅದು ಶೀಘ್ರವಾಗಿ ಬರುವಂತೆ ಮಾಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲೆಲ್ಲಿ ಬೋರ್‌ವೆಲ್‌ಗಳು ಬೇಕು ಅದರ ಒಂದು ಪಟ್ಟಿಯನ್ನು ಕೊಡಿಯೆಂದು ಹೇಳಿದ್ದೀರಿ. ಅದರ ಪ್ರಕಾರ ನಾವು ಒಂದು ಪಟ್ಟಿಯನ್ನು ಕೊಟ್ಟಿದ್ದೇವೆ. ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಸರ್ಕಾರದಿಂದ ಹಣ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಮಂತ್ರಿಗಳು ಸದನದಲ್ಲಿ ಮತ್ತು ಪತ್ರಿಕಾ ಹೇಳಿಕೆಗಳಲ್ಲಿ ನಮ್ಮಲ್ಲಿ ಸಾಕಷ್ಟು ಹಣವಿದೆ ಲಕ್ಷಾಂತರ ರೂಪಾಯಿ, ಕೋಟಿ ಬೇಕಾದರೂ ಕೊಡುತ್ತೇವೆಂದು ಹೇಳುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಬೋರ್‌ವೆಲ್‌ಗಳನ್ನು ಹಾಕಲಿಕ್ಕೆ ರಾಜ್ಯಸರ್ಕಾರದಲ್ಲಿ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಬಂದಂತಹ ಸ್ಕೀಮ್‌ಗಳನ್ನು ಬಿಟ್ಟರೆ, ರಾಜ್ಯಸರ್ಕಾರ ಇದುವರೆಗೆ ೧೯೮೫–೮೬ನೇ ಸಾಲಿನಲ್ಲಿ ಯಾವುದೇ ಕೊಳವೆಬಾವಿ ಮತ್ತು ಮಿನಿವಾಟರ್ ಸಪ್ಲೈ ಸ್ಕೀಮ್‌ಗಳಿಗೆ ಹಣವನ್ನು ಕೊಟ್ಟಿಲ್ಲ. ನಮ್ಮ ಅನುಮಾನವನ್ನು ಮಾನ್ಯ ಕಂದಾಯ ಮಂತ್ರಿಗಳು ಪರಿಹಾರ ಮಾಡಬೇಕೆಂದು ನಾನು ಮನವಿ ಮಾಡಿಕೊಂಡು ಮತ್ತೊಂದು ಸಾರಿ ಕೇಳಿಕೊಳ್ಳುತ್ತೇನೆ. ಐ.ಟಿ.ಐ. ನೋಟಿಫೈಡ್ ಏರಿಯಾ ಮತ್ತು ಎಚ್.ಎ.ಎಲ್ ಸ್ಯಾನಿಟರಿ ಬೋರ್ಡ್ ಈ ಏರಿಯಾಗಳಲ್ಲಿ ಚುನಾಯಿತ ಪ್ರತಿನಿಧಿಗಳು ಬರಬೇಕೆಂದು ನಾನು ಕೊಶ್ಚನ್ ಹಾಕಿದ್ದೆ. ನಾನು ಪುನಃ ಒತ್ತಾಯ ಮಾಡುತ್ತಿದ್ದೇನೆ ಅವುಗಳನ್ನು ಮಿನಿ ಮುನಿಸಿಪಲ್ ಏರಿಯಾಗಳೆಂದು ಆರ್ಡರ್ ಜಾರಿ ಮಾಡಿ ಚುನಾಯಿತ ಪ್ರತಿನಿಧಿಗಳು ಬರಬೇಕು. ಎಚ್.ಎ.ಎಲ್. ಸ್ಯಾನಿಟರಿ ಬೋರ್ಡ್ ಐ.ಟಿ.ಐ. ನೋಟಿಫೈಡ್ ಅಲ್ಲಿ ಯಾವುದೇ ರೀತಿಯ ಉತ್ಪಾದನೆ ಇಲ್ಲ ಆದುದರಿಂದ ಅದಕ್ಕೆ ಸರ್ಕಾರ ಹಣ ಕೊಡಬೇಕು. ನನ್ನ ಮತ ಕ್ಷೇತ್ರಕ್ಕೆ ೮ ಬೋರ್‌ವೆಲ್‌ಗಳನ್ನು ಕೊಟ್ಟಿದ್ದೀರಿ ಅವುಗಳನ್ನು ಯಾರಿಗೆ ಕೊಡುವುದು ? ಎಲ್ಲಿಗೆ ಕೊಡುವುದು ? ಈಗಲಾದರೂ ಕೂಡ ತಾವು ಜನಸಂಖ್ಯೆಗೆ ಅನುಗುಣವಾಗಿ ಕೊಳವೆ ಬಾವಿಗಳನ್ನು ಕೊಡುವುದರ ಕಡೆಗೆ ಗಮನಕೊಡಬೇಕು. ಕುಡಿಯುವ ನೀರಿನ ತೊಂದರೆಯನ್ನು ಹೋಗಲಾಡಿಸುವ ಬಗ್ಗೆ ವಿಶೇಷವಾದ ಗಮನವನ್ನು ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ಮತ್ತು ಬರಗಾಲ ಪ್ರದೇಶಗಳ ಬಗ್ಗೆ ಅಧ್ಯಯನ ಮಾಡಿ ವರದಿಯನ್ನು ಕೊಟ್ಟಂತಹ ಸಮಿತಿಯವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಬೇಕೆಂದು ಇರಲಿಲ್ಲ. ನಮ್ಮ ಪಕ್ಷದ ವತಿಯಿಂದ ಕೆಲವು ವಿಷಯಗಳನ್ನು ಹೇಳಬೇಕೆಂದು ತಮ್ಮ ಮುಂದೆ ನಿಂತಿದ್ದೇನೆ. ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರುಗಳು ಬರಗಾಲ ಪರಿಸ್ಥಿತಿಯ ಬಗ್ಗೆ ಮಾತನಾಡಿದ್ದಾರೆ.

ಅಧ್ಯಕ್ಷರು.—ತಾವು ಅನುಭವಿ ಶಾಸಕರು ತಮ್ಮ ಸಲಹೆ ಸೂಚನೆಗಳನ್ನು ಸರ್ಕಾರಕ್ಕೆ ಕೊಡಿ.

ಶ್ರೀ ಎಂ.ಎಸ್. ಕೃಷ್ಣನ್.—ಈಗಾಗಲೇ ಬರಗಾಲ ಪ್ರದೇಶಗಳಲ್ಲಿ ಅಧ್ಯಯನ ಮಾಡಿ ಶಾಸಕರ ಸಮಿತಿ ಒಂದು ಒಳ್ಳೆಯ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ಆ ವರದಿಯನ್ನು ನಾನು ಪೂರ್ತಿಯಾಗಿ ಅಭ್ಯಾಸ ಮಾಡುವುದಕ್ಕೆ ಆಗಲಿಲ್ಲ. ಎಂದೆಂದೂ ಇಲ್ಲದಂತಹ ಭೀಕರ ಬರಗಾಲ ಪರಿಸ್ಥಿತಿ ಬಂದಿದೆ ಎನ್ನುವುದು ವರದಿಯಲ್ಲಿ ಸ್ಪಷ್ಟವಾಗಿದೆ. ನಮ್ಮ ರಾಜ್ಯದ ೧೧೧ ತಾಲ್ಲೂಕುಗಳಲ್ಲಿ ಭೀಕರ ಬರಗಾಲ ಪರಿಸ್ಥಿತಿ ಬಂದಿದೆ. ಈ ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಯುದ್ಧದೋಪಾದಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ. ಇವತ್ತು

(ಶ್ರೀ ಎಸ್. ಪುಟ್ಟಸ್ವಾಮಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

೧೮೧ ತಾಲ್ಲೂಕುಗಳಲ್ಲಿ ಬರಗಾಲ ಇದೆ. ಹಿಂದೆ ಎಂದೆಂದೂ ಬರಗಾಲ ಬಾರದೆ ಇರತಕ್ಕ ಜಿಲ್ಲೆಗಳಲ್ಲೂ ಇವತ್ತು ಬರಗಾಲ ಬಂದಿದೆ ಎನ್ನುವುದರ ಈ ವರದಿಯನ್ನು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಬರಗಾಲದ ವರದಿಯಾಗಿರಲಿ, ಅಥವಾ ಇನ್ಯಾವುದೇ ವರದಿಯಾಗಿರಲಿ, ಪರಿಸ್ಥಿತಿಯು ಏನಿದೆ ಅದನ್ನು ತಿಳಿದುಕೊಂಡು ನಂತರ ವರದಿಯನ್ನು ಕೊಡಬೇಕಾಗುತ್ತದೆ. ಆ ಒಂದು ಕೆಲಸವನ್ನು ಚೆನ್ನಾಗಿ ಮಾಡಿದ್ದಾರೆ. ಇದರಲ್ಲಿ ಎದ್ದು ಕಂಡದ್ದು ಏನೆಂದರೆ, ದನಗಳಿಗೆ ಮೇವು ಏನು ಕೊಡುತ್ತಿದ್ದೀರಿ, ಆ ಮೇವಿನ ಬಗ್ಗೆ ಸರಿಯಾದ ವ್ಯವಸ್ಥೆ ಇಲ್ಲವೆಂಬ ಟೀಕೆಯನ್ನು ಅವರೇ ಮಾಡಿದ್ದಾರೆ. ಆ ಟೀಕೆ ಸ್ಪಷ್ಟವಾದ ಟೀಕೆಯಾಗಿದೆ. ಹಿಂದೆ ಶ್ರೀ ಸಿ. ಎಂ. ಆರ್ಮುಗಂ ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದರು, ಈ ಮನೆಯಲ್ಲಿ ಆಗಲೂ ಇದೇ ರೀತಿಯ ಟೀಕೆ ಬಂತು. ದನಗಳಿಗೆ ಮೇವನ್ನು ಕೊಡುತ್ತಿಲ್ಲವೆಂದು. ಆವಾಗ ಪ್ರಶ್ನೆ ಏನು ಬಂತು ಎಂದರೆ ಸಾಗಾಣಿಕೆ ಮಾಡಿಕೊಂಡು ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆಗೆದುಕೊಂಡು ಹೋಗಿ ಕೊಡುತ್ತೇವೆ. ಆದರೆ ಅವರು ಅವನ್ನು

ಕೊಂಡುಕೊಂಡು ಕೊಡುವುದು ಸೂಕ್ತ ಎಂಬ ಅಭಿಪ್ರಾಯವನ್ನು ಆ ದಿನ ವ್ಯಕ್ತಪಡಿಸಿದರು. ಆದರೆ ಈಗಿನ ಪರಿಸ್ಥಿತಿಗೆ ಏನಾಗಿದೆ ಎಂದರೆ ಕೊಂಡು ಕೊಂಡು ಕೊಡದಿದ್ದರೆ, ಅನೇಕ ದನಗಳು ಸಾಯುವಂತಹ ಪರಿಸ್ಥಿತಿಗೆ ಬರುತ್ತವೆ. ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವರೇ ಹೇಳಿರುವ ಪ್ರಕಾರ ಒಂದು ದಿನಕ್ಕೆ ಆರೂವರೆ ಕೆ.ಜಿ ಮೇವು ಒಂದು ದನಕ್ಕೆ ಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗಿರತಕ್ಕಂತಹ ಜಾನುವಾರು ೯೩ ಲಕ್ಷ. ಆ ರೀತಿ ಲೆಕ್ಕ ಹಾಕುವುದಾದರೆ, ಒಟ್ಟು ೮೦ ಲಕ್ಷ ಟನ್ ಬೇಕಾಗುತ್ತವೆ. ೮೦ ಲಕ್ಷ ಟನ್ ಮೇವಿಗೆ ೪೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. ನೀವು ಹೇಳಬಹುದು. ಇದರಲ್ಲಿ ಹಣದ ಪ್ರಶ್ನೆ ಬರುತ್ತದೆ ಎಂದು ಮೂಲಭೂತವಾಗಿ ತಾವು ಮನಸ್ಸು ಮಾಡಬೇಕು. ಹಣ ಯಾವುದಾದರೊಂದು ರೂಪದಲ್ಲಿ ತರಬಹುದು. ಆದರೆ ಅದಕ್ಕೆ ತಾವು ಮನಸ್ಸು ಮಾಡಬೇಕು. ಬರೀ ಸಾಗಾಣಿಕೆ ಮಾತ್ರ ಅಲ್ಲ. ಅದನ್ನು ಕೊಂಡು ಕೊಂಡು ದನಗಳಿಗೆ ಮೇವನ್ನು ಕೊಡಬೇಕು ಎನ್ನುವ ಜವಾಬ್ದಾರಿ ತಮ್ಮ ಮೇಲೆ ಇದೆ. ಅದನ್ನು ಕೊಂಡುಕೊಂಡು ಮಾಡದಿದ್ದರೆ ಪರಿಸ್ಥಿತಿ ಬಿಗಡಾಯಿಸುತ್ತದೆ, ನಾಳೆ ತಮ್ಮ ಮೇಲೆ ಅಪಾದನೆ ಮಾಡಬೇಕಾಗುತ್ತದೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದರಲ್ಲಿ ಹೇಳಿರುವ ಹಾಗೆ ಮುಖ್ಯವಾಗಿ ತೊಂದರೆಯಾಗಿರತಕ್ಕಂತಹ ಜನ ಸಣ್ಣ ರೈತರು, ಬಡ ರೈತರು ೩,೯೮,೩೩೬ ಜನ ಅಂತ ಹೇಳಿದ್ದಾರೆ. ಅಂಕಿ ಅಂಶಗಳು ಸತ್ಯಕ್ಕೆ ಎಷ್ಟು ಹತ್ತಿರವಾಗಿವೆ ಸತ್ಯಕ್ಕೆ ಎಷ್ಟು ದೂರವಾಗಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಬಹಳ ಕಡಿಮೆ ವೇಳೆಯಲ್ಲಿ ಇಷ್ಟೊಂದು ವಿಷಯವನ್ನು ಸಂಗ್ರಹಣೆ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇನ್ನೂ ಜಾಸ್ತಿ ಇರಬಹುದು. ನಂತರ ಮಾರ್ಜಿನಲ್ ಫಾರ್ಮರ್ಸ್ ೯,೦೨,೧೯೬ ಜನ ಈ ಒಂದು ತೊಂದರೆಗೆ ಒಳಗಾಗಿದ್ದಾರೆ. ಅದೇ ರೀತಿ ಅಗ್ರಿಕಲ್ಚರಲ್ ಲೇಬರರ್ಸ್ ೨೦,೪೧,೪೧೦ ಜನ ಈ ಒಂದು ತೊಂದರೆಗೆ ಒಳಗಾಗಿದ್ದಾರೆ. ಹೀಗೆ ಒಟ್ಟು ೩೩,೪೨,೧೬೨ ಜನ ಬರಗಾಲದ ಪರಿಸ್ಥಿತಿಗೆ ಒಳಗಾಗಿದ್ದಾರೆ. ಮತ್ತೆ ಇದರಿಂದ ತೊಂದರೆಪಡುತ್ತಿದ್ದಾರೆ ಅಂತ ಸ್ಪಷ್ಟವಾಗಿ ಗೊತ್ತಾಗುತ್ತದೆ ಇಷ್ಟು ಜನಗಳಿಗೆ ಕೆಲಸವನ್ನು ಒದಗಿಸುವ ಜವಾಬ್ದಾರಿ ತಮ್ಮ ಮೇಲೆ ಇದೆ. ಅಷ್ಟೂ ಜನರಿಗೂ ಕೆಲಸವನ್ನು ಒದಗಿಸಿಕೊಡುವ ಬಗ್ಗೆ ಯೋಚನೆ ಮಾಡಿದ್ದೀರಾ ? ಇದುವರೆವಿಗೂ ಕೊಟ್ಟಂತಹ ಕೆಲಸದ ಬಗ್ಗೆಯಾಗಲೀ, ಅಥವಾ ಮೇವಿನ ಬಗ್ಗೆ ಯಾಗಲೀ, ಸ್ವಲ್ಪವಾದರೂ ಸ್ಪಷ್ಟತೆ ಇಲ್ಲ ಅಂತ ಹೇಳಿದ್ದಾರೆ. ಮೇವಿಗೆ ೫೦ ಪರ್ಸೆಂಟ್ ಕೊಡೋಣವೆಂದು ೪೦ ಕೋಟಿ ಇದುದ್ದನ್ನು ೨೦ ಕೋಟಿ ರೂಪಾಯಿಗಳಿಗೆ ಮಾಡಿ ಎಂಬುದಾಗಿ ತಾವು ಹೇಳಿದ್ದೀರಿ. ಇದನ್ನು ಸೌಜನ್ಯದಿಂದ ಮಾಡಿದ್ದಾರೆ. ಎಂಬುದಾಗಿ ಸಹ ತಾವು ಹೇಳಿದ್ದೀರಿ ಇದರಲ್ಲಿ ಸೌಜನ್ಯದ ಮಾತೇ ಬರಕೂಡದು. ದನಕರುಗಳಿಗೆ ಮೇವು ಕೊಡಬೇಕು, ಜನಗಳಿಗೆ ಕೆಲಸವನ್ನು ಕೊಡುವ ಜವಾಬ್ದಾರಿ ನಿಮ್ಮ ಮೇಲೆ ಇದೆ. ಆ ಒಂದು ಆಧಾರದ ಮೇಲೆ ವರದಿಯನ್ನು ಕೊಡಬೇಕು. ಆ ಒಂದು ಆಧಾರದ ಮೇಲೆ ಬರಗಾಲ ಪರಿಸ್ಥಿಯನ್ನು ಎದುರಿಸಬೇಕು. ಅದನ್ನು ಮಾಡದಿದ್ದರೆ ಕೆಲಸವನ್ನು ನಿರ್ವಹಿಸಿದ ಹಾಗೆ ಆಗುವುದಿಲ್ಲ. ೩೩ ಲಕ್ಷ ಜನರಿಗೆ ಕೆಲಸವನ್ನು ಕೊಡುವುದರಲ್ಲಿ ಎಷ್ಟು ಕೊಟ್ಟಿದ್ದೀರೆಂದರೆ ೮೦,೦೦೦ ಜನರಿಗೆ ಮಾತ್ರ ಕೆಲಸ ಕೊಟ್ಟಿದ್ದೀರಿ. ಇದನ್ನು ತೃಪ್ತಿಕರವಾದುದು ಅಂತ ಹೇಳುವುದಕಾಗುತ್ತದೆಯೇ ? ಸರಿಯಾದ ರೀತಿಯಲ್ಲಿ ಯೋಜನೆಯನ್ನು ಮಾಡಿ, ಈ ಒಂದು ಬರಗಾಲ ಪೀಡಿತ ಪ್ರದೇಶದಲ್ಲಿರತಕ್ಕ ಜನರಿಗೆ ಕೆಲಸವನ್ನು ದೊರಕಿಸಿಕೊಡುವ ಬಗ್ಗೆ ಕಾಳಜಿಯನ್ನು ವಹಿಸಬೇಕು, ಆದರೆ ಯೋಜನೆಗಳನ್ನು ಈಗ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದ ಇಷ್ಟು ದಿವಸದವರೆಗೆ ತಡೆದಿರುವಂತಹದ್ದು ಅಲಕ್ಷ್ಯ ಮನೋಭಾವ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದಕ್ಕೆ ಬೇಕಾಗಿರುವ ಹಣ ಇಲ್ಲ. ೨ ಕೋಟಿ ೮೦ ಸಾವಿರ ರೂಪಾಯಿಗಳು ಒಂದು ದಿವಸಕ್ಕೆ ಬೇಕಾಗುತ್ತದೆ. ಅಂದ ಮೇಲೆ ನೀವು ಇಟ್ಟಿರತಕ್ಕಂಥ ಹಣ ೫ ದಿವಸಕ್ಕೂ ಸಾಕಾಗುವುದಿಲ್ಲ. ಇಂದು ಭಾರೀ ದೊಡ್ಡ ಪ್ರಮಾಣದಲ್ಲಿ ಇವರಿಗೆ ಕೆಲಸವನ್ನು ಕೊಡುವಂತಹ ಕಾರ್ಯಕ್ರಮವನ್ನು ಮಾಡಬೇಕಾಗಿದೆ ಅದನ್ನು ಮಾಡುತ್ತೇವೆಂದು ಹೇಳಿದ್ದೀರಿ. ಕೆಲಸವನ್ನು ಕೊಡುವ ವಿಚಾರದಲ್ಲಿ ಹೇಳುವುದಾದರೆ, ನೀರಾವರಿ ಯೋಜನೆಯಲ್ಲಿ ಹಾಲಿ ನಡೆಯುತ್ತಿರತಕ್ಕಂತಹ ಕೆಲಸಗಳು ಏನಿವೆ ಅವುಗಳಿಗೆ ಇನ್ನೂ ಹೆಚ್ಚು ಹಣವನ್ನು ಒದಗಿಸಿ ಜನರಿಗೆ ಕೆಲಸವನ್ನು ಕೊಡಬೇಕಾಗುತ್ತದೆ. ಅದನ್ನು ಬಿಟ್ಟರೆ ಅಷ್ಟೊಂದು ದಿವಸವೂ ಜನರಿಗೆ ಬೇರೆ ಕಡೆ ಕೆಲಸವನ್ನು ಕೊಡುವುದಕಾಗುವುದಿಲ್ಲ. ಇದಕ್ಕಾಗಿ ಹಣವನ್ನು ಖರ್ಚು ಮಾಡಿದರೂ ಕೂಡ ಉಪಯೋಗವಾಗುತ್ತದೆ. ಮಹಾರಾಷ್ಟ್ರದಲ್ಲಿ ನಾಲಾಬಂಡಿಂಗ್ ಕೆಲಸವನ್ನು ಈ ಬರಗಾಲದ ಕಾಮಗಾರಿಯಲ್ಲಿ ಮಾಡಿದ್ದಾರೆ. ಇದರಿಂದ ಸ್ವಲ್ಪಮಟ್ಟಿಗಾದರೂ ಅನುಕೂಲವಾಗಬಹುದು, ಆದ್ದರಿಂದ ನಾಲಾ ಬಂಡಿಂಗ್ ಕೆಲಸವನ್ನು ಹೆಚ್ಚು ತೆಗೆದುಕೊಳ್ಳಬೇಕು. ಅದೇ ರೀತಿ ಪರ್ಕ್ಯುಲೇಸನ್ ಟ್ಯಾಂಕ್‌ಗಳ ಬಗ್ಗೆ ಹೇಳಿದ್ದೀರಿ. ಆ ಕೆಲಸವನ್ನು ಕೂಡ ಹೆಚ್ಚು ತೆಗೆದುಕೊಳ್ಳಬೇಕು. ಒಟ್ಟಾರೆ ಈ ಒಂದು ಪ್ರಸಂಗದಲ್ಲಿ ಕಂದಾಯವನ್ನು ರದ್ದು ಮಾಡಬೇಕೆಂದು ಸರ್ವೇ ಸಾಮಾನ್ಯವಾಗಿ ಈ ಮನೆಯಲ್ಲಿರತಕ್ಕಂತಹ ಎಲ್ಲ ಮಾನ್ಯ

ಸದಸ್ಯರೂ ಹೇಳಿದ್ದಾರೆ. ಅದನ್ನು ಈ ವರದಿಯಲ್ಲೂ ಕೂಡ ಹೇಳಿದ್ದಾರೆ. ಆ ವರದಿಯ ಬಗ್ಗೆ ಶ್ಲಾಘನೆಯನ್ನು ಸಲ್ಲಿಸುತ್ತಿದ್ದೇನೆ. ಮತ್ತೆ ಸಣ್ಣ ರೈತರು ಏನು ಸಾಲವನ್ನು ತೆಗೆದುಕೊಂಡಿದ್ದಾರೆ, ಅದನ್ನು ವಜಾ ಮಾಡಬೇಕು. ಅದೇ ದೊಡ್ಡ ದೊಡ್ಡ ರೈತರು ಶ್ರೀಮಂತರು ಯಾರು ಇದ್ದಾರೆ, ಅವರ ಸಾಲವನ್ನೂ ಕೂಡ ವಜಾ ಮಾಡಿ ಅಂತ ಹೇಳುವುದಕ್ಕಾಗುವುದಿಲ್ಲ. ಆದರೆ ಸಣ್ಣ ಸಣ್ಣ ರೈತರು ಯಾರು ಇದ್ದಾರೆ, ಅವರ ಸಾಲವನ್ನು ವಜಾ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಅದರ ಜೊತೆಗೆ ವ್ಯಾಸಂಗ ಮಾಡುತ್ತಿರತಕ್ಕಂತಹ ವಿದ್ಯಾರ್ಥಿಗಳ ಫೀಯನ್ನು ಮನ್ನಾ ಮಾಡಬೇಕು, ತೊಂದರೆಗೆ ಒಳಗಾಗಿರತಕ್ಕಂತಹ ಏರಿಯಾದಲ್ಲಿರತಕ್ಕಂತಹ ವಿದ್ಯಾರ್ಥಿಗಳು ಯಾರು ಇದ್ದಾರೆ, ಒಂದು ರೂಪಾಯಿಯನ್ನೂ ಕೂಡುವುದಕ್ಕೆ ಶಕ್ತಿ ಇಲ್ಲದೇ ಇರತಕ್ಕಂತಹವರು ಯಾರು ಇದ್ದಾರೆ. ಅವರು ಇದರಿಂದಾಗಿ ತಮ್ಮ ವಿದ್ಯಾಭ್ಯಾಸವನ್ನೇ ನಿಲ್ಲಿಸುವ ಪಂಥಾ ಪರಿಸ್ಥಿತಿ ಬಂದಿದೆ. ಆದ್ದರಿಂದ ಅದನ್ನು ಗಮನಕ್ಕೆ ತೆಗೆದುಕೊಂಡು ಅವರ ಫೀಯನ್ನು ಮನ್ನಾ ಮಾಡಬೇಕು.

ಶ್ರೀ ಎಂ. ರಾಮಪ್ಪ.—ಬರೀ ಬರಗಾಲದ ಪ್ರದೇಶದಲ್ಲಿರುವವರಿಗೆ ಮಾತ್ರ ಅಂತ ತಾವು ಹೇಳಬೇಡಿ. ಆದರೆ ಸಾಮಾನ್ಯವಾಗಿ ಅವರ ಮಕ್ಕಳೂ ಸಹ ಪಟ್ಟಣದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಅಂತಹವರಿಗೂ ಕೂಡ ಈ ಒಂದು ರಿಯಾಯಿತಿಯನ್ನು ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಸಂಬಂಧಪಟ್ಟವರು ಯಾರ್ಯಾರು ಇದ್ದಾರೆ ಅವರು ಟೌನಿನಲ್ಲೇ ಓದುತ್ತಿರಲಿ, ಅಥವಾ ಗ್ರಾಮಾಂತರ ಪ್ರದೇಶದಲ್ಲೇ ಓದುತ್ತಿರಲಿ ಅವರೆಲ್ಲರಿಗೂ ಫೀಯನ್ನು ಮನ್ನಾ ಮಾಡಬೇಕೆಂಬುದು ನನ್ನ ಅಭಿಪ್ರಾಯ. ಇದನ್ನೆಲ್ಲಾ ಲೆಕ್ಕ ಹಾಕುವುದಾದರೆ, ಬರಗಾಲವನ್ನು ಎದುರಿಸುವುದಕ್ಕೋಸ್ಕರ ೨೦೦ ಕೋಟಿ ರೂಪಾಯಿಗಳು ಬರೀ ಉದ್ಯೋಗವನ್ನು ಒದಗಿಸುವ ಸಲುವಾಗಿ ಬೇಕಾಗುತ್ತದೆ. ಅದೇ ರೀತಿ ದನಗಳ ಮೇವಿಗಾಗಿ ೨೦ ಕೋಟಿ ರೂಪಾಯಿಗಳು ಮತ್ತೆ ಕುಡಿಯುವ ನೀರಿಗಾಗಿ ೪೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಅನೇಕ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನೂ ಕೂಡ ಭಾರಿ ದೊಡ್ಡ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು. ಈಗಾಗಲೇ ಅನೇಕ ಕಡೆ ಕೊಳವೆ ಬಾವಿಗಳನ್ನು ಹಾಕಿದ್ದಾರೆ. ಆದರೂ ಇನ್ನೂ ಹೆಚ್ಚು ಪ್ರಮಾಣದಲ್ಲಿ ಆ ಒಂದು ವ್ಯವಸ್ಥೆಯನ್ನು ಮಾಡಬೇಕು. ಒಟ್ಟಾರೆ ಇದಕ್ಕಾಗಿ ೨೬೦ ಕೋಟಿ ರೂಪಾಯಿಗಳು ಬೇಕು ಅಂಥ ವರದಿಯಲ್ಲಿ ಹೇಳಿದ್ದಾರೆ. ಆದರೆ ಮೆಮೊರಾಂಡಂನಲ್ಲಿ ೧೫೧ ಕೋಟಿ ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—೨ ತಿಂಗಳ ಹಿಂದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ೨೬೦ ಕೋಟಿ ರೂಪಾಯಿಗಳು ಬೇಕು ಅಂತ ಕೇಳಬೇಕು ಇನ್ನೂ ಜಾಸ್ತಿ ಬೇಕೆಂದು ಕೇಳಬೇಕು. ಅವರು ಕೇಳಿದಾಕ್ಷಣ ಕೊಡುವುದಿಲ್ಲ ನಮಗೆ ಗೊತ್ತಿದ್ದ ಹಾಗೆ ಹೇಳಬೇಕು ಅಂದರೆ, ನಿಜವಾಗಿಯೂ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ವನ್ನು ತರಬೇಕು. ಬರಗಾಲ ಪೀಡಿತ ಪ್ರದೇಶಗಳಿಗೆ ಅನುಕೂಲ ಮಾಡಿಕೊಡಬೇಕು. ಈ ಸಂದರ್ಭ ದಲ್ಲಿ ಕೇಂದ್ರ ಸರ್ಕಾರವನ್ನು ಟೀಕೆ ಮಾಡಬೇಕಾಗಿ ಬರುತ್ತದೆ. ಅದೂ ಕೂಡ ಬೇರೆ ರಾಜ್ಯಗಳಲ್ಲಿ ಇದೇ ರೀತಿಯ ಪರಿಸ್ಥಿತಿ ಬಂದಾಗ ಎಷ್ಟು ಅನುಕೂಲ ಮಾಡಿಕೊಟ್ಟಿದ್ದಾರೋ ಅಷ್ಟೇ ಅನುಕೂಲ ವನ್ನು ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರ ಮಾಡಿಕೊಟ್ಟಿಲ್ಲ. ಅದಕ್ಕೆ ಏನು ಕಾರಣವೋ ಗೊತ್ತಿಲ್ಲ. ನಾವು ಕೇಳಿದಷ್ಟು ಸಹಾಯವನ್ನು ಮೊದಲಿನಿಂದಲೂ ಕೊಟ್ಟಿಲ್ಲ. ಹಿಂದೆ ಶ್ರೀಮಾನ್ ಆರ್ಮುಗಂ ರವರ ಕಾಲದಲ್ಲಿ ರಚನೆ ಮಾಡಿದಂತಹ ಸಮಿತಿಯೂ ಕೂಡ ಇದೇ ರೀತಿಯ ವರದಿಯನ್ನು ಕೊಟ್ಟಿತ್ತು. ಅವಾಗಲೂ ಇದೇ ರೀತಿಯ ಟೀಕೆಯನ್ನು ಮಾಡಿದ್ದೆವು. ಕಾಂಗ್ರೆಸ್ ಮಿತ್ರರೂ ಟೀಕೆ ಮಾಡಿದ್ದಾರೆ, ಆದರೆ ಅವರು ನೇರವಾಗಿ ಟೀಕೆ ಮಾಡುವುದಕ್ಕಾಗುವುದಿಲ್ಲ. ಆದರೂ ಟೀಕೆ ಮಾಡುವಂತಹ ಪರಿಸ್ಥಿತಿ ಬಂದಿದೆ. ೨೬೦ ಕೋಟಿ ರೂಪಾಯಿಗಳನ್ನು ಕೊಡಿಸಬೇಕೆಂದು ತಾವು ಕೇಳಬೇಕು. ಕೊಡಿಸುತ್ತೇವೆಂದು ಅವರು (ಕಾಂಗ್ರೆಸ್ ಸದಸ್ಯರನ್ನು ಕುರಿತು) ಹೇಳಬೇಕು. ಮಾನ್ಯ ಬಂಗಾರಪ್ಪನವರು ನಾನೂ ದೆಹಲಿಗೆ ಹೋಗುತ್ತಿರುತ್ತೇನೆ, ಮಾತನಾಡುತ್ತೇನೆಂದು ಹೇಳಿದರು. ಬಹಳ ಸಂತೋಷ, ಮಾತನಾಡುವುದಕ್ಕೆ ಅವರು ಮಾತ್ರ ಹೋಗುವುದು ಬೇಡ. ಅವರ ಜೊತೆಯಲ್ಲಿ ಮಾನ್ಯ ಬೊಮ್ಮಾಯಿಯವರನ್ನೂ ಕೂಡ ಕರೆದುಕೊಂಡು ಹೋಗಲಿ. ಅವನ್ನು ಬಿಟ್ಟು ನೀವೇ ಸ್ವತಂತ್ರವಾಗಿ ಹೋಗುವುದು, ಅವರೇ ಸ್ವತಂತ್ರವಾಗಿ ಹೋಗುವುದು, ನೀವು ಒಂದು ಮಾತನಾಡು ವುದು, ಅವರೊಂದು ಮಾತನಾಡುವುದು ಸರಿಯಲ್ಲ. ಮಾತನಾಡುವುದು ಬೇಡ ಅಂತ ಹೇಳುವುದಿಲ್ಲ.

ಆಲ್ ಪಾರ್ಟಿ ಡೆಲಿಗೇಷನ್ ಹೋಗಿ ಒತ್ತಾಯಮಾಡಿ ಬರಗಾಲ ಪೀಡಿತ ಪ್ರದೇಶಗಳಿಗೆ ತಕ್ಷಣ ಹಣ ಕೊಡಿ ಎಂದು ಕೇಳಿ. ಮೆಮೋರ್ಯಾಂಡಮ್ ಕೊಟ್ಟು ಒತ್ತಾಯ ಮಾಡಿ.

ಒಬ್ಬ ಮಾನ್ಯ ಸದಸ್ಯರು.—ಆಲ್ ಪಾರ್ಟಿ ಡೆಲಿಗೇಷನ್ ತೆಗೆದುಕೊಂಡು ಹೋಗಬೇಕೆಂಬ ಕಳಕಳಿ ಅವರಲ್ಲಿರಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮನ್ನು ನನ್ನನ್ನು ನೋಡಿದರೆ ಬರಗಾಲ ಇದೆ ಎಂದು ಕಾಣು ವುದಿಲ್ಲ, ಕಳಕಳಿ ಬರುವುದಿಲ್ಲ. ಈ ವಿಷಯದ ಬಗ್ಗೆ ತೀವ್ರವಾಗಿ ಯೋಚನೆ ಮಾಡಿ. ಇದು ಬಹಳ ಗಂಭೀರವಾದ ಪ್ರಶ್ನೆಯಾಗಿದೆ. ಇದನ್ನು ಎದುರಿಸುವುದು ಹೇಗೆ ಎಂದು ಎಲ್ಲರಿಗೂ ಸಮಸ್ಯೆ ಯಾಗಿದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಬೆಳಗಾಂನಿಂದ ರಾಜೀವ ಗಾಂಧಿಯವರನ್ನು ನೋಡಲು ೪–೫ ನೂರು ಜನರನ್ನು ಕರೆದುಕೊಂಡು ಹೋದರು. ಈ ಸರ್ಕಾರ ಕೊಟ್ಟ ವಚನವನ್ನು ಪಾಲನೆ ಮಾಡುತ್ತಿಲ್ಲ. ಆಲ್ ಪಾರ್ಟಿ ಡೆಲಿಗೇಷನ್ ತೆಗೆದುಕೊಂಡು ಹೋಗುತ್ತೇವೆ ದು ಮುಖ್ಯ ಮಂತ್ರಿಗಳು ಇಲ್ಲಿ, ಅಲ್ಲಿ, ಬಳ್ಳಾರಿ ಸೈಕಲ್ ರ್‍ಯಾಲಿ ಎದುರಿಗೆ ಮಾತನಾಡಿದರು. ಅದು ಬರಲಿಲ್ಲ, ಇವರು ಹೋಗಲಿಲ್ಲ. ಇವತ್ತು ಬರಗಾಲಪೀಡಿತ ಪ್ರದೇಶದಲ್ಲಿ ದನಕರುಗಳು ಏನು ಸಾಯುವ ಸ್ಥಿತಿಯಲ್ಲಿವೆ ಅದನ್ನು ತಪ್ಪಿಸಬೇಕು. ಅದಕ್ಕೆ ಸಮಿತಿಯವರು ಏನು ಸೂಚನೆಗಳನ್ನು ಕೊಟ್ಟಿದ್ದಾರೆ ಅದನ್ನು ಯುದ್ಧದೋಪಾದಿಯದಲ್ಲಿ ಕಾರ್ಯಗತ ಮಾಡಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಅಧ್ಯಕ್ಷರೆ, ಮೊದಲು ನಾನು ಕಂದಾಯ ಮಂತ್ರಿಗಳನ್ನು ಹಾಗೂ ಖರ್ಗೆಯವರನ್ನು ಅಭಿನಂದಿಸುತ್ತಿದ್ದೇನೆ. ಏಕೆಂದರೆ ಸಮ ಯೋಚಿತವಾಗಿ ಸದನದ ಮುಂದೆ ಬರಗಾಲ ಪರಿಸ್ಥಿತಿಯ ಅಧ್ಯಯನ ಮಾಡಿ ವರದಿಯನ್ನು ಮಂಡಿಸಿದ್ದಕ್ಕೆ.

ಶ್ರೀ ಎಂ. ಎಸ್. ಕೃಷ್ಣನ್.—ಖರ್ಗೆಯವರಿಗೆ ಖುಷಿಯಾಗಿದೆ. ಹೆಂಗಸರು ಅಭಿನಂದನೆ ಸಿಗು ವುದು ಕಷ್ಟ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಒಳ್ಳೆಯ ಕೆಲಸ ಮಾಡಿದಾಗ ಅಭಿನಂದಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಎಲ್ಲರ ಅಳಿವಿನ-ಉಳಿವಿನ ಪ್ರಶ್ನೆಯಾದ್ದರಿಂದ ವರದಿ ಯನ್ನು ಅಂಗೀಕಾರ ಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಬೆಳಗಾಂ ಜಿಲ್ಲೆಗೆ ಸಮಿತಿ ಬಂದಾಗ ನನ್ನ ಸಹೋ ದ್ಯೋಗಿ ಶಾಸಕರು ಭೇಟಿ ಮಾಡಿ ಬೆಳಗಾಂ ಜಿಲ್ಲೆಯ ಪರಿಸ್ಥಿತಿಯನ್ನು ಹೇಳಿದ್ದಾರೆ. ನನ್ನ ಕ್ಷೇತ್ರದ ಬಗ್ಗೆ ಮಾತನಾಡುವಾಗ ಅನೇಕ ಜನ ಶಾಸಕರು ಕೃಷ್ಣ ನದಿಯ ದಂಡೆಯಲ್ಲಿದ್ದಾರಲ್ಲ ಎಂದು ಪ್ರಶ್ನಿಸು ತ್ತಿದ್ದಾರೆ. ಅಥಣಿ ತಾಲ್ಲೂಕಿನಲ್ಲಿ ಎರಡು ಕ್ಷೇತ್ರಗಳಿವೆ. ಕೃಷ್ಣ ನದಿ ಹರಿಯುವ ಕ್ಷೇತ್ರವೆ ಬೇರೆ, ನನ್ನ ಕ್ಷೇತ್ರವೇ ಬೇರೆ. ನನ್ನ ಮತಕ್ಷೇತ್ರದಲ್ಲಿ ಭೀಕರ ಬರಗಾಲ ಇದೆ. ಅಷ್ಟೆ ಅಲ್ಲದೆ, ನನ್ನ ಮತ ಕ್ಷೇತ್ರ ಗಡಿನಾಡಿನ ಪ್ರದೇಶದಲ್ಲಿದೆ ಎಂದರೆ ತಪ್ಪಾಗಲಾರದು. ಮುಖ್ಯ ಮಂತ್ರಿಗಳು ಬೆಳಗಾಂ ಜಿಲ್ಲೆಯ ಬಗ್ಗೆ ಬರೆದಿರುವ ಕಾಗದ ನನ್ನ ಕೈಸೇರಿದೆ. ೩೦ ಹಳ್ಳಿಗಳು ಕರ್ನಾಟಕದ ಗಡಿ ಭಾಗದಲ್ಲಿ ಬರತಕ್ಕ ಹಳ್ಳಿಗಳು ಆಗಿವೆ. ಅಲ್ಲಿ ವಯಸ್ಕರು ಯಾರು ಉಳಿದಿಲ್ಲ. ಉಳಿದಿದ್ದರೆ ಮುದುಕರು ಮಕ್ಕಳು ಇದ್ದಾರೆ. ಯುವಕರೆಲ್ಲಾ ಮಹಾರಾಷ್ಟ್ರಕ್ಕೆ ವಲಸೆ ಹೋಗಿದ್ದಾರೆಂದು ದುಃಖದಿಂದ ಹೇಳು ತ್ತಿದ್ದೇನೆ. ಅನೇಕ ಹಳ್ಳಿಗಳಲ್ಲಿ ೧೦೦–೧೫೦ ಜನ ಮಹಿಳೆಯರು ಪುರುಷರು ಮಹಾರಾಷ್ಟ್ರಕ್ಕೆ ಹೋಗಿದ್ದಾರೆ. ಕೃಷ್ಣ ನದಿ ದಂಡೆಯಲ್ಲಿ ಕಬ್ಬು ಬೆಳೆಯುತ್ತಿದ್ದಾರೆ, ಫಲವತ್ತಾದ ಭೂಮಿ ಇದೆ. ಅಲ್ಲಿಗೆ ಕೆಲಸಕ್ಕೆ ಹೋಗಿದ್ದಾರೆ. ೫೪ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ. ಈ ಸಾರಿ ಬೊಮ್ಮಾಯಿ ಯವರು ದೊಡ್ಡ ಮನಸ್ಸು ಮಾಡಿ ಆ ಹಳ್ಳಿಗಳನ್ನು ಬರಗಾಲಪೀಡಿತ ಪ್ರದೇಶವೆಂದು ಡಿಕ್ಲೇರ್ ಮಾಡಿದ್ದಾರೆ. ಅದಕ್ಕೆ ಅಭಿನಂದಿಸಬೇಕಾಗಿದೆ. ಬರಗಾಲದ ಕೆಲಸವನ್ನು ಮಳೆ ಬಂತು ಎಂದು ೧೫ ದಿನಕ್ಕೆ ಅಥವಾ ತಿಂಗಳಿಗೆ ನಿಲ್ಲಿಸಿದರೆ ಕೆಲಸ ಪೂರ್ಣವಾಗುವುದಿಲ್ಲ. ಯಾವುದೇ ಯೋಜನೆಯನ್ನು ತೆಗೆದುಕೊಳ್ಳಿ, ಅದರ ಬಗ್ಗೆ ಮುಖ್ಯವಾದ ಸಲಹೆಗಳನ್ನು ಸದನದ ಸಮಿತಿಯವರು ಕೊಟ್ಟಿದ್ದಾರೆ. ಐ. ಪಿ. ಸೆಟ್. ಎಂ. ಐ. ಟ್ಯಾಂಕು ಮತ್ತು ಲಿಫ್ಟ್ ಇರಿಗೇಷನ್. ಲಿಫ್ಟ್ ಇರಿಗೇಷನ್ ಕೇವಲ ೧೫ ದಿವಸ ಅಥವಾ ತಿಂಗಳಲ್ಲಿ ಮಾಡತಕ್ಕ ಕೆಲಸ ಅಲ್ಲ. ಕೆರೆ ಹೂಳು ತೆಗೆಯುವುದಾದರೆ ತಿಂಗಳಲ್ಲಿ ಮಾಡ

ಬಹುದು. ಲಿಫ್ಟ್ ಇರಿಗೇಷನ್ನಿಗೆ ೬ ತಿಂಗಳು ಅಥವಾ ಒಂದು ವರ್ಷವಾದರೂ ಬೇಕಾಗುತ್ತದೆ. ಮಳೆ ಬಂದರೂ ಬೆಳೆ ಬಂದು ಬಡವರ ಬಾಯಿಗೆ ಜೋಳ ಸಿಗಬೇಕಾದರೆ ೧೦-೧೨ ತಿಂಗಳಾಗುತ್ತದೆ. ಇವತ್ತು ಏನು ಅಡಿಷನಲ್ ಫಂಡ್ಸ್ ಬರುತ್ತಿದೆ ಅದರಲ್ಲಿ ನಮ್ಮ ಕ್ಷೇತ್ರಕ್ಕೆ ಒಂದಾದರೂ ಲಿಫ್ಟ್ ಇರಿಗೇಷನ್ ಮಾಡಿಕೊಡಿ. ಕೃಷ್ಣಾ ನದಿ ಅನೇಕ ಹಳ್ಳಿಗಳಿಗೆ ೪-೬-೮ ಕಿಲೋಮೀಟರ್ ದೂರ ದಲ್ಲಿದೆ. ಅಲ್ಲಿ ಒಂದು ಲಿಫ್ಟ್ ಇರಿಗೇಷನ್ ಮಾಡಿದರೆ ೪-೫ ಸಾವಿರ ಎಕರೆ ಜಮೀನಿಗೆ ನೀರು ದೊರೆಯುತ್ತದೆ. ತಮ್ಮ ಮೂಲಕ ಕಂದಾಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಅವರು ಲೋಕೋಪಯೋಗಿ ಮಂತ್ರಿಗಳನ್ನು ಕನ್‌ವಿನ್ಸ್ ಮಾಡಿ ಲಿಫ್ಟ್ ಇರಿಗೇಷನ್ ಮಾಡಿಸಿಕೊಡಬೇಕೆಂದು ಹೇಳುತ್ತೇನೆ. ಕುಡಿಯುವ ನೀರಿನ ವ್ಯವಸ್ಥೆಗಾಗಿ ಸಾಕಷ್ಟು ಬೋರ್‌ವೆಲ್‌ಗಳನ್ನು ಹಾಕಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಕೆರೆಕೋಪ ಎಂಬ ಪವಿತ್ರವಾದ ಸ್ಥಳ ಇದೆ, ಅದರ ಸುತ್ತಮುತ್ತ ೫-೧೦ ಬೋರ್ ವೆಲ್‌ಗಳನ್ನು ತೆಗೆದರೆ ಉಪ್ಪುನೀರು ಬೀಳುತ್ತಿದೆ. ೪-೫ ನೂರು ಅಡಿ ತೆಗೆದರೂ ಸಿಹಿ ನೀರು ಬೀಳುವುದಿಲ್ಲ. ಅಂಥ ಕಡೆ ಟ್ಯಾಂಕರ್‌ನಿಂದ ೨೦-೨೫ ಕಿಲೋಮೀಟರ್ ನೀರು ತೆಗೆದುಕೊಂಡು ಹೋಗ ಬೇಕಾದರೆ ಬಹಳ ಕಷ್ಟವಾಗುತ್ತಿದೆ. ಅಲ್ಲಿ ಖಾಯಂ ಆಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಿನಿ ವಾಟರ್ ಸಪ್ಲೈ ಎಂದು ಏನು ಹೇಳಿದ್ದೀರಿ ಆ ಯೋಜನೆ ಮೂಲಕ ಮಾಡಿಕೊಡಬೇಕೆಂದು ಹೇಳುತ್ತೇನೆ. ಬರಗಾಲದ ವ್ಯಾಪ್ತಿಯಲ್ಲಿ ಏನು ಹಣ ಖರ್ಚು ಮಾಡುತ್ತೀರಿ ಅದನ್ನು ಇದಕ್ಕೆ ಒದಗಿಸಬೇಕೆಂದು ಹೇಳುತ್ತೇನೆ. ಹೋದ ತಿಂಗಳು ಕಷ್ಟವಾದ ಕೆಲಸಗಳನ್ನು ಗಂಡಸರಿಗೆ ಕೊಟ್ಟು ಹೆಣ್ಣು ಮಕ್ಕಳಿಗೆ ಕೆಲಸಕ್ಕೆ ಬರಬೇಡಿ ಎಂದು ಹೇಳಿದುಂಟು. ಅವರ ಕೆಲಸಕ್ಕೆ ರೂ ೭-೮೦ ಪೈಸೆ ಕೊಟ್ಟಿದ್ದನ್ನು ಕುಡಿದು ಹಾಳು ಮಾಡಿ ಮನೆಗೆ ಹೋದಾಗ ಹೆಂಡತಿ ಮಕ್ಕಳು ಉಪವಾಸ ಇರತಕ್ಕ ಪರಿಸ್ಥಿತಿ ಇದೆ. ಕಡ್ಡಾಯವಾಗಿ ರಸ್ತೆ, ಬಾವಿ, ನೀರಿನ ಕೆಲಸ ಹೀಗೆ ಯಾವುದೇ ಬರಗಾಲದ ಕೆಲಸವನ್ನು ಹಳ್ಳಿಯಲ್ಲಿರತಕ್ಕ ೫೦ ಪರ್ಸೆಂಟ್ ಮಹಿಳೆಯರಿಗೆ ಕೊಡಬೇಕು. ಕೂಲಿ ಅವರ ಕೈಗೆ ಹೋಗತಕ್ಕ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಬಹಳ ಮುಖ್ಯ. ಗಂಡಸರ ಕೈಗೆ ಹೋದರೆ ಕುಡಿದು ಹಾಳು ಮಾಡುತ್ತಾರೆ. ಆದ್ದರಿಂದ ಕಷ್ಟಪಟ್ಟು ಕೆಲಸ ಮಾಡುವ ಹೆಂಗಸರ ಕೈಗೇ ಕೂಲಿ ಹೋಗತಕ್ಕ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯ ಜಿಲ್ಲಾಧಿ ಕಾರಿಗಳು ಹೇಳಿದರು, ಈ ಬಗ್ಗೆ ಮೇಲ್ವಿಚಾರಣೆ ಮಾಡುವುದಕ್ಕೆ ಇಂಜಿನಿಯರ್‌ಗಳನ್ನು ನೇಮಿಸು ತ್ತೇವೆಂದು. ಅಲ್ಲಿ ಇಂಜಿನಿಯರ್‌ಗಳ ಅವಶ್ಯಕತೆ ಇಲ್ಲ. ಡಿಪ್ಲೊಮಾ ಹೋಲ್ಡರ್ಸ್, ಅನ್ ಎಂಪ್ಲಾಯ್ಡ್ ಗ್ರಾಜುಯೇಟ್ಸ್ ಅನ್ನು ತೆಗೆದುಕೊಂಡು ಹಳ್ಳಿಯವರನ್ನು ಅದರಲ್ಲಿ ಇನ್‌ವಾಲ್ವ್ ಮಾಡಿ. ಸಾಮಾನ್ಯವಾಗಿ ಹಳ್ಳಿಯಲ್ಲಿ ಜಗಳ ನಡೆಯುತ್ತಿರುತ್ತದೆ. ೭-೮೦ ಪೈಸೆ ಕೊಡುವುದ ಕ್ಕಾಗುವುದಿಲ್ಲ, ನೀವು ಮಾಡಿರುವ ಕೆಲಸ ೪-೫೦ ಪೈಸೆಯದು, ಆದ್ದರಿಂದ ನಿನ್ನ ಕೂಲಿ ೪-೫೦ ಪೈಸೆ ಎಂದು. ಅದನ್ನು ತೀರ್ಮಾನ ಮಾಡುವುದಕ್ಕೆ ಬುದ್ಧಿವಂತರು ಬೇಕಾಗುತ್ತಾರೆ. ನಿರುದ್ಯೋಗಿ ಯುವಕರು ಮತ್ತು ವಿದ್ಯಾವಂತರು ಏನಿದ್ದಾರೆ ಅವರನ್ನು ಇನ್‌ವಾಲ್ವ್ ಮಾಡಿ ಬರಗಾಲಕ್ಕೆ ತುತ್ತಾದ ಜನರಿಗೆ ಸಲ್ಲತಕ್ಕ ಕೂಲಿ ಸರಿಯಾಗಿ ಸಲ್ಲತಕ್ಕ ವ್ಯವಸ್ಥೆ ಆಗಬೇಕೆಂದು ಹೇಳುತ್ತೇನೆ. ಇದರ ಜೊತೆಯಲ್ಲಿ ಮೇವಿನ ಅಭಾವದ ಬಗ್ಗೆ ಈಗತಾನೇ ಮಾತನಾಡಿದ ತಂಗಳ್ ಅವರು ಹೇಳಿದರು, ನಮ್ಮ ಕ್ಷೇತ್ರಕ್ಕೆ ಮೇವು ಬರಬೇಕಾದರೆ ೭೦ ಕಿಲೋಮೀಟರ್ ದೂರದಲ್ಲಿರುವ ಬಿಜಾಪುರ ಜಿಲ್ಲೆಯಿಂದ ಬರಬೇಕು ಎಂದು. ಮೇವು ಅಲ್ಲಿಂದ ಬಂದಾಗ ಅದಕ್ಕೆ ಜಿಲ್ಲಾಧಿಕಾರಿಗಳು ಅನುಮತಿ ಕೊಟ್ಟು ಬೆಳಗಾಂ ತಹಶೀಲ್ದಾರರು ಜಿಲ್ಲಾಧಿಕಾರಿಗಳಿಗೆ ಬರೆದು ರಿಲೀಸ್ ಮಾಡುವುದಕೆ ಹಣ ಸಂದಾಯ ಮಾಡಬೇಕಾಗಿರುವುದರಿಂದ ೮-೧೦ ದಿನಗಳಿಂದ ದನಗಳಿಗೆ ಮೇವು ಬರುತ್ತಿಲ್ಲ.

೩-೩೦ ಪಿ. ಎಂ.

ದನ ಉಪವಾಸ ಇರತಕ್ಕ ಪರಿಸ್ಥಿತಿ ಇದೆ. ೧೦ ಟ್ರಕ್, ೨೦ ಟ್ರಕ್ ಮೇವು ಬಂದರೆ ತಕ್ಷಣ ಹಣ ಸಂದಾಯ ಮಾಡತಕ್ಕ ವಿಕೇಂದ್ರೀಕರಣದ ಅಧಿಕಾರವನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಬರಗಾಲ ಪರಿಸ್ಥಿತಿಯಲ್ಲಾದರೂ ಕೊಡಬೇಕು. ಆ ರೀತಿಯ ಆದೇಶವನ್ನು ಕಂದಾಯ ಮಂತ್ರಿಗಳು ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ. ಬರಗಾಲ ಪ್ರದೇಶಕ್ಕೋಸ್ಕರ ಹೆಚ್ಚುವರಿ ಹಣ ಏನು ಬರುತ್ತಿದೆ ಅದರಿಂದ ಯಾವುದಾದರೂ ಸಣ್ಣ ನೀರಾವರಿ ಕೆಲಸವನ್ನು, ಕುಡಿಯುವ ನೀರಿನ ಕೆಲಸವನ್ನು ಮಾಡ ಬೇಕು, ೧೯೮೫ರಲ್ಲಿ ಬರಗಾಲ ಬಂದಾಗ ನಮ್ಮ ಊರಿಗೆ ಕುಡಿಯುವ ನೀರಿನ ವ್ಯವಸ್ಥೆ ಆಯಿತು, ಸಣ್ಣ ನೀರಾವರಿ ಕೆಲಸ ಆಯಿತು ಎಂದು ಜನ ಅಂದುಕೊಳ್ಳುವಂಥ ಶಾಶ್ವತ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಆ ಕೆಲಸಗಳು ಸುವ್ಯವಸ್ಥಿತವಾಗಿ ನಡೆಸುವುದಕ್ಕೆ ಮಾನ್ಯ ಕಂದಾಯ ಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕು. ಮತ್ತು ಎಲ್ಲ ಬರಗಾಲ ಪ್ರದೇಶಗಳಿಗೆ ಅಸೆಂಬ್ಲಿ ಅಧಿವೇಶನ ಮುಗಿದ ಮೇಲೆ ಪ್ರವಾಸ ಮಾಡುವಂಥ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

† ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷರೆ, ಒಳ್ಳೆಯ ವರದಿಯನ್ನು ಕಳುಹಿಸಿ ಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚಿನ ಚಿಂತನೆಯನ್ನು ಸರ್ಕಾರ ಮಾಡಬೇಕಾಗುತ್ತದೆ.. ೧೭ ಜಿಲ್ಲೆಗಳಲ್ಲಿ ಬರಗಾಲ ಈಗ ಬಂದಿದ್ದು ಕೊಡಗಿನಲ್ಲಿ ಕೂಡ ಬರಗಾಲ ಬರತಕ್ಕ ಪರಿಸ್ಥಿತಿ ಇದೆ, ಕೊಡಗಿನಲ್ಲಿ ಇಲ್ಲ ಎಂದು ಡಿಕ್ಲೇರ್ ಮಾಡಿದ್ದರೂ ಕೊಡಗಿನ ವಿರಾಜಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಬರಗಾಲ ಪರಿಸ್ಥಿತಿ ಇದೆ. ಬೆಳೆಗಳು ಸರಿಯಾಗಿಲ್ಲ ಬಿತ್ತನೆ ಕೂಡ ಆಗಿಲ್ಲ. ಮಾನ್ಯ ಸಚಿವರಾದ ಜೀವಿಜಯ ಅವರು ಇರತಕ್ಕ ತಾಲ್ಲೂಕಿನಲ್ಲಿ ಕೂಡ ೬೦-೭೦ ಗ್ರಾಮಗಳಲ್ಲಿ ಬಿತ್ತನೆ ಮಾಡದೆ ಇದ್ದಾರೆ. ಜನರು ಬಹಳಷ್ಟು ಕಷ್ಟಪಡುತ್ತಿದ್ದಾರೆ. ಹಣಕ್ಕೆ ತೊಂದರೆಯಾಗಿದೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಇದರ ಬಗ್ಗೆ ನನ್ನ ಸಲಹೆ ಏನೆಂದರೆ ಮುಖ್ಯಮಂತ್ರಿಗಳು ಪಾದಯಾತ್ರೆ ಮಾಡಿದರೆ ಬರಗಾಲ ನಿವಾರಣೆಗೆ ಬೇಕಾದಷ್ಟು ಹಣ ಸಿಗಬಹುದೆಂದು ಹೇಳ ಬಯಸುತ್ತೇನೆ. ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಪಾದಯಾತ್ರೆ ಮಾಡಿದರೆ ಹಣ ಸಿಗುವ ಪರಿಸ್ಥಿತಿ ಇದೆ. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಒಣ ಹುಲ್ಲು ಸಿಗುತ್ತದೆ. ಅದನ್ನು ಅಲ್ಲಿಂದ ತಂದು ಬರಗಾಲ ಪರಿಸ್ಥಿತಿ ಇರತಕ್ಕ ಪ್ರದೇಶದಲ್ಲಿ ಜಾನುವಾರುಗಳಿಗೆ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಈಗ ಇದು ಕೇರಳ ರಾಜ್ಯಕ್ಕೆ ಹೋಗುತ್ತಿದೆ. ಇದನ್ನು ತಡೆಗಟ್ಟಿ ಕರ್ನಾಟಕದಲ್ಲಿ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊಡಗಿನಲ್ಲಿ ಹೊಳೆ ಹರಿಯುತ್ತಿದೆ. ಅಲ್ಲಿ ಪಂಪ್‌ಸೆಟ್ ಹಾಕತಕ್ಕ ವ್ಯವಸ್ಥೆ ಮಾಡಿ ನೀರನ್ನು ಬಳಸಿ ಕೊಂಡು ಬೆಳೆಯನ್ನು ರಕ್ಷಣೆ ಮಾಡಬೇಕೆಂದು ಸಲಹೆ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಸ್. ಬೀಳಗಿ (ಬ್ಯಾಡಗಿ).—ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಬಂದಂಥ ಬರಗಾಲ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಸವಿಸ್ತಾರವಾದ ವರದಿಯನ್ನು ಒಪ್ಪಿಸುವುದಕ್ಕೆ ಸರ್ಕಾರದವರು ಒಂದು ಕಮಿಟಿಯನ್ನು ನೇಮಿಸಿದ್ದಕ್ಕಾಗಿ ಸರ್ಕಾರದವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆ ಕಮಿಟಿಯವರು ಕೂಡಲೇ ಕಾರ್ಯಪ್ರವೃತ್ತರಾಗಿ ವಿಶ್ರಾಂತಿ ಕಡೆಗೆ ಹೆಚ್ಚು ಲಕ್ಷ್ಯ ಕೊಡದೆ ೨೦-೨೫ ದಿವಸಗಳಲ್ಲಿ ಇಡೀ ರಾಜ್ಯವನ್ನು ಸುತ್ತಿ ಇದ್ದ ಪರಿಸ್ಥಿತಿಯನ್ನು ಯಾವುದೇ ಬಣ್ಣ ಕೊಡದೆ, ಭೇದಭಾವ ಮಾಡದೆ ವರದಿಯನ್ನು ಒಪ್ಪಿಸಿದ್ದಾರೆ. ಇದು ಸರ್ವಾನುಮತದ ವರದಿಯಾಗಿದೆ. ಈ ವರದಿಯ ಅವಲೋಕನವನ್ನು ಮಾಡಿದರೆ ಇಡೀ ರಾಜ್ಯದಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು ಬಿಟ್ಟರೆ, ಅಲ್ಲಿಯೂ ಚಿನ್ನಪ್ಪನವರು ಪರಿಸ್ಥಿತಿ ಗಂಭೀರವಾಗಿದೆ ಎಂದು ಹೇಳಿದ್ದಾರೆ, ರೆವಿನ್ಯೂ ಮಂತ್ರಿಗಳು ರಿಪ್ಲೈನಲ್ಲಿ ಹೇಳಿದಂತೆ ಬಹಳ ಗಂಭೀರವಾದ ಪರಿಸ್ಥಿತಿ ನಮ್ಮ ರಾಜ್ಯಕ್ಕೆ ಬಂದಿದೆ. ಧಾರವಾಡ ಜಿಲ್ಲೆ ಬಗ್ಗೆ ಕೆಲವು ಸಂಗತಿಗಳನ್ನು ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಗೆ ಮಲ್ಲಪ್ಪನವರು ಹಾಗೂ ಅವರ ಸಂಗಡಿಗರು ಕಳೆದ ತಿಂಗಳು ೨೬ನೇ ತಾರೀಖು ಭೇಟಿ ಕೊಟ್ಟಾಗ ನಾವು ಎಲ್ಲಾ ಹೇಳಿದ್ದೇವೆ. ಕೆಲವು ತಾಲ್ಲೂಕುಗಳಲ್ಲಿ ಬಿತ್ತನೆ ಮಾಡಿದ್ದಾರೆ. ಆದರೆ ಇಂದಿಗೂ ಮಳೆ ಇಲ್ಲ. ಇನ್ನು ೮ ದಿವಸದಲ್ಲಿ ಮಳೆ ಬರದೇಹೋದರೆ ಎಲ್ಲ ಬೆಳೆ ಒಣಗಿಹೋಗುತ್ತದೆ. ಈಗಲೇ ಅರ್ಧ ಬೆಳೆ ಒಣಗಿದೆ. ಸ್ವಲ್ಪ ಮಳೆಯಾದ್ದರಿಂದ ಮಯಸ್ಸಾದ ಸಸಿಗಳನ್ನು ನೆಟ್ಟಿದ್ದಾರೆ. ಮತ್ತೆ ಇವತ್ತಿನವರೆಗೂ ಮಳೆ ಆಗಲಿಲ್ಲ. ಇದರಿಂದ ಪರಿಸ್ಥಿತಿ ಗಂಭೀರವಾಗಿದೆ. ಇದು ದುರ್ದೈವ. ಈ ಸಂದರ್ಭದಲ್ಲಿ ಒಂದು ಮಾತು ಹೇಳಿದರೆ ತಪ್ಪಾಗುವುದಿಲ್ಲ. ಧಾರವಾಡ ಜಿಲ್ಲೆ ೧೭ ತಾಲ್ಲೂಕುಗಳನ್ನು ಹೊಂದಿದ ದೊಡ್ಡ ಜಿಲ್ಲೆ. ಅವರಲ್ಲಿ ಯಾವಾಗಲೂ ೫ ತಾಲ್ಲೂಕುಗಳಲ್ಲಿ ಬರಗಾಲ ಬರುತ್ತಿರಲಿಲ್ಲ. ಮಳೆ ಪ್ರಮಾಣ ಅಲ್ಲಿ ಯಾವಾಗಲೂ ಸರಿಯಾಗಿರುತ್ತಿತ್ತು. ಈ ವರ್ಷ ಆ ಐದು ತಾಲ್ಲೂಕಿನಲ್ಲಿ ಕೂಡ ಮಳೆ ಇಲ್ಲದೆ ಬರಗಾಲ ಬಂದಿದೆ. ಕುಡಿಯುವ ನೀರಿಗೂ ತೊಂದರೆಯಾಗಿದೆ. ದನಗಳ ಪರಿಸ್ಥಿತಿ ಚಿಂತಾಜನಕವಾಗಿದೆ, ನಮ್ಮ ಜಿಲ್ಲೆಯಲ್ಲಿರತಕ್ಕ ೨೯,೪೫,೪೮೭ ಜನರಲ್ಲಿ ೧೯,೦೭,೨೯೯ ಜನ ಬರಗಾಲದ ಬವಣೆಗೆ ಸಿಕ್ಕಿಹಾಕಿಕೊಂಡಿದ್ದಾರೆ ಎಂದು ವರದಿಯಲ್ಲಿ ಹೇಳಿದ್ದಾರೆ. ೨೫ನೇ ತಾರೀಖಿನಿಂದ ಇಲ್ಲಿಯವರೆಗೆ ಪರಿಸ್ಥಿತಿಯನ್ನು ಗಮನಿಸಿದರೆ ೧೦ ಲಕ್ಷ ಜನ ಬರಗಾಲದ ದವಡೆಯಿಂದ ಹೊರಗೆ ಉಳಿದಿದ್ದಾರೆಂದು ಏನು ಹೇಳಿದ್ದರು ಆದರಲ್ಲಿ ೫ ಲಕ್ಷ ಜನ ಮತ್ತೆ ಬರಗಾಲಕ್ಕೆ ತುತ್ತಾಗಿದ್ದಾರೆ. ಸ್ಮಾಲ್ ಫಾರ್ಮರ್ಸ್ ೪೧ ಸಾವಿರ ಜನ, ಮಾರ್ಜಿನಲ್ ಫಾರ್ಮರ್ಸ್ ೭೯,೮೬೯ ಜನ, ಕೃಷಿಕಾರ್ಮಿಕರು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೪,೭೯,೩೫೫ ಜನ ಎಂದು ಹೇಳಿದ್ದಾರೆ. ಈ ಅಂಕಿಸಂಖ್ಯೆ ಕೂಡ ನಿಜವೆಂದು ಅಂದುಕೊಂಡರೂ ನಾನು ಸಮಿತಿ ಮುಂದೆ ಹೇಳಿದೆ, ಸ್ಮಾಲ್ ಫಾರ್ಮರ್ಸ್ ಅಷ್ಟೇ ಅಲ್ಲ, ೧೦-೧೫ ಎಕರೆ ಜಮೀನು ಹೊಂದಿರುವ ರೈತರೂ ಕೂಡ ಕೆಲಸ ಕೊಡಿ ಎಂದು ಕೂಲಿಗಾಗಿ ಒದ್ದಾಡುತ್ತಿದ್ದಾರೆ. ಪರಿಸ್ಥಿತಿ ಈಗ ಇನ್ನೂ ಗಂಭೀರವಾಗಿದೆ. ಧಾರವಾಡ ಜಿಲ್ಲೆಯಲ್ಲಿರತಕ್ಕ ಸ್ಮಾಲ್, ಮಾರ್ಜಿನಲ್ ಅಗ್ರಿಕಲ್ಚರಲ್ ಲೇಬರರ್ಸ್ ಏನಿದ್ದಾರೆ ಅವರ ಸಂಖ್ಯೆ ೫,೫೦.೨೧೬ ಎಂದು ಹೇಳುತ್ತಾರೆ. ಅವರೆಲ್ಲರೂ ಬರಗಾಲದ ಪರಿಸ್ಥಿತಿಗೆ ಒಳಗಾಗಿದ್ದಾರೆ ಎಂದು ಹೇಳಿದ್ದಾರೆ. ಧಾರವಾಡ ಜಿಲ್ಲೆ ಬಹಳ ಗಂಭೀರವಾದ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಇವರು ಕೊಟ್ಟಿರುವ ಅಂಕಿಸಂಖ್ಯೆ ಪ್ರಕಾರ ೫,೧೭೭ ಬೋರ್‌ವೆಲ್‌ಗಳನ್ನು ಹಾಕಿಸಿದ್ದಾರೆ. ಅದರಲ್ಲಿ ೧೧೧ ಬೋರ್‌ವೆಲ್‌ಗಳು ಕೆಟ್ಟಿವೆ ಎಂದು ಹೇಳಿದ್ದಾರೆ. ೫,೧೭೭ ರಲ್ಲಿ ಅರ್ಧಕ್ಕಿಂತ ಹೆಚ್ಚು ಬೋರ್‌ವೆಲ್‌ಗಳಲ್ಲಿ ನೀರು ಕೆಳಗೆ ಹೋಗಿ ಜನರಿಗೆ ಕುಡಿಯುವ ನೀರು ಸಿಗುತ್ತಿಲ್ಲ. ನನ್ನ ಬ್ಯಾಡಗಿ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ಅಲ್ಲಿ ೧೩೦ ಕೆರೆಗಳಿವೆ. ೧೧೧ ನಾಲಾ ಬಂಡಿಂಗ್ ಮಾಡಿದ್ದಾರೆ. ಅಲ್ಲಿ ಒಂದು ಹನಿ ಕೂಡ ನೀರಿಲ್ಲ. ಜನರಿಗೆ ಕುಡಿಯುವುದಕ್ಕೆ ನೀರಿಲ್ಲ. ದನಗಳಿಗೆ ಮೇವಿಲ್ಲ. ಜನಗಳಿಗೇನೋ ಕೆಲಸ ಒದಗಿಸಬಹುದು. ಆಹಾರ ಸಾಮಗ್ರಿ ಒದಗಿಸಬಹುದು. ಆದರೆ ದನಗಳ ಮೇವು ಮತ್ತು ಕುಡಿಯುವ ನೀರಿನ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕು, ಮೇವಿನ ವ್ಯವಸ್ಥೆ ಕೂಡಲೇ ಮಾಡಿ ಜನಗಳಿಗೆ ಆಗಿರುವ ತೊಂದರೆಯನ್ನು ತಪ್ಪಿಸಬೇಕೆಂದು ಸಂದರ್ಭದಲ್ಲಿ ಕಳಕಳಿಯಿಂದ ಈ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ, ಇನ್ನು ನಮ್ಮ ಜಿಲ್ಲೆ ೧೭ ತಾಲ್ಲೂಕುಗಳನ್ನು ಹೊಂದಿದಂತಹ ಜಿಲ್ಲೆ. ಸಾಧಾರಣ ೨-೩ ತಾಲ್ಲೂಕುಗಳನ್ನು ಬಿಟ್ಟರೆ ಇಡೀ ಜಿಲ್ಲೆ ಬರಗಾಲಕ್ಕೆ ಒಳಗಾಗಿದೆ. ಬಹಳ ಜನ ತಪ್ಪು ತಿಳಿದುಕೊಂಡಿದ್ದಾರೆ. ಕಂದಾಯ ಮಂತ್ರಿಗಳು ಧಾರವಾಡ ಜಿಲ್ಲೆಯವರು, ಬರಗಾಲಕ್ಕೆ ಬೇಕಾದಂತೆ ಹೆಚ್ಚು ಹಣವನ್ನು ಆ ಜಿಲ್ಲೆಗೆ ಕೊಟ್ಟಿದ್ದಾರೆಂದು. ಆದರೆ ಅದು ಆ ರೀತಿ ಆಗಿಲ್ಲ. ಆ ಕೆಲಸವನ್ನು ಅವರು ಮಾಡಬೇಕಾಗಿತ್ತು. ಮಾಡಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಜಿಲ್ಲೆಗೆ ಕೊಟ್ಟಂತಹ ಹಣ ೧,೨೫,೦೦೦-೦೦ ರೂಪಾಯಿಗಳು. ಲೋಕೋಪಯೋಗಿ ಮತ್ತು ಬೇರೆ ಬೇರೆ ಇಲಾಖೆಗಳು ಸೇರಿ ಖರ್ಚು ಮಾಡಿದಂತಹ ಹಣ ೫೭.೩೮ ಲಕ್ಷ ರೂಪಾಯಿಗಳು. ಹೀಗಾಗಿ ಈ ಒಂದು ವರದಿ ಬರುವ ಕಾಲಕ್ಕೆ ೧,೨೦,೦೦೦ ಜನಗಳಿಗೆ ಮಾತ್ರ ಕೆಲಸಗಳನ್ನು ಒದಗಿಸಿಕೊಡಲಾಗುತ್ತದೆ ಎಂಬುದಾಗಿ ವರದಿಯಲ್ಲಿ ಹೇಳಿದ್ದಾರೆ. ಆದರೆ ಅಂದಿನಿಂದ ಇಂದಿನವರೆಗೆ ಸುಮಾರು ೫,೫೦,೦೦೦ ವರೆಗೂ ಜನರಿಗೆ ಕೆಲಸವನ್ನು ಒದಗಿಸಬೇಕಾಗಿ ಬರುತ್ತದೆ. ಆ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನ ಹರಿಸಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇವತ್ತು ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಜಿಲ್ಲೆಗೆ ಹಣವನ್ನು ಬಿಡುಗಡೆ ಮಾಡಬೇಕು. ಜನಗಳಿಗೆ ಕೆಲಸಗಳನ್ನು ಕೊಡದಿದ್ದರೆ ಜನಗಳು ವಲಸೆ ಹೋಗುವಂತಹ ಪರಿಸ್ಥಿತಿ ಬರುತ್ತದೆ. ಯಾರಾದರು ಶಾಸಕರು ಅವರವರ ಕ್ಷೇತ್ರಕ್ಕೆ ಹೋದರೆ ಭಯಪಡಬೇಕಾದಂತಹ ಪರಿಸ್ಥಿತಿ ಬರುತ್ತದೆ. ಪರಿಸ್ಥಿತಿ ಅಷ್ಟು ಗಂಭೀರವಾಗಿದೆ. ಆದುದರಿಂದ ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕು. ನಿನ್ನೆ ನನಗೆ ನಮ್ಮ ಕ್ಷೇತ್ರದಿಂದ ಫೋನ್ ಬಂದಿತ್ತು ಬಿಡುಗಡೆಯಾಗಿರುವಂತಹ ಹಣ ಯಾವುದಕ್ಕೂ ಸಾಲದು ಇಡೀ ಜಿಲ್ಲೆಯಲ್ಲಿ ಆ ಹಣ ಕೇವಲ ಕೆಲವೇ ತಾಲ್ಲೂಕುಗಳಿಗೆ ಮಾತ್ರ ಬರುತ್ತದೆ, ಕೆಲಸ ಮಾಡುವುದಕ್ಕೆ ಏನೂ ಉಳಿಯುವುದಿಲ್ಲ. ದೊಡ್ಡ ದೊಡ್ಡ ರೈತರೂ ಕೂಡ ಕೆಲಸವನ್ನು ಹೇಳುವಂತಹ ಮಟ್ಟಕ್ಕೆ ಬಂದಿದ್ದಾರೆ. ಆದುದರಿಂದ ತಾವು ಕೂಡಲೇ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು ವಿಚಾರವನ್ನು ಇಲ್ಲಿ ಹೇಳಿದರೆ ಅದು ಸರಿಹೋಗುತ್ತದೆ ಎಂಬುದಾಗಿ ನಾನು ಭಾವಿಸಿದ್ದೇನೆ. ಬ್ಯಾಡಗಿ ನಗರದಲ್ಲಿ ಇರತಕ್ಕಂತಹ ಜನಸಂಖ್ಯೆಯಲ್ಲಿ ಶೇಕಡ ೫೦ ರಷ್ಟು ಜನ ಕೂಲಿಕಾರರು ಇದ್ದಾರೆ. ಈ ಕೂಲಿಗಾರರಿಗೆ ಏನಾದರೂ ಕೂಲಿ ಸಿಗುವಂತಹ ವ್ಯವಸ್ಥೆ ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ೬೦ ಎಕ್ಕಾ ಗಾಡಿಗಳನ್ನು ಇಟ್ಟುಕೊಂಡಿರತಕ್ಕಂತಹ ಬಡ ಕೂಲಿಕಾರರು ೮-೧೦ ದಿವಸಗಳ ಹಿಂದೆ ನಾನು ಅಲ್ಲಿಗೆ ಹೋಗಿದ್ದಾಗ ನನ್ನನ್ನು ಘೇರಾವ್ ಮಾಡಿದರು. ಕಾರಣವೇನೆಂದು ಕೇಳಿದಾಗ, ಎತ್ತುಗಳನ್ನು ಮಾರುವ ಪರಿಸ್ಥಿತಿ ಬಂದಿದೆ, ಪೇಟೆಯಲ್ಲಿ ಮೇವು ಸಿಕ್ಕುತ್ತಿಲ್ಲ, ಮೇವಿನ ವ್ಯವಸ್ಥೆಯನ್ನು ಮಾಡಿ ಎನ್ನುವ ಮಾತನ್ನು ಹೇಳಿದ್ದಾರೆ. ಆ ಒಂದು ಕೆಲಸವನ್ನು ಕೂಡಲೇ ಸರ್ಕಾರದವರು ಮಾಡಬೇಕಾಗಿದೆ. ನನ್ನ ಮಿತಿಯಲ್ಲಿ ಆವಾಗ ಕೂಡಲೇ ಮೆಣಸಿನಕಾಯಿ ವ್ಯಾಪಾರಸ್ಥರು ಯಾರು ಇದ್ದಾರೆ, ಅವರನ್ನು ಕೇಳಿಕೊಂಡು ತಾತ್ಕಾಲಿಕವಾದ ವ್ಯವಸ್ಥೆಯನ್ನು ಮಾಡಿ ಬಂದಿದ್ದೇನೆ. ಅದು ಯಾವುದಕ್ಕೂ ಸಾಲುವುದಿಲ್ಲ. ಆದ್ದರಿಂದ ಸುಮಾರಾಗಿ ನಗರಗಳಲ್ಲಿ ದನಗಳನ್ನು ಕಟ್ಟಿಕೊಂಡಿರತಕ್ಕಂತಹ ಜನಗಳಿಗೆ ಮೇವಿನ ಸೌಕರ್ಯವನ್ನು ಮಾಡುವುದು ಅತಿ ಅವಶ್ಯವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಮ್ಮ ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಂದು ೨೬ನೇ ತಾರೀಖು ವರದಿಯನ್ನು ಸಮಿತಿಗೆ ಕೊಟ್ಟಾಗ ೩ ಕೋಟಿ ರೂಪಾಯಿಗಳನ್ನು ಬೇಡಿದ್ದರು

ಇಂದಿನ ಪರಿಸ್ಥಿತಿಯಲ್ಲಿ ೫ ಕೋಟಿಗಿಂತ ಕಡಿಮೆ ಹಣವನ್ನು ಕೊಟ್ಟರೆ ಅದರಿಂದ ಏನೂ ಉಪಯೋಗವಾಗದ ಹಾಗೆ ಆಗುತ್ತದೆ. ಆದ್ದರಿಂದ ಮಾನ್ಯ ಕಂದಾಯ ಮಂತ್ರಿಗಳು ತಮ್ಮ ಜಿಲ್ಲೆಗೆ ಏನಾದರೂ ಹೆಚ್ಚು ನೆರವನ್ನು ಕೊಟ್ಟರೆ ಬೇರೆಯವರು ತಪ್ಪು ಕಲ್ಪನೆ ಮಾಡಿಕೊಂಡಾರು ಎಂಬ ಸಂಶಯ ಏನಿದೆ, ಅದನ್ನು ಗಮನದಲ್ಲಿಟ್ಟುಕೊಂಡರೂ, ನಮ್ಮ ಜಿಲ್ಲೆಯ ಪರಿಸ್ಥಿತಿಗನುಸಾರವಾಗಿ, ಈಗಿನ ವರದಿಗನುಸಾರವಾಗಿ ಬರಗಾಲಕ್ಕೆ ತುತ್ತಾಗಿರುವಂತಹ ಜನಸಂಖ್ಯೆ ಇನ್ನೂ ಹೆಚ್ಚು ಆಗುತ್ತಿದೆ. ಈಗಿನ ಒಂದು ಅಂದಾಜಿನ ಪ್ರಕಾರ ೫,೫೦,೦೦೦ ಜನರಿಗೆ ನಾವು ಕೆಲಸವನ್ನು ಒದಗಿಸಬೇಕಾಗಿದೆ. ಆದ್ದರಿಂದ ಅದನ್ನು ಗಣನೆಗೆ ತೆಗೆದುಕೊಂಡು ಕೂಡಲೇ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳಿಕೊಂಡು, ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, ಪ್ರಾರಂಭಿಕ ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ರಾಜ್ಯದಲ್ಲಿ ಭೀಕರವಾದ ಕ್ಷಾಮ ತಲೆದೋರಿರತಕ್ಕ ಒಂದು ವಾತಾವರಣದಲ್ಲಿ ಸದನ ಸೇರುತ್ತಿದೆ ಎನ್ನತಕ್ಕಂತಹ ಅಭಿಪ್ರಾಯವನ್ನು ಹೇಳಿದ್ದರು. ಜೊತೆಗೆ ರಾಜ್ಯದ ಎಲ್ಲಾ ಭಾಗಗಳಿಂದ ಬಂದಂತಹ ಶಾಸಕರನೇಕರ ಅಭಿಪ್ರಾಯವನ್ನು ತೆಗೆದುಕೊಂಡು ಆ ಭೀಕರವಾದ ಕ್ಷಾಮದ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಇದಕ್ಕೆ ಸರಿಯಾದ ಪರಿಹಾರವನ್ನು ನಾವು ಹುಡುಕಬೇಕು ಎನ್ನತಕ್ಕಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿ ಬಹಳಮಟ್ಟಿಗೆ ಒತ್ತಾಯ ಮಾಡಿದ ಮೇಲೆ ಕಂದಾಯ ಮಂತ್ರಿಗಳಾದ ಶ್ರೀಮಾನ್ ಬೊಮ್ಮಾಯಿಯವರು ಒಂದು ಸದನದ ಸಮಿತಿಯನ್ನು ನೇಮಕ ಮಾಡಿ, ಭೀಕರ ಬರಗಾಲ ಪರಿಸ್ಥಿತಿಯ ಬಗ್ಗೆ ಅಧ್ಯಯನ ಮಾಡಿ ಅವರ ಪರಿಹಾರಕ್ಕಾಗಿ ಸರ್ಕಾರಕ್ಕೆ ವರದಿಯ ಮೂಲಕ ಸಲಹೆಗಳನ್ನು ಕೊಡಲಿ ಎಂಬ ಉದ್ದೇಶದಿಂದ ಸದನದ ಸಮಿತಿಯನ್ನು ಸರ್ಕಾರ ನೇಮಕ ಮಾಡಿತ್ತು. ಅದರಂತೆ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಈ ಒಂದು ಸದನದ ಸಮಿತಿ ತನ್ನ ಒಂದು ವರದಿಯನ್ನು ಕೊಟ್ಟಿರತಕ್ಕಂತಹದ್ದು ನಿಜಕ್ಕೂ ಈ ರಾಜ್ಯದಲ್ಲಿ ಕ್ಷಾಮದ ಭೀಕರ ಪರಿಸ್ಥಿತಿ ಏನಿದೆ, ಅದನ್ನೂ ಮತ್ತು ಶಾಸನ ಸಭೆಯ ಸದಸ್ಯರ ಅಭಿಪ್ರಾಯ ಏನಿದೆ ಅದನ್ನೂ ನಿಜವಾಗಿಯೂ ಪ್ರತಿನಿಧಿಸತಕ್ಕ ಮತ್ತು ಅವರ ಭಾವನೆಗಳನ್ನು ಪ್ರತಿಬಿಂಬಿಸತಕ್ಕ ಒಂದು ಉತ್ತಮವಾದ ವರದಿಯನ್ನು ಇಲ್ಲಿ ಕೊಟ್ಟಿದ್ದಾರೆ. ಅದಕ್ಕಾಗಿ ಆ ಸಮಿತಿಯ ಅಧ್ಯಕ್ಷರು ಮತ್ತು ಸಮಿತಿಯ ಸದಸ್ಯರನ್ನು ಅಭಿನಂದಿಸುತ್ತೇನೆ. ಸದನದ ಸಮಿತಿ ರಚನೆಗೆ ಕಾರಣರಾಗಿರುವಂತಹ ಕಂದಾಯ ಮಂತ್ರಿಗಳಿಗೂ ಸಹ ನಾನು ವಂದಿಸುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿರತಕ್ಕ ಕ್ಷಾಮದ ಬಗ್ಗೆ ಕೆಲವಾರು ಮಾತುಗಳನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ತುಮಕೂರು ಜಿಲ್ಲೆಯಲ್ಲಿ ೨,೭೨೮ ಗ್ರಾಮಗಳಿದ್ದು, ಅದರಲ್ಲಿ ಈ ವರದಿಯ ಪ್ರಕಾರ ೨,೦೯೯ ಗ್ರಾಮಗಳು ಈ ಒಂದು ಭೀಕರ ಕ್ಷಾಮದ ದವಡೆಗೆ ಸಿಕ್ಕಿವೆ. ಮತ್ತು ೮,೫೯,೭೮೫ ಜಾನುವಾರುಗಳಲ್ಲಿ ೭,೭೭,೪೮೩ ಜಾನುವಾರು ಈ ಒಂದು ಕ್ಷಾಮದ ದವಡೆಗೆ ತುತ್ತಾಗಿವೆ. ೧೯,೭೭,೮೫೮ ಜನಸಂಖ್ಯೆಯಲ್ಲಿ ಸುಮಾರು ೧೭,೪೩,೭೦೪ ಜನಸಂಖ್ಯೆಗೆ ಈ ಒಂದು ಕ್ಷಾಮಕ್ಕೆ ತುತ್ತಾಗಿವೆ, ಎನ್ನತಕ್ಕಂತಹ ವರದಿಯನ್ನು ಕೊಟ್ಟಿದ್ದಾರೆ. ಆ ಒಂದು ಸಮಿತಿ ತುಮಕೂರು ಜಿಲ್ಲೆಗೆ ಬಂದಿದ್ದಾಗ ನಾನು ಸಹ ಆ ಒಂದು ಸಭೆಯಲ್ಲಿ ಭಾಗವಹಿಸಿ ನನ್ನ ಒಂದು ಅಭಿಪ್ರಾಯವನ್ನು ಅಲ್ಲೂ ಕೊಟ್ಟಿದ್ದೆ. ನಾನು ಏನೊಂದು ಅಭಿಪ್ರಾಯವನ್ನು ಅಲ್ಲಿ ವ್ಯಕ್ತಪಡಿಸಿದ್ದೆನೋ, ಆ ಒಂದು ಪರಿಸ್ಥಿತಿಯನ್ನು ಸಮಿತಿ ಮುಚ್ಚುಮರೆ ಇಲ್ಲದೆ ಕೊಟ್ಟಿದೆ. ಕ್ಷಾಮ ಪರಿಹಾರ ಕಾರ್ಯಕ್ರಮದಲ್ಲಿ ಮೊದಲನೆಯದಾಗಿ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಈ ಸರ್ಕಾರ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಈ ಒಂದು ಪರಿಸ್ಥಿತಿಯಲ್ಲಿ ಸಾಕಷ್ಟು ನೀರಿನ ತೊಂದರೆಯಿಂದ ಜನಗಳನ್ನು ಮುಕ್ತರನ್ನಾಗಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಹಾಕಿರತಕ್ಕ ಕೊಳವೆ ಬಾವಿಗಳು ೮೦ ಅಡಿ ಯಿಂದ ೯೦ ಅಡಿ ಆಳ ಇದ್ದು, ಇವತ್ತಿನ ಕ್ಷಾಮದಿಂದ ಮತ್ತೂ ನೀರಿನ ಮಟ್ಟ ಆಳಕ್ಕೆ ಹೋಗಿರುವುದರಿಂದ ಅನೇಕ ಕೊಳವೆ ಬಾವಿಗಳಲ್ಲಿ ನೀರು ಸಿಕ್ಕುತ್ತಿಲ್ಲ. ಜೊತೆಗೆ ಕೆಲವಾರು ಕಡೆಗಳಲ್ಲಿ ಮಿನಿ ವಾಟರ್ ಸಪ್ಲೈ ಕೊಟ್ಟಿದ್ದಾರೆ. ಅದರಲ್ಲಿ ಒಂದು ವರ್ಷ ಎರಡು ವರ್ಷಗಳಿಂದ ಹಾಕಿರತಕ್ಕಂತಹ ಮೋಟಾರು ಕೆಟ್ಟು ಹೋಗಿದ್ದು, ನೀರನ್ನು ಸರಬರಾಜು ಮಾಡತಕ್ಕ ಕಾರ್ಯ ಸ್ಥಗಿತವಾಗಿದೆ. ಈ ಬಗ್ಗೆ ಜಿಲ್ಲೆಯಲ್ಲಿ ನಡೆದಂತಹ ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಹೇಳಿದ್ದೇವೆ. ಅಧಿಕಾರಿಗಳಿಗೂ ಸಹ ಹೇಳಿದ್ದರೂ ಆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮೋಟಾರುಗಳನ್ನು ರಿಪೇರಿ ಮಾಡತಕ್ಕ, ಜನರಿಗೆ ನೀರನ್ನು ಕೊಡತಕ್ಕ ವ್ಯವಸ್ಥೆ ಆಗಿಲ್ಲ. ಮತ್ತೆ ಉದ್ಯೋಗವನ್ನು ಜನರಿಗೆ ಕೊಡುವ ಬಗ್ಗೆ ಹೇಳುವುದಾದರೆ, ನಿಜವಾಗಿಯೂ ಸಹ ನಾವು ಏನು ಎಷ್ಟು ಜನರು ಉದ್ಯೋಗ ಬೇಕೆಂದು ಅಪೇಕ್ಷೆ ಪಡುತ್ತಾರೋ ಅಷ್ಟು ಜನರಿಗೂ ಉದ್ಯೋಗವನ್ನು ಕಲ್ಪಿಸಿ ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಆದರೆ ಆ ಬಗ್ಗೆ ವ್ಯವಸ್ಥೆ ಮಾಡತಕ್ಕ ಕೆಲಸವನ್ನು ಸರ್ಕಾರ ಮಾಡಿಲ್ಲ. ೬೦ ದಿವಸಗಳ ಕಾಲ ಪೂರ್ಣವಾಗಿ ಎಲ್ಲ ಜನರಿಗೂ ಉದ್ಯೋಗ ಸಿಗತಕ್ಕ ವ್ಯವಸ್ಥೆ ಏನಿದೆ, ಆ ಬಗ್ಗೆ ಸರಿಯಾಗಿ ಕೆಲಸವನ್ನು ಕೊಡುತ್ತಿಲ್ಲ. ನನ್ನ ಹತ್ತಿರ ಆ ಬಗ್ಗೆ ಅನೇಕ ಅಂಕಿ ಅಂಶಗಳು ಇವೆ. ನನ್ನ ಕ್ಷೇತ್ರದಲ್ಲಿ ತೆಗೆದುಕೊಂಡಿರತಕ್ಕ ಕೆಲಸವನ್ನು ನೋಡಿದರೆ, ೪೨ ಕೆಲಸಗಳನ್ನು ತೆಗೆದು ಕೊಂಡಿದ್ದಾರೆ. ಇದು ಕೇವಲ ೨,೦೦೦ ಜನರಿಗೆ ಮಾತ್ರ ಉದ್ಯೋಗ ಸಿಕ್ಕುತ್ತಿದೆ ಎಂದ ಹಾಗಾಯಿತು ಅಂದರೆ ಒಂದು ಕೆಲಸಕ್ಕೆ ೫೦ ಜನರಂತೆ ಲೆಕ್ಕ ಹಾಕಿದರೂ ೨,೦೦೦ ಜನರಿಗೆ ಮಾತ್ರ ಉದ್ಯೋಗವನ್ನು ಒದಗಿಸಿಕೊಟ್ಟಿದ್ದೀರಿ ಎಂದ ಹಾಗೆ ಆಯಿತು. ಆದ್ದರಿಂದ ಇಡೀ ಜಿಲ್ಲೆಯಲ್ಲೇ ಅತಿ ದೊಡ್ಡ ತಾಲ್ಲೂಕು ಎಂದರೆ ನನ್ನ ತಾಲ್ಲೂಕು. ಈ ತಾಲ್ಲೂಕಿನ ಲಕ್ಷಾಂತರ ಜನರು ಉದ್ಯೋಗವನ್ನು ಅಪೇಕ್ಷಿಪಡತಕ್ಕ ಸಂದರ್ಭದಲ್ಲಿ ನಾವು ೨ ಸಾವಿರ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಟ್ಟಿದ್ದೇವೆ ಎಂದು ಹೇಳಿದರೆ ಈ ಕ್ಷೇತ್ರದ ಜನರಿಗೆ ಉದ್ಯೋಗಾವ ಕಾಶವನ್ನು ಕೊಟ್ಟಂತಾಗಲಿಲ್ಲ. ಒಂದೊಂದು ಪಂಚಾಯಿತಿಗೆ ಎರಡೆರಡು ಕೆಲಸಗಳಂತೆ ತಾವು ತೆಗೆದು ಕೊಳ್ಳಬೇಕು. ಆದರೆ ನೀವು ತೆಗೆದುಕೊಂಡಿರತಕ್ಕ ಕೆಲಸವನ್ನು ನೋಡಿದರೆ ಏನೇನೂ ಇಲ್ಲ. ಆದ್ದರಿಂದ ನಾನಾದರೂ ಹೇಳುತ್ತೇನೆ, ಕನಿಷ್ಟ ಒಂದೊಂದು ಪಂಚಾಯಿತಿಗೆ ೪–೫ ಕೆಲಸಗಳನ್ನಾದರೂ ತಾವು ತೆಗೆದುಕೊಂಡರೆ ಸ್ವಲ್ಪ ಜನರಿಗೆ ಮಾತ್ರ ತಾವು ಉದ್ಯೋಗವನ್ನು ಒದಗಿಸಿಕೊಡಲು ಸಾಧ್ಯ ವಾಗುತ್ತದೆ.

ಇನ್ನು ಎರಡನೆಯದಾಗಿ ಹೇಳುವುದಾದರೆ ನಮ್ಮಲ್ಲಿ ದನಗಳಿಗೆ ಮೇವನ್ನು ಒದಗಿಸತಕ್ಕ ವಿಚಾರ ದಲ್ಲಿ ಹೇಳುವುದಾದರೆ, ಬೇರೆ ಬೇರೆ ಕಡೆಗಳಿಂದ ಹುಲ್ಲನ್ನು ಅಭಾವ ಪರಿಸ್ಥಿತಿ ಇರತಕ್ಕ ಕಡೆಗಳಿಗೆ ಸಾಗಿಸಬೇಕಾದರೆ ಆ ಸಾಗಣೆ ವೆಚ್ಚವನ್ನು ಸರ್ಕಾರವೇ ಕೊಡುತ್ತದೆಂದು ಹೇಳಿದರೂ ಕೂಡ ಈ ಒಂದು ಸದವಕಾಶವನ್ನು ನನ್ನ ಕ್ಷೇತ್ರದ ಜನತೆ ಉಪಯೋಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕಾರಣ ಸಣ್ಣ ಮತ್ತು ಅತಿ ಸಣ್ಣ ರೈತರ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲದಿದ್ದುದರಿಂದ ಅವರು ಯಾರೂ ಕೂಡ ಹುಲ್ಲನ್ನು ತರಿಸಲು ಶಕ್ತಿಯುಳ್ಳವರಾಗಿರಲಿಲ್ಲ. ಅವರಲ್ಲಿ ಹೊಟ್ಟೆ ಹೊರೆಯುವುದೇ ಕಷ್ಟವಾಗಿರು ವಾಗ ದನಗಳಿಗೆ ದುಡ್ಡು ಕೊಟ್ಟು ಹುಲ್ಲನ್ನು ತರಿಸಿಹಾಕಲು ಸಾಧ್ಯವಾಗಲಿಲ್ಲ. ಎಲ್ಲೋ ಒಂದೆರಡು ಕಡೆಗಳಲ್ಲಿ ಅಧಿಕಾರಿಗಳು ಹುಲ್ಲನ್ನು ತರಿಸುತ್ತಿದ್ದಾರೆ. ಆದರೆ ಅವರು ತರಿಸುತ್ತಿರುವುದು ಭತ್ತದ ಹುಲ್ಲು. ಈ ಹುಲ್ಲು ದನಗಳಿಗೆ ಆರೋಗ್ಯ ದೃಷ್ಟಿಯಿಂದ ಒಳ್ಳೆಯದಲ್ಲದಿದ್ದರೂ ಈ ಒಂದು ಕಷ್ಟ ಪರಿಸ್ಥಿತಿಯಲ್ಲಿ ಇಷ್ಟಾದರೂ ಅನುಕೂಲವಾಯಿತಲ್ಲಾ ಎಂದು ನಮಗೆ ನಾವೇ ಸಮಾಧಾನ ಮಾಡಿ ಕೊಳ್ಳಬೇಕಾಗಿದೆ, ಆ ಭತ್ತದ ಹುಲ್ಲು ಎಂಥಾದ್ದು ಎಂದರೆ ಬಹಳ ಹಳೆಯದು. ಮಳೆ, ಬಿಸಿಲಿಗೆ ಸಿಕ್ಕಿ ಎಲ್ಲಾ ಕಪ್ಪಾಗಿದೆ. ನಾನು ಒಂದು ಸಾರಿ ನನ್ನ ಕ್ಷೇತ್ರದ ಕಂದಕೆರೆ ಎನ್ನುವ ಗ್ರಾಮಕ್ಕೆ ಹೋಗಿದ್ದಾಗ ಈ ಹುಲ್ಲನ್ನು ನೋಡಿದೆ. ಒಂದು ವಾರಕಾಲ ಉಪವಾಸವಿರುವ ಎಮ್ಮೆಯೂ ಕೂಡ ತಿನ್ನುವುದಿಲ್ಲ. ಅಂಥ ಹುಲ್ಲಿಗೆ ೧ ಸಾವಿರ ರೂಪಾಯಿ ಖರ್ಚಾಯಿತು ಎಂದು ಅಧಿಕಾರಿಗಳು ಹೇಳಿದರು. ಮೂಕ ಪ್ರಾಣಿಗಳಿಗೋಸ್ಕರ ಹುಲ್ಲನ್ನು ತರಲು ಕೊಟ್ಟಂಥ ಹಣದಲ್ಲೂ ನಿಮ್ಮ ಅಧಿಕಾರಿಗಳು ಹಣವನ್ನು ಉಳಿಸಿಕೊಂಡು ಲಾಭ ಮಾಡಿಕೊಳ್ಳುತ್ತಿದ್ದಾರೆ. ಇದು ಸರಿಯಲ್ಲ. ಆ ಹುಲ್ಲು ಅಷ್ಟೊಂದು ಬೆಲೆ ಬಾಳುವುದಿಲ್ಲ. ಒಂದೊಂದು ಹೋಬಳಿಯಲ್ಲಿ ಒಂದೊಂದು ಲೋಡು ಹುಲ್ಲನ್ನು ಹಂಚಿದರು. ಆ ಹುಲ್ಲು ಒಂದೊಂದು ಹಸುವಿಗೆ ಒಂದೊಂದು ಸೂಡೂ ಕೂಡ ಸಿಕ್ಕಲಿಲ್ಲ. ಆದ್ದರಿಂದ ನಿರ್ದಿಷ್ಟ ಕೇಂದ್ರಗಳಲ್ಲಿ ಮೇವನ್ನು ಸರಬರಾಜು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಆಹಾರ ವಿತರಣೆಯ ಬಗ್ಗೆ ಹೇಳುವುದಾದರೆ, ಇದೂ ಕೂಡ ಸಮರ್ಪಕವಾಗಿ ಆಗುತ್ತಿಲ್ಲ. ಹಿಂದೆ ೧೯೭೨ನೇ ಇಸವಿಯಲ್ಲಿ ನಮ್ಮ ದೇಶಕ್ಕೆ ಬರ ಬಂದಾಗ ಜನರಿಗೆ ಮತ್ತು ದನಗಳಿಗೆ ಆಹಾರ ಸಿಕ್ಕದಿದ್ದ ಸಂದರ್ಭದಲ್ಲಿ ಅಂದಿನ ಸರ್ಕಾರ ಕೂಡಲೇ ಸೂಕ್ತ ಕ್ರಮ ತೆಗೆದುಕೊಂಡು ದೇಶದಲ್ಲಿ ಬಡವರಿಗೆ ಬರದ ತಾಪ ತಗುಲದಂತೆ ಮತ್ತು ಯಾವುದಕ್ಕೂ ಕೊರತೆಯೋ ನಮ್ಮಲ್ಲಿಲ್ಲವೇನೋ ಎನ್ನುವಂತೆ ಆಹಾರ ಸಾಮಗ್ರಿಗಳನ್ನು ಒದಗಿಸಲು ವ್ಯವಸ್ಥೆ ಮಾಡಿತ್ತು. ಕೆಂಪು ಜೋಳವನ್ನು ಆಮದು ಮಾಡಿಕೊಂಡು ಅದನ್ನು ಸರಬರಾಜು ಮಾಡುತ್ತಿತ್ತು. ಆ ಸರ್ಕಾರ ಕೆಂಪು ಜೋಳವನ್ನು ತಂದುಹಾಕಿ ಜನರ ಜೀವವನ್ನು ರಕ್ಷಣೆ ಮಾಡಿದ್ದರಿಂದಲೇ ಆ ಸರ್ಕಾರಕ್ಕೆ ಕೆಂಪು ಜೋಳದ ಸರ್ಕಾರ ಎಂದು ಜನ ಕರೆಯುತ್ತಾರೆ. ಆಗ ನಮಗೆ ಬರಗಾಲ ಬಂದದ್ದು ಕಾಣಲೇ ಇಲ್ಲ. ಅಂದಿನ ಬರಗಾಲಕ್ಕೂ, ಇಂದಿನ ಬರಗಾಲಕ್ಕೂ ಹೋಲಿಕೆ ಮಾಡಿನೋಡಿದರೆ ಇವತ್ತು ಉದ್ಯೋಗ ಅವಕಾಶ

ವನ್ನು ಒದಗಿಸುವುದರಲ್ಲಾಗಲಿ, ದನಗಳಿಗೆ ಮತ್ತು ಜನಗಳಿಗೆ ಆಹಾರವನ್ನು ಒದಗಿಸುವ ವಿಚಾರದಲ್ಲಾಗಲಿ ಸಮರ್ಪಕ ವ್ಯವಸ್ಥೆ ಇಲ್ಲ. ಜನರ ಮನಸ್ಸಿಗೆ ಸಮಾಧಾನ ಆಗಿಲ್ಲ. ಈಗ ಭೀಕರ ಬರಗಾಲ ತಲೆದೋರುತ್ತಿರುವುದರಿಂದ ಕೂಡಲೇ ಸರ್ಕಾರದವರು ಜನಗಳಿಗೆ ಮತ್ತು ದನಕರುಗಳಿಗೆ ಆಹಾರವನ್ನೂ ಮತ್ತು ಮೇವನ್ನೂ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ. ಅಷ್ಟೇ ಅಲ್ಲ, ಇಂದಿನ ಪರಿಸ್ಥಿತಿಯನ್ನು ಅರಿತುಕೊಂಡು ಸರ್ಕಾರೀ ಅಧಿಕಾರಿಗಳು ಮತ್ತು ಶಾಸನಸಭಾ ಸದಸ್ಯರು ಮಾನವೀಯ ದೃಷ್ಟಿಯಿಂದ ನಡೆದುಕೊಳ್ಳುವುದು ಸೂಕ್ತ. ನನ್ನ ಜಿಲ್ಲೆಯಲ್ಲಿ ಅತ್ಯಂತ ದೊಡ್ಡ ತಾಲೂಕು ಎಂದರೆ ನನ್ನ ಕ್ಷೇತ್ರ. ಆದರೆ ನನ್ನ ತಾಲೂಕಿಗೆ ಕೊಟ್ಟಿರತಕ್ಕ ಹಣವನ್ನು ನೋಡಿದರೆ ಬಹಳ ಕಡಿಮೆ. ಕೆಲವು ತಾಲೂಕುಗಳಿಗೆ ಹೆಚ್ಚು ಹಣವನ್ನು ಕೊಟ್ಟಿದೆ. ಸರ್ಕಾರ ಈ ರೀತಿ ಮಾಡಿರುವುದು ಶೋಚನೀಯವಾದುದು. ನನ್ನ ಕ್ಷೇತ್ರಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕಾಗಿತ್ತು. ನನ್ನ ತಾಲೂಕು ಸಂಪೂರ್ಣವಾಗಿ ಬರಗಾಲಕ್ಕೆ ತುತ್ತಾಗಿರತಕ್ಕ ಪ್ರದೇಶ. ಇದು ಗೊತ್ತಿದ್ದರೂ ಬರಗಾಲ ಕಾಮಗಾರಿಗಾಗಿ ಸರ್ಕಾರ ನಮಗೆ ಬಹಳ ಕಡಿಮೆ ಹಣವನ್ನು ಒದಗಿಸಿದೆ. ಈಗಲಾದರೂ ಹೆಚ್ಚು ಹಣವನ್ನು ನಮಗೆ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆರೆಯಲ್ಲಿ ಹೂಳು ಎತ್ತುವ ವಿಚಾರದಲ್ಲಿ ಹೇಳುವುದಾದರೆ, ಆದಷ್ಟು ಬೇಗ ಈಗಾಗಲೇ ಅನೇಕ ಮಾನ್ಯ ಸದಸ್ಯರು ಸೂಚಿಸಿರುವ ಸಲಹೆಗಳನ್ನು ಶೀಘ್ರವಾಗಿ ಪರಿಶೀಲಿಸಿ ಕಾರ್ಯಗತಮಾಡಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನಮ್ಮ ಚಿಕ್ಕನಾಯಕನಹಳ್ಳಿ ತಾಲೂಕು ತೆಂಗು ಮತ್ತು ಅಡಿಕೆ ಬೆಳೆಗೆ ತುಂಬಾ ಪ್ರಸಿದ್ಧವಾದುದು. ಕಳೆದ ೩–೪ ವರ್ಷದಿಂದ ತೋಟದ ಬಾವಿಗಳಲ್ಲಿ ನೀರಿಲ್ಲದೆ ಮರಗಳೆಲ್ಲಾ ಒಣಗಿ ಹೋಗುತ್ತಿವೆ. ನೂರು ವರ್ಷಗಳವರೆವಿಗೂ ಸತತವಾಗಿ ಫಸಲನ್ನು ಕೊಡತಕ್ಕ ತೆಂಗಿನ ಮರಗಳು ಇವತ್ತು ಒಣಗುತ್ತಿವೆ. ಇದು ಹೋದರೆ ಅಲ್ಲಿಯ ಜನರು ಮತ್ತೆ ತೆಂಗಿನ ತೋಟಗಳನ್ನು ಬೆಳೆಸುವುದು ಅತ್ಯಂತ ಕಷ್ಟ. ಈ ವಿಚಾರವನ್ನು ತಾವು ಮನಗಾಣಬೇಕು. ತೋಟದ ಬಾವಿಗಳಿಗೆ ತಾತ್ಕಾಲಿಕವಾಗಿ ಬೋರ್‌ವೆಲ್‌ಗಳನ್ನು ಹಾಕಿ ನೀರನ್ನೊದಗಿಸಿಕೊಟ್ಟರೆ ದೀರ್ಘಕಾಲ ಫಸಲನ್ನು ಕೊಡತಕ್ಕ ಮರಗಳನ್ನು ಉಳಿಸಿಕೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕುಮಾರಗೌಡ ಎ. ಪಾಟೀಲ್ (ಬಸವನಬಾಗೇವಾಡಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಕೊಟ್ಟಿರತಕ್ಕ ವರದಿ ಅತ್ಯಂತ ಮಹತ್ವದ ವರದಿ. ಏಕೆಂದರೆ, ಅವರು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಸುತ್ತಾಡಿ ವಾಸ್ತವಾಂಶ ಏನೆಂಬುದನ್ನು ಮನದಟ್ಟು ಮಾಡಿಕೊಂಡು ಸಲ್ಲಿಸಿರುವ ವರದಿ. ಬಹುಶಃ ಇಲ್ಲಿರತಕ್ಕ ಬಹುತೇಕ ಸದಸ್ಯರು ಬರಗಾಲ ಪ್ರದೇಶಗಳಿಂದಲೇ ಬಂದಿರುವವರಾಗಿದ್ದೇವೆ. ಮಾನ್ಯ ಸದಸ್ಯರಾದ ಖರ್ಗೆಯವರೂ ಕೂಡ ಬಂದಿರತಕ್ಕದ್ದು ಬರಗಾಲ ಪ್ರದೇಶದಿಂದ. ಇವರು ಹಳ್ಳಿಯಿಂದ ಬಂದವರಾಗಿರುವುದರಿಂದ ರೈತರ ಕಷ್ಟಸುಖಗಳನ್ನು ಚೆನ್ನಾಗಿ ಅರಿತಿದ್ದಾರೆ, ಮೊದಲು ಇವರು ಮಂತ್ರಿಗಳಾಗಿ ಕೆಲಸಮಾಡಿ ಒಳ್ಳೆಯ ಅನುಭವವನ್ನು ಗಳಿಸಿದ್ದಾರೆ. ನಮ್ಮ ಜಿಲ್ಲೆ ಮೊದಲಿನಿಂದಲೂ ಬರಗಾಲಕ್ಕೆ ತುತ್ತಾಗಿದೆ. ಮೊದಲು ರಾಗಿ ಬರ ಬಂತು. ನಂತರ ಸಜ್ಜೆ ಬರ ಎಂದು ಬಂತು. ರಾಜಾಸ್ಥಾನದಿಂದ ಸಜ್ಜೆಯನ್ನು ತಂದು ನಮಗೆಲ್ಲಾ ಹಂಚಿದರು. ಅಂದಿನ ಪರಿಸ್ಥಿತಿ ಇಂದೂ ನಮಗೆ ನೆನಪಿಗೆ ಬರುತ್ತದೆ. ಕಳೆದ ಒಂದು ವರ್ಷದಿಂದ ನೀರಿನ ಬರ ಬಂದಿದೆ. ಎಲ್ಲಿ ಹೋದರೂ ನೀರಿನ ತೊಂದರೆಗೆ ಒಳಗಾಗಿರತಕ್ಕ ಪ್ರದೇಶಗಳೇ ಜಾಸ್ತಿಯಾಗಿವೆ. ನಮ್ಮಲ್ಲಿ ೩೦೦ ಅಡಿಗಳವರೆಗೂ ಬೋರ್‌ನ್ನು ಕೊರೆಯತಕ್ಕ ಯಂತ್ರಗಳು ಬಂದಿವೆ. ಇಂಥ ಬೋರ್‌ವೆಲ್‌ಗಳನ್ನು ತರಿಸಿ ಬಾವಿಗಳನ್ನು ತೋಡಿಸಬೇಕು. ನಮ್ಮ ಭಾಗದಲ್ಲಿ ಕುಡಿಯುವ ನೀರಿಗಾಗಿ ಪ್ರತಿದಿನ ೪–೫ ಕಿಲೋಮೀಟರ್ ಹೋಗಿ ನೀರನ್ನು ಹೊತ್ತು ತರಬೇಕಾಗಿದೆ.

೪–೦೦ ಪಿ. ಎಂ.

ಮುಳವಾಡ ಏತ ನೀರಾವರಿ ಯೋಜನೆಯ ಬಗ್ಗೆ ಮಾನ್ಯ ಖರ್ಗೆಯವರು ಬಂದಿದ್ದಾಗ್ಗೆ ನಮ್ಮ ಜನರು ಭೇಟಿಯಾಗಿ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿರುತ್ತಾರೆ. ಇವರಲ್ಲಿ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂಥ ಜನರು ಕೂಡ ಮನವಿ ಮಾಡಿಕೊಂಡಿರುತ್ತಾರೆ. ಮುಳವಾಡ ಏತ ನೀರಾವರಿ ಯೋಜನೆ ಏನು ಇರುತ್ತದೆ ಇದು ನಮ್ಮ ಜಿಲ್ಲೆಗೆ ಬಹಳ ಮಹತ್ವವಾದ ಒಂದು ಯೋಜನೆಯಾಗಿರುತ್ತದೆ, ಇದರಿಂದ ಐದೂವರೆ ಲಕ್ಷ ಎಕರೆ ಜಮೀನು ನೀರಾವರಿಯಾಗುವುದು

ಇರುತ್ತದೆ. ಈ ಯೋಜನೆಗೆ ಸುಮಾರು ಮುನ್ನೂರು ಕೋಟಿ ರೂಪಾಯಿಗಳ ವೆಚ್ಚ ತಗಲುತ್ತದೆಂದು ಅಂದಾಜಾಗಿರುತ್ತದೆ. ಈವತ್ತಿನ ದಿವಸ ಸರ್ಕಾರದವರು ಈ ಕೆಲಸವನ್ನು ತೆಗೆದುಕೊಳ್ಳಲು ಬಹಳ ಹಿಂದುಮುಂದು ನೋಡುತ್ತಿರುವುದು ತುಂಬಾ ವಿಷಾದದ ಸಂಗತಿಯಾಗಿರುತ್ತದೆ, ಈ ಯೋಜನೆಯನ್ನು ಕೊನೆಯಪಕ್ಷ ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸದಿದ್ದರೆ ಇಡಿ ನಮ್ಮ ತಾಲ್ಲೂಕ್ ಜನರು ಒಂದು ದೊಡ್ಡ ಚಳುವಳಿಯನ್ನೇ ಮಾಡಬೇಕಾಗುತ್ತದೆ, ನಮ್ಮ ಜಿಲ್ಲೆಯವರು ಸರ್ಕಾರದ ವಿರುದ್ಧವಾಗಿ ಚಳುವಳಿಯನ್ನು ಮಾಡುತ್ತೇವೆಂದು ಮೇಲಿಂದಮೇಲೆ ಇದರಬಗ್ಗೆ ಹೇಳುತ್ತಲೇ ಇದ್ದಾರೆ. ಇದನ್ನು ಸರ್ಕಾರದವರು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಇದು ಐದು ಲಕ್ಷ ಎಕರೆಗಳಷ್ಟು ನೀರಾವರಿಯಾಗುವ ಬಗ್ಗೆ ತಾವೂ ಕೂಡ ಬಲ್ಲವರಾಗಿದ್ದೀರಿ. ಈ ಯೋಜನೆಯು ಕಾರ್ಯಗತವಾಗದಿದ್ದರೆ ಬಹಳ ಕಠಿಣ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಟ್ಟಂತೆ ಕಾಣುತ್ತಿಲ್ಲ ಸರ್ಕಾರದವರು ಯಾವುದೇ ಒಂದು ನಿರ್ಣಯವನ್ನು ತೆಗೆದುಕೊಂಡು ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸುತ್ತೇವೆ ಎನ್ನುವ ಮಾತನ್ನೂ ಕೂಡ ಹೇಳದಿರುವುದರಿಂದ ಬಹಳ ವಿಷಾದಪಡಬೇಕಾಗಿದೆ. ಈ ಯೋಜನೆಯ ಬಗ್ಗೆ ನಿರ್ಲಕ್ಷ್ಯಮಾಡಿದರೆ ದೊಡ್ಡ ಚಳುವಳಿಯೇ ಆಗತಕ್ಕಂಥ ಪರಿಸ್ಥಿತಿ ಇರುತ್ತದೆ. ಎಷ್ಟೋ ಜನ ಸ್ವಾತಂತ್ರ್ಯಯೋಧರು ಪ್ರಧಾನಮಂತ್ರಿಗಳಾದ ರಾಜೀವ್‌ಗಾಂಧಿಯವರನ್ನು ಭೇಟಿ ಮಾಡಿ ಉಪವಾಸ ಕೂಡ ಮಾಡಿರುತ್ತಾರೆ. ಕೃಷ್ಣಾ ನದಿ ಮೇಲ್ದಂಡೆ ಮಹಾರಾಷ್ಟ್ರದ ಕ್ಷೇತ್ರದಲ್ಲಿ ಬರತಕ್ಕಂಥ ಜನ ಲಿಫ್ಟ್ ಇರಿಗೇಷನ್ ಮಾಡಿ ಬಹಳ ಅನುಕೂಲತೆಯನ್ನು ಪಡೆಯುತ್ತಿದ್ದಾರೆ. ಕೋಆಪರೇಟೀವ್ ಬೇಸಿಸ್‌ಮೇಲೆ ಲಿಫ್ಟ್ ಇರಿಗೇಷನ್ ಸೌಲಭ್ಯವನ್ನು ಪಡೆದು ಸುಮಾರು ೪-೫ ಕಿಲೋಮೀಟರ್‌ಗಳಷ್ಟು ದೂರ ನೀರನ್ನು ಕೊಂಡೊಯ್ದು ವ್ಯವಸಾಯವನ್ನು ಮಾಡುತ್ತಿರುತ್ತಾರೆ. ಪಂಪ್‌ಸೆಟ್ಟುಗಳನ್ನು ಬಹಳವಾಗಿ ಕೊಟಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಇಂಥ ಯಾವುದೇ ಸೌಕರ್ಯಗಳನ್ನು ಸರ್ಕಾರದವರು ಕಲ್ಪಿಸಿ ಕೊಟ್ಟಿಲ್ಲ. ಇದಕ್ಕಾಗಿ ನಮ್ಮ ಕ್ಷೇತ್ರದ ಜನ ಬಹಳಷ್ಟು ಮನವಿಗಳನ್ನು ಕೊಟ್ಟಿದ್ದಾರೆ ಷೆಡ್ಯೂಲ್ ಬ್ಯಾಂಕ್‌ಗಳಿಂದ ೭೫ ಪರ್ಸೆಂಟ್‌ನಷ್ಟು ಸಾಲದ ಸೌಲಭ್ಯವನ್ನು ಪಡೆದಿರುತ್ತಾರೆ. ಮಾನ್ಯ ಲೋಕೋಪಯೋಗಿ ಸಚಿವರಾದ ದೇವೇಗೌಡರ ಜೊತೆಯಲ್ಲಿ ಕೂಡ ನಾವು ಮಾತನಾಡಿದ್ದೇವೆ. ಒಂದು ಸ್ಟಡಿ ಟೀಮನ್ನು ಕಳುಹಿಸಿಕೊಡುವುದಾಗಿ ಹೇಳಿರುತ್ತಾರೆ. ಯಾವರೀತಿ ಇಂಪ್ಲಿಮೆಂಟ್ ಮಾಡಬೇಕು ಎನ್ನುವ ಬಗ್ಗೆ ಒಂದು ಸ್ಟಡಿ ಟೀಮನ್ನು ಕಳುಹಿಸಿಕೊಡುತ್ತೇನೆಂಬುದಾಗಿ ಮಾನ್ಯ ಸಚಿವರು ಭರವಸೆಯನ್ನು ಕೊಟ್ಟಿರುತ್ತಾರೆ. ಶೀಘ್ರಗತಿಯಿಂದ ಕಳುಹಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಭೂತನಾಳ, ಬಸವನಬಾಗೇವಾಡಿ ಕೃಷ್ಣಾನದಿ ದಂಡೆಯಲ್ಲಿರತಕ್ಕಂಥ ಕ್ಷೇತ್ರಗಳಿಗೆ ಲಿಫ್ಟ್ ಇರಿಗೇಷನ್ ಒದಗಿಸುವುದಾದರೆ ಸುಮಾರು ೬ ಸಾವಿರ ಎಕರೆ ನೀರಾವರಿಯಾಗುತ್ತದೆ. ಇದರಬಗ್ಗೆ ಚೀಫ್ ಇಂಜನೀಯರ್ ಮತ್ತು ಚೀಫ್ ಸೆಕ್ರೆಟರಿ ಪಿ.ಡಬ್ಲ್ಯೂ.ಡಿ ಯವರನ್ನೂ ಕೂಡ ಭೇಟಿಯಾಗಿದ್ದೆವು. ಇಲ್ಲಿಯವರೆಗೂ ಅದರ ಬಗ್ಗೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಂತೆ ಕಾಣುತ್ತಿಲ್ಲ ಒಂದು ರೀತಿಯಾದ ನಿರ್ಲಕ್ಷ್ಯಭಾವನೆಯಿಂದ ಸರ್ಕಾರದವರು ಇರುತ್ತಾರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬರಗಾಲ ಸಮಿತಿಯ ಅಧ್ಯಕ್ಷರಾಗಿ ನಮ್ಮ ಭಾಗಕ್ಕೆ ಬಂದಿದ್ದಾಗ್ಗೆ ಹೇಳಿರುತ್ತೇವೆ. ಬರಗಾಲ ಬಂದಕಡೆಗಳಲ್ಲಿ ರಸ್ತೆಗಳ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳತಕ್ಕಂಥ ಪರಿಪಾಠವಿರುತ್ತದೆ. ಇದನ್ನು ಬಿಟ್ಟು ಎಲ್ಲೆಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುತ್ತದೆ ಅಲ್ಲೆಲ್ಲಾ ಬೋರ್‌ವೆಲ್‌ಗಳನ್ನು ತೋಡಿಸಿ ರಿಗ್‌ಗಳನ್ನು ಹಾಕಬೇಕೆಂದು ಕೇಳಿಕೊಂಡಿರುತ್ತೇವೆ. ಅದರ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತೆ ಬಡ್ಡಿರಹಿತ ಸಾಲವನ್ನು ಕೊಡಬೇಕೆಂದು ಕೇಳಿಕೊಂಡಿರುತ್ತೇವೆ. ಮತ್ತು ಬಡ್ಡಿಯನ್ನು ಮನ್ನಾ ಮಾಡಬೇಕೆಂದೂ ಕೂಡ ಕೇಳಿದ್ದೇವೆ. ಎಲ್ಲೆಲ್ಲಿ ಸಣ್ಣ ಸಣ್ಣ ನೀರಾವರಿಗೆ ಅನುಕೂಲವಿರುತ್ತದೋ ಅಲ್ಲಿ ಶೀಘ್ರವಾಗಿ ಗಮನ ಕೊಡಬೇಕೆಂತಲೂ ಎಲ್ಲೆಲ್ಲಿ ಕಾಲುವೆಗಳು ಬ್ರೀಚ್ ಆಗಿರುತ್ತವೆಯೋ ಅಲ್ಲೆಲ್ಲ ಬಾಂಡ್‌ಗಳನ್ನು ಹಾಕಬೇಕೆಂದೂ ಹೇಳಿರುತ್ತೇವೆ ಹಾಗೆ ಮಾಡದೇ ಇದ್ದರೆ ಕಾಲುವೆ ಕೆಳಗಿನ ಪ್ರದೇಶಗಳಲ್ಲಿಯ ಜಮೀನುಗಳಲ್ಲಿ ತೇವಾಂಶ ನಿಂತು ಬೆಳೆಗೆ ಬಹಳ ಧಕ್ಕೆ ಬರುತ್ತಿದೆ.

ಇನ್ನು ರೈತರಿಗೆ ಬೀಜ ಗೊಬ್ಬರವನ್ನು ಒದಗಿಸುವ ಬಗ್ಗೆ ಹೇಳುವುದಾದರೆ ಬರಗಾಲ ಬಿದ್ದ ನಮ್ಮಕಡೆ ಜನರು ಮಹಾರಾಷ್ಟ್ರಕ್ಕೆ ವಲಸೆ ಹೋಗುತ್ತಿದ್ದಾರೆ. ಕೃಷ್ಣಾನದಿ ಎಡದಂಡೆ ಕಾಲುವೆ ಹರಿಯತಕ್ಕಂಥ ಸಿಂದಗಿ. ಇಂಡಿ ಬಸವನಬಾಗೇವಾಡಿ ಮುಂತಾದ ಕಡೆಗಳಲ್ಲಿ ರಸ್ತೆ ಕೆಲಸಗಳನ್ನು ತೆಗೆದುಕೊಂಡು ವಿನಾಕಾರಣ ಹಣವನ್ನು ಖರ್ಚುಮಾಡುವಬದಲಾಗಿ ಕಾಲುವೆ ಕೆಲಸಗಳನ್ನು ತೆಗೆದುಕೊಂಡರೆ ಮತ್ತು ಟ್ಯಾಂಕ್‌ಗಳನ್ನು ಕಟ್ಟತಕ್ಕಂಥ ಕೆಲಸವನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡಲ್ಲಿ ಸ್ಥಳೀಯರಿಗೆ ಕೆಲಸವನ್ನು ಒದಗಿಸಿದಂತಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಕಾಳಜಿ

ಯನ್ನು ವಹಿಸಬೇಕೆಂದು ಹೇಳುತ್ತೇನೆ. ಸರ್ಕಾರದವರು ಕೈಗೊಳ್ಳುತಕ್ಕಂಥ ಕಾರ್ಯಕ್ರಮಗಳು ''ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿಯನ್ನು ತೋಡಿದರು'' ಎಂತಾಗಬಾರದು ಒಂದು ಪರ್ಮನೆಂಟ್ ರಿಲೀಫ್ ಮಾಡತಕ್ಕಂಥ ಕೆಲಸಗಳು ಆಗಬೇಕೇದು ಹೇಳುತ್ತೇನೆ.

ಇನ್ನು ಸ್ಪ್ರಿಂಕ್ಲರ್ ಇರಿಗೇಷನ್ ಬಗ್ಗೆಯೂ ಹೆಚ್ಚಿನ ಮಹತ್ವವನ್ನು ಕೊಟ್ಟು ಇದನ್ನೂ ಕಾರ್ಯರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಬೀಜ ಗೊಬ್ಬರಗಳನ್ನು ಹಂಚತಕ್ಕಂಥ ಸಂದರ್ಭದಲ್ಲಿ ದೊಡ್ಡ ರೈತರು ಸಣ್ಣ ರೈತರು ಎನ್ನುವ ತಾರತಮ್ಯವನ್ನು ತೋರದೆ ಎಲ್ಲರಿಗೂ ಸಬ್ಸಿಡಿ ದೊರೆಯುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ದೊಡ್ಡ ರೈತರಿದ್ದರೂ ಅವರಿಗೂ ಮೆನ್‌ಟೆನ್‌ನ್ಸ್ ಚಾರ್ಜ್ ಬೀಳುತ್ತದೆ. ಆದ್ದರಿಂದ ಅವರಿಗೂ ಈ ಎಲ್ಲ ಸೌಲಭ್ಯಗಳೂ ದೊರೆಯುವಂತ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬರಗಾಲ ಬಿದ್ದಾಗ ಎಲ್ಲರನ್ನೂ ಸಮಗ್ರ ದೃಷ್ಟಿಯಿಂದ ನೋಡಬೇಕಾಗುತ್ತದೆ, ನಮ್ಮ ಭಾಗ ಬರಗಾಲಕ್ಕೆ ತುತ್ತಾಗಿರುವುದರಿಂದ ಮೇವಿಗೆ ತೊಂದರೆಯಾಗಿ ಮಹಾರಾಷ್ಟ್ರಕ್ಕೆ ದನಗಳು ಹೋಗುತ್ತಿದೆ. ಅದನ್ನೂ ಕೂಡ ತಪ್ಪಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಲ್ಲಾರಿಗೌಡ ಎಸ್, ಪಾಟೀಲ್ (ಸಂಕೇಶ್ವರ).—ಸನ್ಮಾನ್ಯ ಅಧ್ಯಕ್ಷರೇ ಬರಗಾಲದ ಅಧ್ಯಯನ ಸಮಿತಿಯವರು ಸಲ್ಲಿಸಿದಂಥ ವರದಿಯನ್ನು ನಾನು ಸ್ವಾಗತ ಮಾಡುತ್ತಾ ಸಮಿತಿಯು ಸಲ್ಲಿಸಿದ ವರದಿಯಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಸ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬರಗಾಲದ ಸಮಿತಿಯವರು ಏನು ವರದಿಯನ್ನು ಸದನಕ್ಕೆ ಕೊಟ್ಟಿದ್ದಾರೆ, ಆ ವರದಿಗೆ ಹೊದಿಸಿರುವ ರಟ್ಟಿನ ಬಣ್ಣ ಯಾವ ರೀತಿ ಕೆಂಪು ಇರುತ್ತದೋ ಅಂತದೇ ಪರಿಸ್ಥಿತಿಯಲ್ಲಿ ನಡೆದಿದೆ ಕೆಂಪು ಬಣ್ಣದ ವರದಿಯು ಡೇಂಜರ್ ಸಿಗ್ನಲ್ ಎಂದು ಭಾವಿಸಬೇಕಾಗಿದೆ. ಬರಗಾಲ ಅಧ್ಯಯನ ಸಮಿತಿಯವರ ಬೆಳಗಾವು ಜಿಲ್ಲೆಗೆ ಬಂದಾಗ ರಾತ್ರಿ ಎಂಟೂವರೆ ಗಂಟೆಯಾಗಿತ್ತು. ಮೀಟಿಂಗ್ ಸುಮಾರು ಹನ್ನೊಂದೂವರೇ ಗಂಟೆಯವರೆಗೆ ನಡೆದು ಮುಗಿಯಿತು. ಬರಗಾಲ ಬರುವುದಕ್ಕೆ ಮುಂಚಿತವಾಗಿ ಮಾನ್ಯ ಕಂದಾಯ ಮಂತ್ರಿಗಳ ಜೊತೆಯಲ್ಲಿ ಹೆಚ್ಚಿನ ವಿಷಯವನ್ನು ಪ್ರಸ್ತಾಪ ಮಾಡಿದ್ದೆವು. ಅವರಿಗೂ ಕೂಡ ಗೊತ್ತಿದೆ. ನಮಗೆ ತಿಳಿದಿರುವಂತೆ ಡೋಗಿ ಬರಾ, ರಾಗಿ ಬರಾ ಎಂದು ಹಿಂದೆ ಬಂದಂಥ ಬರಗಾಲದ ಬಗ್ಗೆ ಹಿರಿಯರು ಹೇಳುತ್ತಿದ್ದರು. ಈಗ ಅದಕ್ಕಿಂತ ಹೆಚ್ಚಿನ ದಾರುಣ ಪರಿಸ್ಥಿತಿ ಬಂದೊದಗಿರುತ್ತದೆ. ಇದೊಂದು ಬಹಳ ಗಂಭೀರವಾದ ಪರಿಸ್ಥಿತಿಯಿಂದ ಕರ್ನಾಟಕ ರಾಜ್ಯ ದುರವಸ್ಥೆಯ ಪರಿಸ್ಥಿತಿಗೆ ನಾವು ಹೋಗುತ್ತಿದ್ದೇವೆ. ಈ ಎಲ್ಲ ವಿಷಯಗಳನ್ನು ಪ್ರಸ್ತಾಪ ಮಾಡಿದಂಥ ಸದಸ್ಯರು ಈಗಾಗಲೇ ೧೫–೨೦ ಸಾರಿ ಅಸಿಸ್ಟೆಂಟ್ ಕಮಿಷನರ್ ರವರನ್ನು ಕಂಡು ಚರ್ಚೆ ಮಾಡಿರುತ್ತಾರೆ. ರಸ್ತೆಗಳ ಕೆಲಸವನ್ನು ತೆಗೆದುಕೊಳ್ಳಬೇಕು, ಬೋರ್‌ವೆಲ್‌ಗಳನ್ನು ಹಾಕಬೇಕು, ಕೆರೆಗಳಲ್ಲಿ ಹೂಳು ತೆಗೆಯಬೇಕೆಂದು ಎಲ್ಲ ವಿಷಯಗಳನ್ನು ಹೇಳಿದರೂ ಕೂಡ ಯಾವುದೇ ಒಂದು ಕಾರ್ಯವನ್ನು ತೆಗದುಕೊಂಡಿಲ್ಲವೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಹೇಳುತ್ತಿದ್ದೇನೆ. ದಯವಿಟ್ಟು ನಮ್ಮ ಮಾನ್ಯ ಕಂದಾಯ ಮಂತ್ರಿಗಳು ಮಹಾರಾಷ್ಟ್ರಕ್ಕೆ ಹೋಗಿ ಬಂದರೆ ಅನುಭವವಾಗುತ್ತದೆ. ಮಹಾರಾಷ್ಟ್ರದಲ್ಲಿ ಯಾವ ಹಂತದಲ್ಲಿ ಯಾವ ಒಂದು ವೇಗದಲ್ಲಿ ಕೆಲಸ ಮಾಡಿದ್ದಾರೆಂದು ನೋಡಬೇಕು. ಕೇಂದ್ರ ಸರ್ಕಾರದಿಂದ ಹಣದ ನೆರವನ್ನು ಯಾವ ರೀತಿ ಪಡೆದುಕೊಂಡಿರುತ್ತಾರೋ ಅದೇ ರೀತಿಯಲ್ಲಿ ಉಳಿದ ರಾಜ್ಯಗಳನ್ನು ಕೂಡ ಅಧ್ಯಯನ ಮಾಡಿದರೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ಒಂದು ಕಳಕಳಿಯ ವಿನಂತಿ ಮಾಡಿಕೊಳ್ಳುವುದೇನೆಂದರೆ ಮಾನ್ಯ ಸದನದ ಸದಸ್ಯರೆಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಕಳೆದಬಾರಿ ಸಣ್ಣ ನೀರಾವರಿ ಯೋಜನೆಗಳಿಗಾಗಿ ಟೋಕನ್ ಗ್ರ್ಯಾಂಟ್ ಎಂದು ಕೊಟ್ಟರು. ಆ ರೀತಿ ಕೊಟ್ಟು ಸದನವನ್ನು ತಪ್ಪುದಾರಿಗೆ ಎಳೆಯಬಾರದು. ಈ ಟೋಕನ್‌ಗ್ರ್ಯಾಂಟ್ ಏನು ಕೊಟ್ಟಿರುತ್ತಾರೆ ಇದು ಒಂದು ಎಲೆಕ್ಷನ್ ಟೋಕನ್ ಗ್ರ್ಯಾಂಟ್ ಎಂದು ಏಕೆ ಹೇಳಬಾರದು ? ಈ ರೀತಿ ಟೋಕನ್ ಗ್ರ್ಯಾಂಟ್ ಕೊಡತಕ್ಕಂದನ್ನು ಕೈಬಿಡಬೇಕು. ಶಾಸಕರ ಕ್ಷೇತ್ರಗಳಲ್ಲಿ ಕೆರೆಗಳ ಕೆಲಸ ನಿಂತು ಹೋಗಿದೆ. ಪ್ರತಿಯೊಬ್ಬ ಮತದಾರರ ಕ್ಷೇತ್ರಗಳಲ್ಲೂ ಬರಗಾಲದ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳುವಾಗ ಒಂದು ಪರ್ಮನೆಂಟ್ ಕಾಮಗಾರಿಗಳ ಕೆಲಸಗಳನ್ನು ತೆಗೆದುಕೊಳ್ಳದೆಹೋದರೆ ಮುಂದೆ ಬರತಕ್ಕಂಥ ಸಮಾಜಕ್ಕೆ ಒಂದು ಘೋರ ಅನ್ಯಾಯ ಮಾಡಿ ದಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾನ್ಯ ಕಂದಾಯ ಸಚಿವರು ಉತ್ತರ ಕರ್ನಾಟಕ ಭಾಗದಿಂದ ಬಂದಿದ್ದಾರೆ. ಆದ್ದರಿಂದ ಅವರು ನಮ್ಮ ಭಾಗದಲ್ಲಿರುವಂತಹ ನೀರಾವರಿ ಕ್ಷೇತ್ರಗಳನ್ನೆಲ್ಲಾ ನೋಡಿದ್ದಾರೆ. ಈಗ ನಮ್ಮ ಭಾಗದಲ್ಲಿ ಅನೇಕ ಕಡೆಗಳಲ್ಲಿ ಅಣೆಕಟ್ಟುಗಳನ್ನು ಕಟ್ಟಿಸಲಾಗಿದೆ. ಆದರೆ ಕಾಲುವೆ ಕೆಲಸಗಳು ಮಾತ್ರ ಇನ್ನೂ ಮುಗಿದಿಲ್ಲ. ಅಣೆಕಟ್ಟುಗಳನ್ನು ಕಟ್ಟುವಾಗಲೇ, ಕಾಲುವೆ ಕೆಲಸಗಳನ್ನು ಮಾಡಿಸಬೇಕಾಗಿತ್ತು. ಆದರೆ ಮಾಡಿಲ್ಲ. ಈ ಕೆಲಸವನ್ನು ಹಿಂದಿನ ಸರ್ಕಾರವೇ ಮಾಡಬೇಕಾಗಿತ್ತು ಎಂದು ತಾವು ಹೇಳಬಹುದು. ಆದರೆ ಅವರು ತಪ್ಪು ಮಾಡಿದರು ಎಂದು ನೀವೂ ತಪ್ಪು ಮಾಡಬಾರದು. ಈಗ ಇರುವಂತಹ ಗಂಭೀರ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೇರೆ ಇಲಾಖೆಗಳಿಗೆ ಒದಗಿಸಿರುವಂತಹ ಹಣವನ್ನೆಲ್ಲಾ ವಾಪಸ್ ಪಡೆದು ಈ ಬರಗಾಲ ಕಾಮಗಾರಿಗಳಿಗೆ ತಾವು ಒದಗಿಸಬೇಕಾಗುತ್ತದೆ. ಈಗ ನಾವು ಸೆಪ್ಟೆಂಬರ್ ತಿಂಗಳಿಗೆ ಕಾಲಿಟ್ಟಿದ್ದೇವೆ. ನನ್ನ ಕ್ಷೇತ್ರದಲ್ಲಿ ಹಿರಣ್ಯಕೇಶಿ ನದಿ ಹರಿಯುತ್ತದೆ. ಈ ನದಿ ಪಾತ್ರದಲ್ಲಿ ಮುಂದಿನ ಜೂನ್ ತಿಂಗಳವರೆಗೆ ಅಲ್ಪಸ್ವಲ್ಪ ಮಳೆಯಾಗುತ್ತದೆಂಬ ವರದಿ ಆಧಾರದ ಮೇಲೆ ತಾಲ್ಲೂಕ್ ಮಟ್ಟದಲ್ಲಿರುವ ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳು ೮ ಆಣೆ ಬೆಳೆ ಆಗಬಹುದು, ಹತ್ತಾಣೆ ಬೆಳೆ ಆಗಬಹುದು ಎಂದು ವರದಿ ಕೊಟ್ಟಿದ್ದಾರೆ. ಹೀಗೆ ವ್ಯವಸಾಯ ಇಲಾಖೆಯವರು ಒಂದು ರೀತಿಯ ವರದಿ, ರೆವಿನ್ಯೂ ಇಲಾಖೆಯವರು ಒಂದು ರೀತಿಯ ವರದಿ ಕೊಟ್ಟರೆ ಕೇಂದ್ರ ಸರ್ಕಾರದವರು ಯಾವ ರೀತಿ ಸಹಾಯ ಮಾಡುತ್ತಾರೆ ? ಈ ಅಧ್ಯಯನ ಸಮಿತಿ ವರದಿಯ ಕೊನೆಯ ಪುಟದಲ್ಲಿ ಸುಮಾರು ಎರಡು ಕೋಟಿ ಜನರು ಬರಗಾಲಕ್ಕೆ ತುತ್ತಾಗಿದ್ದಾರೆ ಮತ್ತು ೯೪ ಲಕ್ಷ ದನಕರುಗಳು ಬರಗಾಲದ ಬವಣೆಯಲ್ಲಿ ಸಿಕ್ಕಿಕೊಂಡಿವೆ ಎಂದು ತಿಳಿಸಿದ್ದಾರೆ. ಈ ಕಾರಣದಿಂದ ನೀವು ಎಲ್ಲ ಜನರಿಗೂ ಕೆಲಸ ಒದಗಿಸಬೇಕಾಗುತ್ತದೆ ಮತ್ತು ನಮ್ಮಲ್ಲಿರುವ ಎಲ್ಲ ಹಸುಗಳಿಗೂ, ಎಮ್ಮೆಗಳಿಗೂ ಮತ್ತು ದನಗಳಿಗೂ ಮೇವನ್ನು ಸರಬರಾಜು ಮಾಡಬೇಕಾಗುತ್ತದೆ. ಈ ಒಂದು ಸಂದರ್ಭದಲ್ಲಿ ಯಾವ ಒಂದು ವೇಗದಿಂದ ಕೆಲಸಗಳು ಆಗಬೇಕೋ ಆ ಒಂದು ವೇಗದಿಂದ ಕೆಲಸಗಳು ಆಗುತ್ತಿಲ್ಲವೆಂದು ಸನ್ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಬರಗಾಲ ಬಂದರೆ ಸಾಕು, ಕೆಳಮಟ್ಟದಲ್ಲಿರುವಂತಹ ಅಧಿಕಾರಿಗಳು ತಾವು ವೈಭೋಗದಿಂದ ಜೀವನ ನಡೆಸಬಹುದೆಂದು ಲೆಕ್ಕ ಹಾಕುತ್ತಾರೆ. ಇದಕ್ಕೆ ಕಾರಣವೆಂದರೆ, ಸರ್ಕಾರದವರು ನಾನಾ ಕೆಲಸಗಳಿಗೆಂದು ಕೊಡುವಂತಹ ಹಣವನ್ನು ಇವರು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಇದನ್ನು ತಪ್ಪಿಸಬೇಕಾದರೆ, ಹಣ ಖರ್ಚು ಮಾಡುವಂತಹ ಅಧಿಕಾರವನ್ನು ತಾಲ್ಲೂಕ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಯೋಗ್ಯರಾದಂಥ ಅಧಿಕಾರಿಗಳನ್ನು ನೋಡಿ ಕೊಡಬೇಕು. ಈ ಅಧಿಕಾರಿಗಳು ಎಲ್ಲಿ ಕೆಲಸ ಸರಿಯಾಗಿ ನಡೆದಿದೆ, ಎಲ್ಲಿ ಬೋಗಸ್ ಕೆಲಸ ನಡೆದಿದೆ ಎಂಬುದನ್ನು ಪತ್ತೆ ಮಾಡಬೇಕು ? ಕೆಲವು ಕಡೆಗಳಲ್ಲಿ ರಸ್ತೆ ಕೆಲಸ ನಡೆಯದಿದ್ದರೂ ನಡೆದಿದೆ ಎಂದು ಲೆಕ್ಕದಲ್ಲಿ ತೋರಿಸುತ್ತಾರೆ. ಬೋರ್‌ವೆಲ್‌ಗಳನ್ನು ೧೦೦ ಇಲ್ಲವೇ ೧೫೦ ಅಡಿಗಳ ಆಳದವರೆಗೆ ತೆಗೆದಿದ್ದರೂ ಸಹ ೨೫೦–೩೦೦ ಅಡಿ ಆಳದವರೆಗೆ ತೆಗೆಯಲಾಗಿದೆ ಎಂದು ಲೆಕ್ಕ ಕೊಡುತ್ತಾರೆ. ಇಂತಹ ಕೆಲಸ ನಡೆಯದಂತೆ ಅಧಿಕಾರಿಗಳು ನೋಡಿಕೊಳ್ಳಬೇಕಾಗುತ್ತದೆ. ಕಾಮಗಾರಿ ಕೆಲಸಗಳು ಚೆನ್ನಾಗಿ ನಡೆಯಬೇಕು. ಜನರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ನಮ್ಮ ಭಾಗದಲ್ಲಿ ಮಲಪ್ರಭಾ ಮತ್ತು ಘಟಪ್ರಭಾ ಅಣೆಕಟ್ಟುಗಳು ನಿರ್ಮಾಣವಾಗಿವೆ. ಆದರೆ ಕಾಲುವೆಗಳ ಕೆಲಸ ಪೂರ್ತಿಯಾಗಿಲ್ಲ. ಇದನ್ನು ಮುಗಿಸಲು ಸರ್ಕಾರದವರು ಸಾಕಷ್ಟು ಹಣ ಕೊಡುತ್ತಿಲ್ಲ. ಕೇವಲ ೮–೯ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದು ಸಾಲುವುದಿಲ್ಲ. ಕನಿಷ್ಠ ಪಕ್ಷ ೧೦೦–೧೫೦ ಕೋಟಿ ರೂಪಾಯಿಗಳನ್ನಾದರೂ ಈ ಕೆಲಸಕ್ಕೆ ಒದಗಿಸಬೇಕು. ಈಗಿನಂತೆ ಹಣ ಒದಗಿಸುತ್ತಾ ಹೋದರೆ ಈ ಕೆಲಸ ೨ ಸಾವಿರದ ಇಸವಿಯ ಹೊತ್ತಿಗೂ ಸಹ ಮುಗಿಯುವುದಿಲ್ಲ. ಈ ಅಣೆಕಟ್ಟುಗಳಲ್ಲಿ ಸೇರಿಕೊಂಡಿರುವ ಹೂಳನ್ನು ಸಹ ತೆಗೆಸಬೇಕು. ಈ ಕೆಲಸವನ್ನು ಸಕಾಲದಲ್ಲಿ ಮಾಡದಿದ್ದರೆ ಇನ್ನು ಕೆಲವೇ ವರ್ಷಗಳಲ್ಲಿ ಅಲ್ಲಿ ಪೂರ್ತಾ ಹೂಳೇ ತುಂಬಿಕೊಳ್ಳಬಹುದು. ಈ ರೀತಿಯಾದರೆ ರೈತರಿಗೆ ಸಾಕಷ್ಟು ನೀರನ್ನು ಒದಗಿಸುವುದಕ್ಕಾಗುವುದಿಲ್ಲ. ಈ ಘಟಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ಕಾಲುವೆ ನಿರ್ಮಾಣಕ್ಕೆ ಬೇಕಾದಂಥ ಹಣವನ್ನು ವಿಶ್ವಬ್ಯಾಂಕ್‌ನಿಂದ ಪಡೆಯಲು ಪ್ರಯತ್ನಿಸಲಾಗುವುದೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಅಲ್ಲಿಂದ ಹಣ ಸಿಗುವುದು ತಡವಾಗಬಹುದು. ಆದ್ದರಿಂದ ಬೇರೆ ಯಾವುದಾದರೂ ಒಂದು ಫಂಡ್‌ನ ಹಣವನ್ನು ಈ ಕೆಲಸಕ್ಕೆ ಡೈವರ್ಟ್ ಮಾಡುವುದು ಒಳ್ಳೆಯದು. ಈ ಕಾಲುವೆ ಕೆಲಸಕ್ಕೆ ಕೊನೆಯಪಕ್ಷ ೨೫–೩೦ ಕೋಟಿ ರೂಪಾಯಿಗಳನ್ನಾದರೂ ತಾವು ಒದಗಿಸಬೇಕು. ತಾವು ಧಾರವಾಡ ಜಿಲ್ಲೆಯಿಂದ ಬಂದಿದ್ದೀರಿ. ಈ ಕಾರಣದಿಂದ ತಾವೇ ಒಂದು ಬೇಡಿಕೆಯನ್ನು ಈ ಸದನದಲ್ಲಿ ಮಂಡಿಸುವುದಕ್ಕಾಗುವುದಿಲ್ಲ. ತಾವು ಏನಿದ್ದರೂ ಮಂತ್ರಿಮಂಡಲದಲ್ಲಿ ತಮ್ಮ ಒಂದು ಪ್ರಭಾವವನ್ನು ಬೀರಿ ಇದಕ್ಕೆ ಹೆಚ್ಚಿನ ಹಣ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತೆ ಅಥಣಿ, ಗೋಕಾಕ್, ರಾಮದುರ್ಗ, ರಾಯಬಾಗ್, ಹುಕ್ಕೇರಿ, ಚಿಕ್ಕೋಡಿ, ಖಾನಾಪುರ ಮುಂತಾದ ಕಡೆಗಳಲ್ಲಿ ತಾವು ಏನಿದ್ದರೂ ಸಣ್ಣ ನೀರಾವರಿ ಕೆರೆಗಳ ಕೆಲಸವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಕೆಲಸವನ್ನು

ತಾವು ಕೂಡಲೇ ಪ್ರಾರಂಭ ಮಾಡಬೇಕೇ ಹೊರತು ಈ ಬಗ್ಗೆ ಒಂದು ವರದಿ ತಯಾರು ಮಾಡಿದ್ದೇವೆ, ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ. ವರದಿಗಳನ್ನು ತಾವು ಹೆಗಲ ಮೇಲೆ ಹೊತ್ತುಕೊಂಡು ಹೋಗುವಂತಹ ಕೆಲಸ ಆಗಬಾರದು. ಮುಂದೆ ಕೇಂದ್ರದವರು ಹಣ ಕೊಡದ ಕಾರಣ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವಂತಹ ಪರಿಸ್ಥಿತಿ ಬರಬಾರದು. ಇದೇ ಸಂದರ್ಭದಲ್ಲಿ ಮತ್ತೊಂದು ವಿಷಯ ಹೇಳುತ್ತೇನೆ. ಏನೆಂದರೆ, ನಮ್ಮ ಭಾಗದಲ್ಲಿ ಹರಿಯುತ್ತಿರುವ ಹಿರಣ್ಯಕೇಶಿ ನದಿಗೆ ರಾಮತೀರ್ಥ ಬಳಿ ಒಂದು ಅಣೆಕಟ್ಟನ್ನು ಕಟ್ಟುವುದು ಬಹಳ ಅಗತ್ಯವಾಗಿದೆ. ಇದು ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ಪ್ರದೇಶದಲ್ಲಿ ಬರುತ್ತದೆ. ಈ ಕೆಲಸವನ್ನು ತೆಗೆದುಕೊಂಡರೆ ಮುಂದೆ ಮಹಾಜನ್ ವರದಿಯ ಪ್ರಕಾರ ನಮ್ಮ ರಾಜ್ಯಕ್ಕೆ ಮಹಾರಾಷ್ಟ್ರದಿಂದ ಬರುವಂತಹ ಕೆಲವೊಂದು ಪ್ರದೇಶದ ಜನರಿಗೂ ಸಹ ಇದು ವರದಾನವಾಗಬಹುದು. ಆದ್ದರಿಂದ ಈ ಕೆಲಸವನ್ನು ಸರ್ಕಾರದವರು ಕೂಡಲೇ ತೆಗೆದುಕೊಳ್ಳಬೇಕು.

ಇನ್ನು ಬೆಳೆಗಳ ಆಣೆವಾರಿ ಲೆಕ್ಕವನ್ನು ಮಾಡುವ ಕಾಲಕ್ಕೆ ಸರಿಯಾಗಿ ಮಾಡಬೇಕೆಂದು ನಾನು ಅನೇಕ ಸಲ ತಾಲ್ಲೂಕ್ ಮಟ್ಟದ ಸಭೆಗಳಲ್ಲಿ ಮತ್ತು ಜಿಲ್ಲಾ ಮಟ್ಟದ ಸಭೆಗಳಲ್ಲಿ ಸಲಹೆ ಮಾಡಿದ್ದರೂ ಸಹ ಅಧಿಕಾರಿಗಳು ಸರಿಯಾಗಿ ಮಾಡುತ್ತಿಲ್ಲ. ಇದರ ಜೊತೆಗೆ ಆಯಾ ಊರುಗಳಲ್ಲಿ ಮಳೆ ಎಷ್ಟಾಗಿದೆ ಎಂಬ ಲೆಕ್ಕವನ್ನು ಸಹ ಸರಿಯಾಗಿ ಅಲ್ಲಿನ ಅಧಿಕಾರಿಗಳು ಮೇಲಿನ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಿಲ್ಲ. ಈ ಕೆಲಸವನ್ನು ವ್ಯವಸಾಯ ಇಲಾಖೆಯವರು ಮಾಡಬೇಕೇ, ಲೋಕೋಪಯೋಗಿ ಇಲಾಖೆಯವರು ಮಾಡಬೇಕೇ ಅಥವಾ ರೆವಿನ್ಯೂ ಇಲಾಖೆಯವರು ಮಾಡಬೇಕೇ ಎಂಬುದನ್ನು ಮೊದಲು ನಿಗದಿ ಮಾಡಬೇಕು. ಏಕೆಂದರೆ, ಕೆಲವು ಕಡೆಗಳಲ್ಲಿ ಮಳೆಯಾಗದಿದ್ದರೂ ಸಹ, ಎಷ್ಟು ಮಳೆಯಾಗಿದೆ ಎಂಬುದನ್ನು ತೋರಿಸುವಂತಹ ಯಂತ್ರದೊಳಕ್ಕೆ ಗ್ಲಾಸ್‌ನಿಂದ ನೀರನ್ನು ಹಾಕಿ, ಇಷ್ಟು ಮಳೆಯಾಗಿದೆ ಎಂದು ವರದಿ ಕಳುಹಿಸಿಕೊಡುತ್ತಿದ್ದಾರೆ. ಇದು ತಪ್ಪಬೇಕಾದರೆ, ವಿಶೇಷ ಮಾದರಿಯಾದಂಥ ಯಂತ್ರವನ್ನು ನೀವು ಎಲ್ಲ ಕಡೆಯೂ ಅಳವಡಿಸಬೇಕು. ಈಗ ಮೇಲಿನ ಅಧಿಕಾರಿಗಳು ತಮ್ಮ ಕೆಳಗಿನ ಅಧಿಕಾರಿಗಳ ಮೇಲೆ ನಂಬಿಕೆಯಿಟ್ಟು, ಅವರು ಕೊಟ್ಟ ವರದಿಯನ್ನೇ ನಂಬಿಕೊಂಡು ಸರ್ಕಾರಕ್ಕೆ ಕಳುಹಿಸಿಕೊಡುತ್ತಿದ್ದಾರೆ. ಆದರೆ ಇದು ನಿಜವಾದ ವರದಿ ಆಗುವುದಿಲ್ಲ ಆದ್ದರಿಂದ ಇದಕ್ಕೆ ಏನಾದರು ಒಂದು ಬಿಗಿ ವ್ಯವಸ್ಥೆ ಮಾಡಬೇಕು.

ಇನ್ನು ಪಶುಸಂಗೋಪನಾ ಇಲಾಖಾ ಬೇಡಿಕೆಯ ಮೇಲಿನ ಚರ್ಚೆಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವಾಗ, ಬರಗಾಲ ಪೀಡಿತ ಪ್ರದೇಶಗಳಿಗೆ ಮೇವನ್ನು ಸರಬರಾಜು ಮಾಡುವ ಸಲುವಾಗಿ ನೀರಾವರಿ ಪ್ರದೇಶಗಳಲ್ಲಿ ಒಣಮೇವನ್ನು ಸಂಗ್ರಹ ಮಾಡುವಂತಹ ಒಂದು ಕಾರ್ಯಕ್ರಮವನ್ನು ಕೈಕೊಳ್ಳುತ್ತೇವೆಂದು ಹೇಳಿದರು. ನೀರಾವರಿ ಪ್ರದೇಶಗಳಲ್ಲಿ ಹಸಿರು ಮೇವಿನ ಉತ್ಪಾದನೆ ಮಾಡಬೇಕೇ ಹೊರತು ಒಣಮೇವನ್ನು ಯಾವರೀತಿ ಉತ್ಪಾದನೆ ಮಾಡುತ್ತಾರೆ ? ಇಂತಹ ಒಂದು ಕಾರ್ಯಕ್ರಮವನ್ನು ಯಾರು ರೂಪಿಸಿದರೋ ನನಗೆ ಗೊತ್ತಿಲ್ಲ. ಕಳೆದ ಸಲ ನಮ್ಮ ಭಾಗಕ್ಕೆ ಕೇಂದ್ರದ ಸ್ಟಡಿ ಟೀಮ್ ಬಂದಾಗ ನಾನೂ ಸಹ ಅವರನ್ನು ಭೇಟಿ ಮಾಡು ಹೋಗಿದ್ದೆ. ಆಗ ಅಲ್ಲಿನ ಅಧಿಕಾರಿಗಳು ಅವರಿಗೆ ಎಂತಹ ವರದಿ ಕೊಟ್ಟಿದ್ದರೆಂದರೆ, ಮೇ ತಿಂಗಳ ಕೊನೆಯ ವಾರದಲ್ಲಿ ಮಳೆ ಆಯಿತು, ಆದರೆ ರೈತರು ಬಿತ್ತಿದ್ದ ಕಾಳು ಮಾತ್ರ ಹುಟ್ಟಲಿಲ್ಲ ಎಂದು ವರದಿಯಲ್ಲಿ ಹೇಳಿದ್ದರು. ಇಂತಹ ವರದಿಗಳನ್ನು ಕೊಟ್ಟರೆ ಕೇಂದ್ರದ ಮಂತ್ರಿಗಳು ಯಾವ ರೀತಿ ನಮ್ಮ ಮೇಲೆ ನಂಬಿಕೆ ಇಡುತ್ತಾರೆ ಇವೊತ್ತು ಕೇವಲ ಬೆಳಗಾಂ ಜಿಲ್ಲೆ ಮಾತ್ರವಲ್ಲ, ವಿಜಾಪುರ, ಗುಲ್ಬರ್ಗ, ಮೈಸೂರು, ಕೋಲಾರ. ಮಂಡ್ಯ ಹೀಗೆ ರಾಜ್ಯದ ಅನೇಕ ಭಾಗಗಳಲ್ಲಿ ಬರಗಾಲ ಬಂದಿದೆ. ಪದೇಪದೇ ಬರುತ್ತಿರುವ ಈ ಬರಗಾಲಕ್ಕೆ ಶಾಶ್ವತ ಪರಿಹಾರವನ್ನು ಒದಗಿಸುವ ಸಲುವಾಗಿ ಒಂದು ವಿಶೇಷ ಪ್ರಾಧಿಕಾರವನ್ನು ರಚನೆ ಮಾಡಬೇಕು. ಈಗ ಬೆಂಗಳೂರು ನಗರ ಮನಬಂದಂತೆ ಬೆಳೆಯುವುದನ್ನು ತಡೆಗಟ್ಟುವ ಸಲುವಾಗಿ ಯಾವ ರೀತಿ ಒಂದು ಪ್ರಾಧಿಕಾರವನ್ನು ರಚನೆ ಮಾಡಲಾಗಿದೆಯೋ ಅದೇರೀತಿ ಇದಕ್ಕೂ ಒಂದು ಯೋಜನಾ ಪ್ರಾಧಿಕಾರವನ್ನು ಏತಕ್ಕೆ ರಚನೆ ಮಾಡಬಾರದು ? ಈಗ ಹತ್ತು ದಿವಸಗಳಿಗೆ ಇಲ್ಲವೇ ೨-೩ ತಿಂಗಳಿಗೆ ಸಂಬಂಧಪಟ್ಟಂತೆ ಪರಿಸ್ಥಿತಿಯನ್ನು ನೋಡಿಕೊಂಡು ವರದಿ ತಯಾರಿಸಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದಕ್ಕೆ ಬದಲು ಹತ್ತಿಪ್ಪತ್ತು ವರ್ಷಗಳ ಒಂದು ಮುಂದಾಲೋಚನೆ ಇಟ್ಟುಕೊಂಡು ಏತಕ್ಕೆ ನಮ್ಮ ಯೋಜನೆಗಳನ್ನು ತಯಾರು ಮಾಡಬಾರದು ? ಇದಕ್ಕೆ ಸಂಬಂಧಪಟ್ಟಂತೆ ಈ ಸದನದ ಸದಸ್ಯರೂ ಇರುವಂತಹ ಯೋಜನಾ ಪ್ರಾಧಿಕಾರವನ್ನು ಏತಕ್ಕೆ ರಚನೆ ಮಾಡಬಾರದೆಂದು ನಾನು ಕೇಳುತ್ತೇನೆ ? ಮಾನ್ಯ ಮಂತ್ರಿಗಳು ಈಗಾಗಲೇ ಹಲವಾರು ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದಾರೆ. ಇನ್ನೂ ಕೆಲವು ಜಿಲ್ಲೆಗಳಿಗೆ ಭೇಟಿ ಕೊಡಬೇಕಾಗಿದೆ, ಖರ್ಗೆ ಸಮಿತಿಯವರು ವರದಿ ಕೊಟ್ಟಿದ್ದಾರೆ...... ಅದು ಬಹಳ ಒಳ್ಳೆಯ ರಿಪೋರ್ಟ್ ಎಂದು ಹೇಳಬಹುದು. ಇದೇ ರೀತಿ ರಾಜ್ಯ ಮಟ್ಟ

ತಾಲ್ಲೂಕು ಮಟ್ಟ, ಹಳ್ಳಿ ಮಟ್ಟದವರೆಗೆ ಪ್ರತಿ ೧೫ ದಿವಸಕ್ಕೆ ಒಮ್ಮೆ ರಿಪೋರ್ಟನ್ನು ತರಿಸಿಕೊಳ್ಳಬೇಕು. ತಾವು ಪ್ರತಿಯೊಂದು ಕ್ಷೇತ್ರಕ್ಕೂ ಹೋಗಿ ಆಯಾ ಶಾಸಕರನ್ನು ಕರೆದು ಆಲೋಚನೆ ಮಾಡಬೇಕು. ಇವತ್ತು ಪರಿಸ್ಥಿತಿಯು ಬಹಳ ಡೇಂಜರ್ ಇದೆ ಎಂದು ನಾನು ಹೇಳುತ್ತಿದ್ದೇನೆ. ನೀರಾವರಿ ಕ್ಷೇತ್ರದಲ್ಲಿ ವೇಗವಾಗಿ ಕೆಲಸ ಮಾಡತಕ್ಕಂತಹ ವಿಚಾರವೇ ಸರ್ಕಾರದಲ್ಲಿ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವತ್ತಿನ ಬರಗಾಲ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಯಾವ ಯಾವ ಇಲಾಖೆಯ ಸೆಕ್ರೆಟರಿಗಳು ಬಂದಿದ್ದಾರೆ. ಬರಗಾಲ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದು ಬರೀ ರೆವಿನ್ಯೂ ಇಲಾಖೆಗೆ ಮಾತ್ರ ಸಂಬಂಧಪಟ್ಟ ವಿಚಾರವೇ ? ಎಲ್ಲಾ ಇಲಾಖೆಗಳಿಗೆ ಇದು ಸಂಬಂಧಪಟ್ಟ ವಿಚಾರವಾಗಿರುವುದರಿಂದ ಎಲ್ಲಾ ಇಲಾಖೆಯ ಕಾರ್ಯದರ್ಶಿಗಳೂ ಬರಗಾಲ ಪರಿಸ್ಥಿತಿಯನ್ನು ಅಧ್ಯಯನ ಮಾಡಬೇಕು. ಹಾಗು ಈ ಬರಗಾಲ ಪರಿಸ್ಥಿತಿಯೂ ಪದೇ ಪದೇ ಉದ್ಭವವಾಗುವುದಕ್ಕೆ ಕಾರಣಗಳು ಏನು ? ಮತ್ತು ಇದನ್ನು ಶಾಶ್ವತವಾಗಿ ಪರಿಹರಿಸಲು ಏನು ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಬಗ್ಗೆ ಆಲೋಚನೆ ಮಾಡಬೇಕು. ರೆವಿನ್ಯೂ ಡಿಪಾರ್ಟ್‌ಮೆಂಟಿನವರೇ ಎಲ್ಲಾ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಮಾನ್ಯ ರೆವಿನ್ಯೂ ಮಂತ್ರಿಯವರು ಎಲ್ಲಾ ಇಲಾಖೆಯ ಕಾರ್ಯದರ್ಶಿಗಳೂ ಈ ಬರಗಾಲ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಅದನ್ನು ಪರಿಹರಿಸಲು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಬರಗಾಲ ಪರಿಸ್ಥಿತಿಯನ್ನು ಸಂಪೂರ್ಣವಾಗಿ ತೊಡೆದುಹಾಕಲು ೨೦–೩೦ ವರ್ಷದ ಒಂದು ಯೋಜನೆಯನ್ನು ಮಾಡಿ ಶಾಶ್ವತವಾಗಿ ಬರಗಾಲವನ್ನು ಪರಿಹರಿಸಬೇಕು. ಸುಮ್ಮನೇ ಪ್ರತಿ ವರ್ಷವೂ ಬರಗಾಲ ಬಂದಾಗ ತಾತ್ಕಾಲಿಕವಾದ ಕೆಲಸಗಳನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಶಾಶ್ವತವಾದ ಕೆಲಸಗಳನ್ನು ಕೈಗೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ. ಇಲ್ಲದಿದ್ದರೆ ನಮ್ಮ ರಾಜ್ಯವೂ ಸಾಧಾರಣವಾಗಿ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಲೇ ಇರಬೇಕಾಗುತ್ತದೆ. ಆದ್ದರಿಂದ ಶಾಶ್ವತವಾದ ಬರಗಾಲ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇದುವರೆಗೂ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಈಗ ಕಡಪಟ್ಟಿಯವರು ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ಕಾರ್ಯಕಲಾಪದ ಪಟ್ಟಿಯ ಪ್ರಕಾರ ಇನ್ನು ಎರಡು, ಮೂರು ದಿನಗಳು ಮಾತ್ರ ಸದನವು ನಡೆಯುತ್ತದೆ. ಇನ್ನೂ ಕುದುರೇ ಮೋತಿ ವಿಷಯದ ಮೇಲೆ ಚರ್ಚೆ ಮಾಡಬೇಕಾಗಿದೆ. ಆಮೇಲೆ ಅನೇಕ ನಿರ್ಣಯಗಳ ಮೇಲೆ ಚರ್ಚೆ ಮಾಡಬೇಕಾಗಿದೆ ಮತ್ತು ರೆವಿನ್ಯೂ ಜಾಗದಲ್ಲಿ ಕಟ್ಟಿರುವ ಮನೆಗಳನ್ನು ಈ ಸರ್ಕಾರದವರು ಕೆಡವಿರುವ ವಿಚಾರದ ಮೇಲೆ ಚರ್ಚೆಮಾಡಬೇಕಾಗಿದೆ. ಈ ವಿಷಯಗಳ ಮೇಲೆ ಚರ್ಚೆ ಮಾಡುವುದಕ್ಕೆ ಯಾವಾಗ ನಮಗೆ ನಮಗೆ ಅವಕಾಶವನ್ನು ಕಲ್ಪಿಸಿಕೊಡುತ್ತೀರಿ ಹಾಗೂ ಆ ಚರ್ಚೆಗೆ ಯಾವಾಗ ಉತ್ತರವನ್ನು ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೀರಿ ಎಂಬುದನ್ನು ನಮಗೆ ತಿಳಿಸಬೇಕು.

ಅಧ್ಯಕ್ಷರು.—ಬರಗಾಲದ ಬಗ್ಗೆ ಮಾತನಾಡಬೇಕೆಂದು ಇನ್ನೂ ಅನೇಕ ಜನ ಮಾನ್ಯ ಸದಸ್ಯರು ತಮ್ಮ ತಮ್ಮ ಹೆಸರುಗಳನ್ನು ನನಗೆ ಕೊಟ್ಟಿದ್ದಾರೆ. ಇಲ್ಲಿಗೆ ಚರ್ಚೆ ಮುಗಿಸಿ ಬೇರೆ ವಿಷಯ ತೆಗೆದುಕೊಳ್ಳೋಣ ಎಂದರೆ ನನ್ನ ಅಭ್ಯಂತರ ಏನೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಯಾವಾಗ ಈ ಚರ್ಚೆಯನ್ನು ಮುಗಿಸಬೇಕು ಎಂದು ಆಲೋಚನೆ ಮಾಡಿದ್ದೀರಿ ?

ಅಧ್ಯಕ್ಷರು.—ಆದಷ್ಟು ಬೇಗ ಮುಗಿಸಬೇಕು ಎನ್ನುವುದೇ ನನ್ನ ಅಭಿಪ್ರಾಯ. ಈ ಕಡೆಯ ಮಾನ್ಯ ಸದಸ್ಯರು ಹಾಗು ಆ ಕಡೆಯ ಮಾನ್ಯ ಸದಸ್ಯರು ಒಪ್ಪಿಕೊಂಡರೆ ಈಗಲೇ ಮುಗಿಸಬಹುದು

ಶ್ರೀ ಎಸ್. ಬಂಗಾರಪ್ಪ.—ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಹೋದರೆ ಸಮಯ ಬಹಳ ಬೇಕಾಗುತ್ತದ. ಆದ್ದರಿಂದ ಈ ಬರಗಾಲದ ಬಗ್ಗೆ ನಮ್ಮ ಕಡೆಯ ಮಾನ್ಯ ಸದಸ್ಯರಲ್ಲಿ ಇಬ್ಬರು ಮಾತನಾಡುತ್ತಾರೆ. ಆ ಕಡೆಯ ಮಾನ್ಯ ಸದಸ್ಯರಲ್ಲಿ ೪ ಜನ ಮಾತನಾಡಲಿ ಇಲ್ಲದಿದ್ದರೆ ರಾತ್ರಿ ಬಹಳ ಹೊತ್ತು ಇಲ್ಲಿ ಕುಳಿತುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ).—ಮಾನ್ಯ ಅಧ್ಯಕ್ಷರೇ, ನಾವು ಬಿಜಾಪುರ ಜಿಲ್ಲೆಯವರು. ಬಿಜಾಪುರ ಜಿಲ್ಲೆಯು ಯಾವಾಗಲೂ ಬರಗಾಲದ ಪರಿಸ್ಥಿತಿಗೆ ತುತ್ತಾಗುತ್ತದೆ. ಅಲ್ಲಿನ ಜನರು ನಿಜವಾಗಿಯೂ ಬೇರೆ ಜಿಲ್ಲೆಯವರಿಗಿಂತ ಬಹಳ ಕಷ್ಟಪಡುತ್ತಿದ್ದಾರೆ. ೧೩ ನೇ ಶತಮಾನ

ದಿಂದ ಈ ಬಿಜಾಪುರ ಜಿಲ್ಲೆ ಬೇರೆ ಬೇರೆ ರಾಜ್ಯಗಳಲ್ಲಿ ಸೇರಿಹೋಗಿತ್ತು. ಈಗ ೨೦ನೇ ಶತಮಾನ. ಈಗ ಬಿಜಾಪುರ ಕರ್ನಾಟಕ ಜಿಲ್ಲೆಗೆ ಸೇರಿಕೊಂಡಿದೆ. ರಾಜ್ಯವು ಪುನರ್‌ವಿಂಗಡಣೆ ಆಗುವ ಪೂರ್ವದಲ್ಲಿ ತುಂಗ ಭದ್ರ ನದಿಯ ಆ ಕಡೆಯ ಭಾಗ, ಅದರಲ್ಲಿಯೂ ವಿಶೇಷವಾಗಿ ಹೈದರಾಬಾದ್ ಕರ್ನಾಟಕ, ರಾಯಚೂರು, ಗುಲ್ಬರ್ಗಾ ಹಾಗು ಮುಂಬೈ ಕರ್ನಾಟಕ, ಬಿಜಾಪುರ, ಧಾರವಾಡ ಜಿಲ್ಲೆ ಹಾಗೂ ಬೆಳಗಾವ್ ಜಿಲ್ಲೆಯ ಕೆಲವು ತಾಲ್ಲೂಕುಗಳು ಬರಗಾಲಕ್ಕೆ ಸತತವಾಗಿ ತುತ್ತಾಗುತ್ತವೆ. ಅದಕ್ಕಾಗಿ ಆ ಪ್ರದೇಶಗಳಿಗೆ ವಿಶೇಷ ಆಧ್ಯತೆಯನ್ನು ಕೊಟ್ಟು ನೀರಾವರಿ ಯೋಜನೆಗಳನ್ನು ಮಾಡಿಕೊಡಬೇಕೆಂದು ಹಿಂದಿನಿಂದಲೂ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರೂ ಕೂಡ ಇದುವರೆಗೆ ಯಾವುದೇ ಪರಿಣಾಮಕಾರಿಯಾದ ಕೆಲಸವಾಗಿಲ್ಲ. ಸರ್ಕಾರದವರು ನಮ್ಮ ಜಿಲ್ಲೆಗೆ ವಿಶೇಷ ಆಧ್ಯತೆಗಳನ್ನು ಕೊಟ್ಟು ಶಾಶ್ವತವಾಗಿ ಬರಗಾಲದ ದವಡೆಯಲ್ಲಿರುವ ನಮ್ಮನ್ನು ಪಾರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಮನೆಯ ಸದಸ್ಯರಾದ ಮಾನ್ಯ ಕೃಷ್ಣನ್‌ರವರು ಒಂದು ಸಲಹೆಯನ್ನು ಸರ್ಕಾರಕ್ಕೆ ಮಾಡಿದ್ದಾರೆ. ಅದೇನೆಂದರೆ, ಶಾಸಕರು ಹಾಗೂ ಸಂಸತ್ ಸದಸ್ಯರ ಒಂದು ನಿಯೋಗವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಪ್ರಧಾನಮಂತ್ರಿಗಳ ಮನ ಒಲಿಸಿ ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿಯನ್ನು ಶಾಶ್ವತವಾಗಿ ನಿವಾರಣೆ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಹಣ ಸಹಾಯವನ್ನು ಕೇಳಬೇಕೆಂದು ಅವರು ಸಲಹೆ ಮಾಡಿದ್ದಾರೆ. ಅದೇ ರೀತಿ ಮಾಡಿದರೆ ಬಹಳ ಒಳ್ಳೆಯದೆಂದು ನನ್ನ ಭಾವನೆ ಕೂಡ ಆಗಿದೆ. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಾರೆಂದು ನಾನು ನಂಬಿಕೊಂಡಿದ್ದೇನೆ. ಬಿಜಾಪುರ ಜಿಲ್ಲೆಯ ಭಾಗದಲ್ಲಿ ಬರಗಾಲ ಪರಿಸ್ಥಿತಿಯನ್ನು ನಿವಾರಣೆ ಮಾಡಲು ಶಾಶ್ವತವಾದಂತಹ ಹಾಗು ನಿಶ್ಚಿತವಾದಂತಹ ಯೋಜನೆಯನ್ನು ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಈ ಯೋಜನೆಯಂತೆ ಕಾರ್ಯಕ್ರಮಗಳನ್ನು ಮಾಡಲು ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರದ ಪ್ರಭಾವವನ್ನು ಬೀರಿ ಪ್ರಧಾನ ಮಂತ್ರಿಯವರ ಮನ ಒಲಿಸಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ಧನ ಸಹಾಯವನ್ನು ಪಡೆಯಬೇಕೆಂದು ನಾನು ಹೇಳುತ್ತೇನೆ. ಕೇಂದ್ರ ಸರ್ಕಾರದಿಂದ ಧನಸಹಾಯ ಸಿಗದಿದ್ದರೆ ಬೇರೆ ಯೋಜನೆಯನ್ನು ರೂಪಿಸಿ ವರ್ಲ್ಡ್ ಬ್ಯಾಂಕಿನಿಂದಾದರು ಹಣವನ್ನು ಪಡೆಯಬೇಕಾಗುತ್ತದೆ. ಮಾನ್ಯ ದೇವೇಗೌಡರು ಇಲ್ಲೀತನಕ ಕೃಷ್ಣಾ ಪ್ರಾಜೆಕ್ಟ್‌ಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಹಾಗೂ ಇನ್ನೂ ಎಷ್ಟು ಹಣ ಬೇಕಾಗುತ್ತದೆಂದು ತಿಳಿಸಿದ್ದಾರೆ. ಕೃಷ್ಣಾ ಪ್ರಾಜೆಕ್ಟಿನ್ ಮೊದಲನೇ ಹಂತಕ್ಕೆ ೯೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ, ೨ನೇ ಹಂತಕ್ಕೆ ೧೫ ನೂರು ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ತಿಳಿಸಿದ್ದಾರೆ. ಈಗ ಕೊಡುತ್ತಿರುವುದು ೪೮ ಕೋಟಿ ರೂಪಾಯಿಗಳು ಮಾತ್ರ. ಇಷ್ಟು ಕಡಿಮೆ ದರದಲ್ಲಿ ಹಣವನ್ನು ಕೊಟ್ಟರೆ ಯಾವ ಶತಮಾನಕ್ಕೆ ಈ ಕೃಷ್ಣಾ ಪ್ರಾಜೆಕ್ಟನ್ನು ಮುಗಿಸುವುದಕ್ಕೆ ಆಗುತ್ತದೆ ? ನೀರಾವರಿ ಕ್ಷೇತ್ರಕ್ಕೆ ಹೆಚ್ಚು ಆಧ್ಯತೆ ಕೊಡದೇ ಇದ್ದರೆ ನಮ್ಮ ಜಿಲ್ಲೆಗಳು ಶಾಶ್ವತವಾಗಿ ಬರಗಾಲಕ್ಕೆ ತುತ್ತಾಗಬೇಕಾಗುತ್ತದೆ. ಇದರಿಂದ ನಮ್ಮ ಮುಂದಿನ ಪೀಳಿಗೆಯ ಜನರು ನಮ್ಮನ್ನು ಶಪಿಸುತ್ತಾರೆ. ಎಲ್ಲಾ ತಿಳುವಳಿಕೆ ಇದ್ದರೂ ಕೂಡ ಯೋಗ್ಯ ರೀತಿಯಲ್ಲಿ ಕೆಲಸವನ್ನು ಏಕೆ ಮಾಡುವುದಿಲ್ಲ ?

೪-೩೦ ಪಿ.ಎಂ.

ಕೆಲವು ಕೆಲಸಗಳು ಸರಿಯಾಗಿ ಆಗಿಲ್ಲ. ಈ ವಿಷಯದಲ್ಲಿ ನಾನು ಮಾನ್ಯ ದೇವೇಗೌಡರವರ ಒಬ್ಬರ ತಪ್ಪು ಎಂದು ಹೇಳುವುದಿಲ್ಲ. ಈ ರೀತಿಯಾಗಿ ಹಿಂದಿನಿಂದಲೂ ನಡೆದುಕೊಂಡು ಬಂದಿರತಕ್ಕಂತಾದ್ದು ಇದೆ. ರೀ ಆರ್ಗನೈಸೇಶನ್ ಆಗುವ ಹೊತ್ತಿನಲ್ಲಿ ಈ ಭಾಗಗಳಲ್ಲಿ ನೀರಾವರಿ ಸೌಲಭ್ಯಗಳು ಕಡಿಮೆ ಇದೆ, ಆದುದರಿಂದ ಇಲ್ಲಿ ನೀರಾವರಿಗೆ ಆದ್ಯತೆ ಕೊಡಬೇಕೆಂದು ಉಲ್ಲೇಖ ಇದ್ದರೂ ಕೂಡಾ ಇಲ್ಲಿಯವರೆಗೂ ಕಡೆಗಣಿಸಿಕೊಂಡು ಬಂದಿದ್ದಾರೆ. ಆದಕಾರಣ ಯೋಜನೆ ಖಾತೆಯನ್ನು ಕೈಯಲ್ಲಿ ಹಿಡಿದುಕೊಂಡಿರುವಂತಹ ಸಚಿವರು ಈ ವಿಷಯದ ಬಗ್ಗೆ ಗಮನಕೊಡಬೇಕೆಂದು ಹೇಳಬಯಸುತ್ತೇನೆ, ನಮ್ಮ ಭಾಗಕ್ಕೆ ಸಿಗಬೇಕಾದಂತಹ ಸೌಲಭ್ಯಗಳು ಸಿಗಬೇಕು, ಅವುಗಳನ್ನು ಒದಗಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ, ಮಾನ್ಯ ಮಲ್ಲಾರಿಗೌಡರು ಒಂದು ಶಬ್ದವನ್ನು ಹೇಳಿದರು ಅದನ್ನು ಪುನಃ ಹೇಳುವುದರಲ್ಲಿ ಏನೂ ಅರ್ಥ ಇಲ್ಲ. ನಮ್ಮ ಬಿಜಾಪುರ ಜಿಲ್ಲೆಯ ಇತಿಹಾಸವು ಅಮೇರಿಕಾ ದೇಶದಲ್ಲಿಯೂ ಕೂಡಾ ಇದೆ. ಈ ಜಿಲ್ಲೆಯು ಶಾಶ್ವತವಾಗಿ ಬರಗಾಲ ಪ್ರದೇಶ ಎಂದು ಎಲ್ಲರೂ ಮನಗಂಡಿದ್ದಾರೆ. ಇಷ್ಟಿದ್ದೂ ಕೂಡಾ ೧೩ನೇ ಶತಮಾನದಿಂದಲೂ ಬರಗಾಲದ ತೀವ್ರ ಬವಣೆಯನ್ನು ಅನುಭವಿಸಿಕೊಂಡು ಬಂದಂತಹ ಜಿಲ್ಲೆ ಇದು. ಇನ್ನೂ ವಿಶಾದದಿಂದ ಹೇಳಬೇಕಾದುದು ಏನೆಂದರೆ ಮುಂಬೈಯ ರೆಡ್‌ಲೈಟ್ ಪ್ರದೇಶದಲ್ಲಿ ಇರುವಂತಹ ಜನ ನಮ್ಮ ಬಿಜಾಪುರ ಜಿಲ್ಲೆಯವರು, ಬೀದರ್ ಗುಲ್ಬರ್ಗ ಜಿಲ್ಲೆಯವರು ಆಗಿದ್ದಾರೆ. ಮತ್ತು ರಾಯಚೂರು ಜಿಲ್ಲೆಯಂತಹ ಬರಗಾಲ ಪೀಡಿತ ಪ್ರದೇಶದವರು ಆಗಿದ್ದಾರೆ. ನಮ್ಮ ಹಿಂದು ಸಂಸ್ಕೃತಿಯಲ್ಲಿ ಯಾರು ಇಂತಹ ಹೀನ ಕಾರ್ಯಕ್ಕೆ

ಇಳಿಯ ಬಯಸುವುದಿಲ್ಲ. ಆದರೆ ಹೊಟ್ಟೆ ಹಸಿವಿನಿಂದ ಕಂಗಾಲಾಗಿ ನಮ್ಮ ಅಕ್ಕತಂಗಿಯರು ಈ ವೃತ್ತಿಯನ್ನು ಅನಿವಾರ್ಯವಾಗಿ ಮಾಡಬೇಕಾಗಿದೆ. ಇದನ್ನು ತಾವುಗಳು ಲಕ್ಷದಲ್ಲಿಟ್ಟುಕೊಳ್ಳಬೇಕು. ಸರಕಾರದವರು ಈಗಲಾದರೂ ಕಣ್ಣು ತೆರೆದು ಈ ವಿಷಯದ ಬಗ್ಗೆ ಇನ್ನು ಮುಂದೆ ನಮ್ಮ ಅಕ್ಕತಂಗಿಯರು ಹೋಗದ ಹಾಗೆ ವಿಚಾರ ಮಾಡಬೇಕು. ಇಲ್ಲದಿದ್ದರೆ ಆ ಪಾಪಕ್ಕೆ ನಮ್ಮ ಅಕ್ಕತಂಗಿಯರು ಅನಿವಾರ್ಯವಾಗಿ ಹೋಗುತ್ತಾರೆ, ಅದರಲ್ಲಿ ನೀವು ಭಾಗಿಗಳಾದಂತೆ ಆಗುತ್ತದೆ, ನಾವೆಲ್ಲರೂ ಹೊಣೆಗಾರರಾದಂತಾಗುತ್ತದೆ. ನಮ್ಮ ಅರ್ಥ ಸಚಿವರಾಗಲಿ, ಲೋಕೋಪಯೋಗಿ ಸಚಿವರಾಗಲೀ, ಯಾರೇ ಆದರೂ ಈ ಪಾಪವನ್ನು ಹೊರಬಾರದು, ಹೊರಲಿಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ. ಮಾನ್ಯ ಸ್ನೇಹಿತರಾದಂತಹ ಮಲ್ಲಾರಿ ಗೌಡ ಪಾಟೀಲ್‌ರು ಬಿಜಾಪುರ ಜಿಲ್ಲೆಯ ಪ್ರದೇಶ ಹಾಗೂ ಬೆಳಗಾಂ ಸಮೀಪದ ಪ್ರದೇಶಗಳಿಗಿಂತಲೂ ನಮಗಿಂತಲೂ ಕುಗ್ರಾಮಗಳು ಮಹಾರಾಷ್ಟ್ರದಲ್ಲಿವೆ ಎಂದು ಹೇಳಿದರು ಅಲ್ಲಿನ ಅಭಿವೃದ್ಧಿ ಪರ ಕೆಲಸಕಾರ್ಯಗಳನ್ನು ನೋಡಬೇಕು, ಮಾನ್ಯ ಸಚಿವರು ತಮ್ಮ ಸಿಬ್ಬಂದಿಯೊಡನೆ ಅಲ್ಲಿಗೆ ಹೋಗಿ ನೋಡಿಕೊಂಡು ಬರಬೇಕು, ಮಾನ್ಯ ಸಚಿವರು ಅಲ್ಲಿಗೆ ಹೋಗಿ ಎಂಟು ದಿನ ಇದ್ದು ಅಭ್ಯಾಸ ಮಾಡಿಕೊಂಡು ಬಂದರೆ ನಮಗೆ ಸಮಾಧಾನ ಆಗುತ್ತದೆ. ಅಲ್ಲಿನ ಸುಧಾರಣೆ ಮೆಚ್ಚುವಂತಾದ್ದು. ಆ ಪ್ರದೇಶಗಳಿಗೆ ನಾವುಗಳು ಜೋಳವನ್ನು ಕಳುಹಿಸಿ ಕೊಡುತ್ತಿದ್ದೆವು. ಆದರೆ ಈಗ ಅದೇ ಪ್ರದೇಶಗಳಿಗೆ ಕೂಲಿಗಾಗಿ ನಮ್ಮ ಜನರು ಹೋಗ ಬೇಕಾಗಿ ಬಂದಿದೆ. ಆ ಕಾರಣದಿಂದಾಗಿ ಸದನದ ಸಮಿತಿಯನ್ನಾದರೂ ಮಾಡಲಿ. ಕಂದಾಯ ಸಚಿವರು, ಇನ್ನಿತರ ಸಚಿವರು ಕೂಡಿಕೊಂಡು ಹೋಗಿ ಎಂಟು ದಿವಸಗಳ ಮಟ್ಟಿಗೆ ಸೊಲ್ಲಾಪುರ ಜಿಲ್ಲೆ ಅಥವಾ ಇನ್ನಿತರ ಪ್ರದೇಶಗಳಿಗೆ ಭೇಟಿ ಕೊಟ್ಟು ಅಲ್ಲಿ ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಯಾವರೀತಿಯಲ್ಲಿ ಅಲ್ಲಿಯವರು ನಾಲಾ ಆಗಲಿ, ಬಂಡಿಂಗ್ ಆಗಲೀ, ಮಾಡಿದ್ದಾರೆ, ಬಾಂಡ್ ಕಟ್ಟಿದ್ದಾರೆ, ಪರ್‌ಕ್ಯುಲೇಶನ್ ಟ್ಯಾಂಕ್ಸ್ ಮಾಡಿದ್ದಾರೆ ಎಂಬುದನ್ನು ನೋಡಿಕೊಂಡು ಬರಬೇಕು. ನೀರಾವರಿಯನ್ನು ಹೆಚ್ಚಿಸುವುದಕ್ಕೆ ಯಾವರೀತಿಯಲ್ಲಿ ಪ್ರಯತ್ನವನ್ನು ಮಾಡಬೇಕು ಅದನ್ನು ಪ್ರಾಮಾಣಿಕವಾಗಿ ಮಾಡಬೇಕು. ಈಗ ನಮ್ಮ ಸರಕಾರದವರು ಏನು ಮಾಡುತ್ತಾರೆ ಅಂದರೆ ನಾವುಗಳು ಯಾರಾದರೂ ಹೋಗಿ ಮಾನ್ಯ ಬೊಮ್ಮಾಯಿಯವರ ಹತ್ತಿರ ಹೋಗಿ ವಾದ ಮಾಡಿದ ಕೂಡಲೇ ನಿಮ್ಮ ತಾಲೂಕಿಗೆ ಇಷ್ಟು ಹಣವನ್ನು ಮಂಜೂರು ಮಾಡಿದ್ದೇವೆ ಎಂದು ಹೇಳುತ್ತಾರೆ. ಒಂದೆರೆಡು ದಾರಿಗಳನ್ನು ಮಾಡುತ್ತಾರೆ. ಯಾರು ಯಾರಿಗೆ ಏನಾದರೂ ಆಗುತ್ತದೆ. ಇಷ್ಟಕ್ಕೆ ಮುಗಿಯುತ್ತದೆ. ಈ ತರಹ ನಮ್ಮಲ್ಲಿ ೯ ಳ೭ನೇ ಇಸವಿಯಿಂದ ನಡೆದುಕೊಂಡು ಬಂದಿದೆ, ದಯಮಾಡಿ ಇದನ್ನು ನಿಲ್ಲಿಸಬೇಕು. ಈ ತರಹದ್ದಕ್ಕೆಲ್ಲಾ ಹಣ ಖರ್ಚು ಮಾಡುವುದನ್ನು ನಿಲ್ಲಿಸಿ ನೀರಾವರಿಗಾಗಿ ನಾವು ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗಿದೆ, ಇದನ್ನು ಮಾಡಬೇಕೆಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯ ಏನೆಂದರೆ, ಆಫೀಸರ್ಸ್‌ಗಳಲ್ಲಿ ಜಿಲ್ಲಾಮಟ್ಟದಲ್ಲಿ ಕೋ-ಆರ್ಡಿನೇಶನ್ ಇಲ್ಲ. ಅದೇ ರೀತಿಯಲ್ಲಿ ಬೆಂಗಳೂರಿನಲ್ಲಿಯೂ ಇಲ್ಲ ಎಂದು ನನಗನ್ನಿಸುತ್ತದೆ. ನಾವು ಎಲ್ಲಾದರೂ ಒಂದು ದಾರಿ ಮಾಡಿ ಎಂದು ಇಲ್ಲಿ ಹೇಳಿದರೆ ಆಯಿತು ಎಂದು ಹೇಳುತ್ತಾರೆ. ನಮ್ಮ ತಾಲೂಕಿನಲ್ಲಿ ೧೭೦ ಹಳ್ಳಿಗಳಲ್ಲಿ ೬೫ ಪಂಚಾಯತಿಗಳು ಇವೆ. ಆದರೆ ಕೆಲಸ ಚಾಲೂ ಆದುದು ೧೫ ಹಳ್ಳಿಗಳಲ್ಲಿ ಮಾತ್ರ. ನಮಗೆ ಇದು ಬೇಡ. ನಮಗೆ ಕಾಲುವೆಯ ಒಂದು ಕೆಲಸವನ್ನು ಕೊಟ್ಟರೆ ನಮ್ಮ ಜನರನ್ನು ಕರೆದುಕೊಂಡು ಒಂದು ಕೆಲಸ ಮಾಡಿಸಿಕೊಳ್ಳುತ್ತೇವೆ. ಇದರಿಂದ ಕನಿಷ್ಟ ನಮಗೆ ಪರಿಹಾರವೂ ದೊರೆತಂತಾಗುತ್ತದೆ. ನಮ್ಮ ಜನರ ಕಷ್ಟವೂ ಸ್ವಲ್ಪ ಮಟ್ಟಿಗೆ ದೂರವಾಗುತ್ತದೆ. ಆದರೆ ನಿಮ್ಮ ಅಧಿಕಾರಿಗಳು ಏನು ಹೇಳುತ್ತಾರೆ ಅಂದರೆ ನಮ್ಮ ಜನರು ಕೆಲಸ ಚಲೋ ಮಾಡುವುದಿಲ್ಲ ಎಂದು ಅವರ ಹೇಳಿಕೆ. ಹಾಗಾದರೆ ಇವರು ಅಮೇರಿಕೆ ಆಫ್ರಿಕ ದೇಶಗಳಿಂದ ಇಲ್ಲಿಗೆ ಕೆಲಸಕ್ಕಾಗಿ ಜನರನ್ನು ಕರೆಸಿಕೊಳ್ಳುತ್ತಿದ್ದಾರೆಯೇ ? ಎಂದು ನಾನು ಕೇಳುತ್ತಿದ್ದೇನೆ. ನಮ್ಮಲ್ಲಿ ಯಾವರನ್ನೇ ಕರೆಸಬೇಕಲ್ಲಾ ಇನ್ನಿತರ ಕೆಲಸಗಳು ಅಂದರೆ ಇಂಜೀನಿಯರ್ಸ್‌ಗಳನ್ನು ಬೇಕಾದರೆ ಡೆಪ್ಯುಟೇಶನ್ ಮಾಡಲಿ. ಅವರಿಂದ ಚೆನ್ನಾಗಿ ಕೆಲಸ ತೆಗೆದುಕೊಳ್ಳಲಿ. ಸ್ಥಳೀಯ ಜನರಿಂದ ಇತರ ಕೆಲಸಗಳನ್ನು ತೆಗೆದುಕೊಳ್ಳಬೇಕು, ಕೆಲಸವನ್ನು ಚೆನ್ನಾಗಿ ಮಾಡಿ ಎಂದು ಹೇಳಿ ಮಾಡಿಸಿಕೊಳ್ಳಬೇಕು. ಗಡಿಬಿಡಿಯಲ್ಲಿ ಸಾವಿರಾರು ಜನರು ಕೆಲಸ ಮಾಡುವಾಗ ಸ್ವಲ್ಪ ತೊಂದರೆಯಾಗಬಹುದು. ಇಂತಹವರಿಂದ ಕೆಲಸವನ್ನು ತೆಗೆದುಕೊಂಡರೆ ನಮ್ಮ ಜನರಿಗೂ ಕೆಲಸ ಕೊಟ್ಟ ಹಾಗೆ ಆಗುತ್ತದೆ. ಹಣದ ಸದುಪಯೋಗವೂ ಆಗುತ್ತದೆ. ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿ ಮಲಪ್ರಭಾ ಕಾಲುವೆ ಕೆಲಸ ಪ್ರಾರಂಭ ಮಾಡಬಹುದು. ಹುನುಗುಂದ ತಾಲ್ಲೂಕಿನ ರಾಮತಾಳದ ಕಾಲುವೆ ಚಾಲೂ ಮಾಡಬಹುದು. ಇಂಡಿ ಬ್ರಾಂಚ್ ಕ್ಯಾನಲ್ ಕೆಲಸ ಚಾಲೂ ಮಾಡಬಹುದು. ಆಲಮಟ್ಟಿಯಲ್ಲಿನ ಎಡ-ಬಲದಂಡೆ ಕೆಲಸ ಚಾಲೂ ಮಾಡಬಹುದು. ಇವುಗಳನ್ನು ಮಾಡುವುದರಿಂದ ಬಾಗಲಕೋಟೆ ಹಾಗೂ ಇನ್ನಿತರ ತಾಲ್ಲೂಕಿನ ಜನರಿಗೆ ಸಿಗುತ್ತದೆ.

ನಮಗೆ ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಬಂದರೆ ಬರುತ್ತದೆ, ಇಲ್ಲದಿದ್ದರೆ ಇಲ್ಲ. ನಮಗೆ ಸರಕಾರದವರು ಚಾಪೆ ಕೊಟ್ಟರೆ ಸಾಕು ನಮ್ಮ ಜನರು ಕೆಲಸಕ್ಕೆ ಬರುತ್ತಾರೆ. ಆದುದರಿಂದ ಬಿಲ್ಡಿಂಗ್ ಮುಂತಾದ ಎಲ್ಲಾ ಕೆಲಸಗಳನ್ನು ಬಂದು ಇಡಿರಿ, ಅವುಗಳನ್ನೆಲ್ಲಾ ಬಂದು ಇಟ್ಟು ನೀರಾವರಿ ಕೆಲಸ, ಕಾಲುವೆ ಕೆಲಸ ಚಾಲು ಮಾಡಲಿಕ್ಕೆ ಪ್ರಾರಂಭ ಮಾಡಿ ನಮ್ಮ ಜನರು ಎಲ್ಲಿ ಬೇಕೋ ಅಲ್ಲಿಗೆ ಹೋಗಲಿಕ್ಕೆ ಸಿದ್ಧರಿದ್ದಾರೆ. ವಿದೇಶಗಳಲ್ಲಿ ಯಂತ್ರಗಳು ಕೆಲಸ ಮಾಡುತ್ತವೆ, ಆದರೆ ನಮ್ಮಲ್ಲಿ ಜನರಿಗೇ ಕೆಲಸ ಇಲ್ಲದ ಪರಿಸ್ಥಿತಿ ಇದೆ. ಕುಡಿಯುವ ನೀರಿನ ವಿಷಯದಲ್ಲಿ ಮಾತ್ರ ನಮ್ಮ ಮಾನ್ಯ ನಜೀರ್ ಸಾಬ್ ರವರ ಪುಣ್ಯದಿಂದ ಹಳ್ಳಿಗಳಲ್ಲಿ ತೊಂದರೆ ಕಡಿಮೆಯಾಗಿದೆ. ಎಲ್ಲಿಯೋ ಕೆಲವಾರು ಪ್ರಾಬ್ಲಮ್ಯಾಟಿಕ್ ಹಳ್ಳಿಗಳಲ್ಲಿ, ಅಂದರೆ ಎಲ್ಲಿ ಬೋರ್‌ವೆಲ್‌ಗಳನ್ನು ಹಾಕುವುದು ತುಂಬಾ ಕಷ್ಟ, ಅನಾನುಕೂಲ ಎಂದು ಕಂಡು ಬರುತ್ತದೆಯೋ ಅಲ್ಲಿ ವ್ಯವಸ್ಥೆ ಆಗಿಲ್ಲ. ಕೆಲವು ಕಡೆ ಲವಣಯುಕ್ತ ನೀರು ಬಂದರೆ, ಅಂತಹ ಕಡೆಗಳಿಗೆ ಲಾರಿಗಳ ಮೂಲಕ ನೀರನ್ನು ಕೊಟ್ಟು ಅನುಕೂಲ ಮಾಡಿಕೊಡಬಹುದು. ಆದರೆ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಗ್ಗೆ ನಜೀರ್‌ಸಾಬ್‌ರವರಿಗೆ ಕೇಳಿದರೆ, ಅವರು ಅದು ನನ್ನ ಖಾತೆಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಹಾಗೆಂದು ಮಾನ್ಯ ಲಕ್ಷ್ಮೀಸಾಗರ್‌ರವರನ್ನು ಕೇಳಿದರೆ ಅದೂ ಉಪಯೋಗವಿಲ್ಲ, ಯಾಕೆಂದರೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ತೊಂದರೆ ಸ್ವಲ್ಪ ಜಾಸ್ತಿಯಾಗಿ ಕಾಣುತ್ತದೆ. ಕುಡಿಯುವ ನೀರಿನ ವಿಷಯಕ್ಕೆ ಆದ್ಯತೆ ಕೊಟ್ಟು ಮಲಪ್ರಭಾ ನದಿಯಿಂದ ಇಲ್‌ಕಲ್, ರೀಜನಲ್ ವಾಟರ್ ಸಪ್ಲೈ ಸ್ಕೀಮ್‌ನ್ನು ತಯಾರು ಮಾಡಿದ್ದಾರೆ, ಈ ಎಲ್ಲಾ ಕಡೆಗಳಿಗೂ ಕುಡಿಯುವ ನೀರಿನ ಸಲುವಾಗಿ ಶಾಶ್ವತವಾಗಿ ಒಂದು ಪರಿಹಾರವನ್ನು ಮಾಡಿಕೊಡಬೇಕು. ಮಾನ್ಯ ದೇವೇಗೌಡರು ಬಂದಿದ್ದಾರೆ, ಮಾನ್ಯ ಬೊಮ್ಮಾಯಿಯವರು ಇದ್ದಾರೆ. ನಮ್ಮ ಪ್ರದೇಶಕ್ಕೆ ಬರಗಾಲದಪರಿಹಾರದ ಸಲುವಾಗಿ ನೀವೆಲ್ಲರೂ ಕುಳಿತುಕೊಂಡು ವಿಚಾರ ಮಾಡಿ ಎಲ್ಲಿಯಾದರೂ ಗಟಾರದ ಸಲುವಾಗಿ, ಚರಂಡಿಯ ಸಲುವಾಗಿ, ಕೋಟಿಗಟ್ಟಲೆ ಹಣವನ್ನು ಹಾಕುವುದರ ಬದಲಾಗಿ ನಮಗೆ ಮುಖ್ಯವಾಗಿ ಬೇಕಾದುದನ್ನು ಮಾಡಿಸಿಕೊಡಿ. ಈಗ ಕೋ-ಆರ್ಡಿನೇಶನ್ ಜಿಲ್ಲಾ ಮಟ್ಟದಲ್ಲಿಯೂ ಕಡಿಮೆ ಇದೆ. ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳು ಅದು ಬಂದಿಲ್ಲ, ಇದು ಬಂದಿಲ್ಲ ಎಂದು ಹೇಳುತ್ತಾರೆ. ನಮ್ಮ ಭಾಗದ ವಿಷಯವನ್ನು ಮೊನ್ನೆ ಖರ್ಗೆ ಸಮಿತಿ ಬಂದಾಗಲೂ ವಿಷಾದ ಪಡಿಸಿದ್ದೇವೆ. ಈಗ ರೆವಿನ್ಯೂ ಮತ್ತು ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಕೋ-ಆರ್ಡಿನೇಶನ್ ಬರಬೇಕು. ಮಾನ್ಯ ದೇವೇಗೌಡರು ಇನ್ನಿತರ ಎಲ್ಲಾ ಕೆಲಸಗಳನ್ನು ಬಂದ್ ಮಾಡಿ ಕಾಲುದೆ ಕೆಲಸಗಳನ್ನು ಪ್ರಾರಂಭ ಮಾಡಬೇಕು. ಮಾನ್ಯ ಸಚಿವರುಗಳು ಸೂಕ್ತವಾದ ಕ್ರಮಗಳ ಬಗ್ಗೆ ಸರ್ವೆ ಮಾಡಿಸಿ ಕೂಡಲೇ ಯಾವ ಯೊಂದರೆಯೂ ಬರದಂತೆ ನಮ್ಮ ಭಾಗಗಳಲ್ಲಿ ಕಾಲುವೆ ಕೆಲಸವನ್ನು ತ್ವರಿತವಾಗಿ ಪ್ರಾರಂಭ ಮಾಡಿಸಬೇಕು. ಆಡಳಿತ ಯಂತ್ರವು ಕೈಯಲ್ಲಿ ಇರುವಾಗ ಯಾವ ಅಡಚಣೆಯೂ ಬರಲಾರದು. ಆಡಳಿತ ಯಂತ್ರ ಅವರ ಕೈಯಲ್ಲಿ ಇದೆ ಯಾವ ರೀತಿಯಲ್ಲಿ ಬೇಕಾದರೂ ಡೈವರ್ಟ್ ಮಾಡಬಹುದು. ಈಗಾಗಲೇ ಸುಮಾರು ಎರಡು ವರ್ಷಗಳಿಂದ ಸತತವಾಗಿ ಬರಗಾಲ ಬರುತ್ತಿದೆ. ಈ ಬರಗಾಲ ಪರಿಸ್ಥಿತಿಯನ್ನು ಶಾಶ್ವತವಾಗಿ ಪರಿಹಾರ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕಾಗುತ್ತದೆ. ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ದೇವೇಗೌಡರು ತಪ್ಪು ತಿಳಿದುಕೊಳ್ಳದಿದ್ದರೆ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಪಕ್ಕದ ರಾಜ್ಯವಾದ ಮಹಾರಾಷ್ಟ್ರದ ಗಡಿ ಭಾಗಗಳಾದ ಸೊಲ್ಲಾಪುರ ಒಂದು ಜಿಲ್ಲೆಗೆ ಮಾನ್ಯ ಕಂದಾಯ ಸಚಿವರು ಹಾಗೂ ಲೋಕೋಪಯೋಗಿ ಸಚಿವರು, ಕಂದಾಯ ಇಲಾಖೆಯ ಅಧಿಕಾರಿಗಳು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಇವರೆಲ್ಲರನ್ನು ಕರೆದುಕೊಂಡು ಹೋಗಿ ಅಲ್ಲಿನ ಸ್ಥಿತಿಯನ್ನು ನೋಡಿಕೊಂಡು ಬರಬೇಕು. ಅಲ್ಲಿ ಅವರು ಹಿಂದೆ ನಮಗಿಂತ ನಿಕೃಷ್ಟವಾದ ಪರಿಸ್ಥಿತಿಯಲ್ಲಿದ್ದರು. ಆದರೆ ಈಗ ಅವರು ಚೆನ್ನಾಗಿ ಇದ್ದಾರೆ. ಅವರಿಗೆ ಸತತವಾಗಿ ಬರುತ್ತಿದ್ದ ಬರಗಾಲ ಪರಿಸ್ಥಿತಿಯನ್ನು ನಿವಾರಣೆ ಮಾಡಿಕೊಂಡು ಸುಖದಿಂದ ಜೀವನವನ್ನು ನಡೆಸುತ್ತಿದ್ದಾರೆ. ಅಧ್ಯಕ್ಷರೇ ತಾವು ಸಹ ಹೋಗಿ ನೋಡಿಕೊಂಡು ಬನ್ನಿ ಬೇಕಾದರೆ, ನಮ್ಮಲ್ಲಿ ಹೊಳೆಗಳು ಇವೆ, ಅಲ್ಲಿ ಸರ್ಕಾರದವರು ಬಾಂಡ್‌ಗಳನ್ನು ಕಟ್ಟಿಸಿ ಕೊಡಬೇಕು. ಇಲ್ಲಿ ಸುಮಾರು ನಾಲ್ಕು ನದಿಗಳು ಸಹ ಇವೆ. ಈ ರೀತಿಯ ಬಾಂಡ್‌ಗಳನ್ನು ಕಟ್ಟಿಸಿಕೊಟ್ಟರೆ ಲಿಫ್ಟ್ ಇರಿಗೇಷನ್ ಮಾಡಿಕೊಳ್ಳುವುದಕ್ಕೆ ರೈತರಿಗೆ ಅನುಕೂಲವಾಗುತ್ತದೆ. ೧೦ ಎಕರೆಗಳು ಇರುವಂತಹ ರೈತರು ಒಂದೆರಡು ಮೂರು ಎಕರೆಗಳನ್ನಾದರೂ ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಬರುತ್ತದೆ. ಈ ಯೋಜನೆಯನ್ನು ಮಾಡಿ ಎಂದು ನಾವು ಕೇಳಿದರೆ ಅಲ್ಲಿನ ಡಿಸ್ಟ್ರಿಕ್ಟ್ ಅಧಿಕಾರಿಗಳು ಈ ಎಸ್ಟಿಮೇಟ್ ಚೀಫ್ ಇಂಜಿನಿಯರ್ ಹತ್ತಿರ ಹೋಗಬೇಕು ನಾವು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ, ಇಲ್ಲಿ ಬಂದು ನಾವು ಪ್ರಸ್ತಾಪ ಮಾಡಿದರೆ ಇವರು ಹಣವಿಲ್ಲವೆಂದು ಹೇಳುತ್ತಾರೆ. ನಾವು ಎಲ್ಲಿಗೆ ಹೋಗಬೇಕು. There is no

co-operation between Revenue and Public Works departments in taking up scarcity works that too in construction of bandres and big nalas. ಇಂತಹ ಬಾಂಡ್‌ಗಳನ್ನು ಕಟ್ಟಿಸಿಕೊಟ್ಟು ಮಾನ್ಯ ಸಚಿವರು ಆ ವಿರಿಯಾವನ್ನು ಗ್ರೀನ್ ಸಿಗ್ನಲ್ ಆಗಿ ಮಾಡುವಂತೆ ಅಧಿಕಾರಿಗಳಿಗೆ ಆದೇಶ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮೇವಿನ ಬಗ್ಗೆ ಪ್ರಸ್ತಾಪ ಮಾಡುವುದಾದರೆ...

ಅಧ್ಯಕ್ಷರು.—ಮಾನ್ಯ ಕಡಪಟ್ಟಿಯವರೇ ತಾವೇ ನೋಡಿ ತಾವು ಎಷ್ಟು ಸಮಯವನ್ನು ತೆಗೆದುಕೊಂಡಿದ್ದೀರಿ ಎಂದು. ನಾನು ತಕರಾರು ಮಾಡುವ ಪ್ರಶ್ನೆ ಇಲ್ಲ.

ಶ್ರೀ ಎಸ್.ಎಸ್. ಕಡಪಟ್ಟಿ.—ಮಾನ್ಯ ಅಧ್ಯಕ್ಷರೇ ಇನ್ನು ೫ ನಿಮಿಷದಲ್ಲಿ ನಾನು ಮುಗಿಸುತ್ತೇನೆ. ದಯಮಾಡಿ ನನಗೆ ಅವಕಾಶ ಮಾಡಿ ಕೊಡಿ. ತಾವು ಟೈಮ್‌ಗೆ ಬರ ತರಬೇಡಿ. ನಮ್ಮ ತಾಲ್ಲೂಕಿನಲ್ಲಿ ನಮ್ಮ ದನಗಳು ಜೋಳದ ಮೇವು ಬಿಟ್ಟು ನೆಲ್ಲು ಹುಲ್ಲು ತಿನ್ನುವುದಿಲ್ಲ. ೧೯೭೨–೭೩ರಲ್ಲಿ ನಮ್ಮ ಜಿಲ್ಲೆಗೆ ನೆಲ್ಲು ಹುಲ್ಲು ತಂದು ಜಿಲ್ಲಾಧಿಕಾರಿಗಳ ಕಛೇರಿಯ ಹಿಂದೆ ಹಾಕಿದ್ದರು. ಆ ನೆಲ್ಲು ಹುಲ್ಲು ಎಲ್ಲಾ ಪೂರ್ತಿಯಾಗಿ ಕೊಳೆತು ಹೋಯಿತು. ನಮ್ಮ ಕಡೆ ಈ ಮೇವನ್ನು ದನಗಳು ತಿನ್ನುವುದಿಲ್ಲ. ಇನ್ನು ನಮ್ಮ ತಾಲ್ಲೂಕಿನಲ್ಲಿ ಮೇವು ಕತ್ತರಿಸುವ ಮೆಷಿನ್ಸ್ ಇವೆ. ಮೊನ್ನೆ ಬರಗಾಲ ಪರಿಸ್ಥಿತಿ ಅಧ್ಯಯನ ಸಮಿತಿಯವರು ಬಂದಾಗ ಈ ಮೆಷಿನ್ ಮಾಲೀಕರು ಮೇವು ಇಟ್ಟಿದ್ದರು. ಈ ವಿಷಯವನ್ನು ನಾವು ಆಫೀಸರ್ಸ್ ಮೀಟಿಂಗ್‌ನಲ್ಲಿ ಹೇಳಿದಾಗ ಅವರಿಗೆ ಹೇಗೋ ವಿಷಯ ಗೊತ್ತಾಗಿ ಆ ಮೆಷಿನ್ ಮಾಲೀಕರು ಸುಮಾರು ೮೦೦–೧೦೦೦ ಟನ್ ಮೇವನ್ನು ಬಾರ್ಡರ್ ರಾಜ್ಯಕ್ಕೆ ಕಳುಹಿಸಿಕೊಟ್ಟು ಬಿಟ್ಟಿದ್ದಾರೆ. ಇದಕ್ಕೆ ಕಾರಣವೇನು? ಈ ಬಗ್ಗೆ ಅಧಿಕಾರಿಗಳು ವಿಚಾರಣೆ ಮಾಡಬೇಕು. ಮಾನ್ಯ ಗೃಹಸಚಿವರು ಸಹ ಇದನ್ನು ಚೆಕ್ ಮಾಡಿಸಬೇಕು. ಪೋಲೀಸಿನವರು ಇದನ್ನು ಪತ್ತೆ ಮಾಡುವಂತಾಗಬೇಕು. ಮತ್ತೆ ಸರ್ಕಾರದವರು ಕಡಿಮೆ ದರದಲ್ಲಿ ಮೇವನ್ನು ಖರೀದಿ ಮಾಡಿ ಸಣ್ಣ ಸಣ್ಣ ರೈತರಿಗೆ ಮತ್ತು ಮಧ್ಯಮ ವರ್ಗದ ರೈತರಿಗೆ ಹಂಚಬೇಕು. ಇದರ ಜೊತೆಗೆ ಸರ್ಕಾರ ಐ.ಆರ್.ಡಿ.ಪಿ. ಪ್ರೋಗ್ರಾಂನಲ್ಲಿ ಎಮ್ಮೆಯನ್ನು ಕೊಡುತ್ತೀರಿ. ಅಂತಹವರಿಗೆ ಸರ್ಕಾರದವರು ಪುಕ್ಕಟೆಯಾಗಿ ಮೇವು ಕೊಡುವುದನ್ನು ಬಂದ್ ಮಾಡಿಸಿದ್ದೀರಿ. ಅವರಿಗೂ ಸಹ ತಾವು ಮೇವು ಕೊಡುವಂತಹ ವ್ಯವಸ್ಥೆ ಮಾಡಬೇಕು. ಇನ್ನು ೮ ದಿವಸಗಳಲ್ಲಿ ತಾವು ಮೇವನ್ನು ಒದಗಿಸಿಕೊಡದಿದ್ದರೆ ನಮ್ಮ ದನಗಳು ಒಂದೂ ಉಳಿಯುವುದಿಲ್ಲ. ಈ ಬಗ್ಗೆ ಕಂದಾಯ ಸಚಿವರು ಮತ್ತು ಗೃಹ ಸಚಿವರು ಸೇರಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಆ ರೀತಿಯಾದರೆ ಮಾತ್ರ ಸಾಧ್ಯ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಮತ್ತು ಮಾನ್ಯ ಸಚಿವರಾದಂಥ ಶ್ರೀಮಾನ್ ದೇವೇಗೌಡರು ನಮ್ಮ ಜಿಲ್ಲೆಯಲ್ಲಿ ಬಾಂಡ್‌ಗಳನ್ನು ಕಟ್ಟಿಸಿಕೊಡುವುದಕ್ಕೆ ಅಧಿಕಾರಿಗಳಿಗೆ ಆದೇಶ ಕೊಡಬೇಕು. ಈ ಒಂದು ಕೆಲಸವನ್ನು ಮಾನ್ಯ ದೇವೇಗೌಡರು ಮಾಡಿದರೆ ಬಿಜಾಪುರ ಜಿಲ್ಲೆಯಲ್ಲಿ ಶಾಶ್ವತ ಪರಿಹಾರ ಮಾಡಲಿಕ್ಕೆ ಪ್ರಯತ್ನ ನಡೆದಿದೆ ಎಂದು ಆ ಭಾಗದ ಜನರ ಮನಸ್ಸಿನಲ್ಲಿ ಒಂದು ಭಾವನೆಯಾದರೂ ಬರುತ್ತದೆ. ಆ ಕೆಲಸವನ್ನು ಮಾಡಿಕೊಡಬೇಕೆಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI MOHAMMED BURANANUDDIN LIAQUIDDIN (Bidar).—Mr. Speaker Sir, the entire State is in the grip of severe drought. The dimension and the enormity of this drought condition prevailing in the State is evidenced that out of 19 districts, 16 districts are effected by it. The matter is very serious and grave and with the same seriousness they (government) have to apply their mind and apply the resources for removal of this natural calamity. The relief measures taken up by our State are no doubt sound and with all efforts the works on drought and scarcity have been started by the government and hon. Minister for Revenue. Yet I feel that the officers who are the

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

implementing agencies are not so serious as they should be. So, I specially request the hon. Minister for Revenue as well as the Minister for Public Works to have a strict vigilance and supervision over the work which is being executed by the officers for providing relief to the labourers and small farmers in the drought-affected areas. It is usually seen that these persons and some of the touts want to benefit themselves out of this misfortune. When the relief work is started and funds are made available usually there will be bureaucrats and persons who come as implementing agencies and they will swindle the amount with the collusion and conspiracy of the officials. So I request the government to take strict and straingent measures to check this sort of leakages while implementing relief measures in the entire State.

Sir, our area particularly Hyderabad-Karnataka *i.e.*, Raichur, Gulbarga, Bidar and adjacent district Bijapur are drought-prone. These districts since the last three years are under the grip of severe drought and this year the drought has got its own dimension. The entire work should be mobilised on war footing and there should not be any loophole in the implementation of the relief works. In the report submitted by my friend Mr. Mallikarjuna Kharge there is a mention that only taluk is affected in my district. While he had been to our district I had described the official version of the drought and according to that official verson only 18 villages are affected by the drought. As a matter of fact, this report given by the officials is not correct. I have disputed it and I have requested the Chairman of the Scarcity Relief Committee to collect the information independently and I have also requested him to tour many parts of our district. Anyhow he has admitted my plea and he has stated in his report that not only Basavakalyan taluk is affected, but Bidar and Humnabad taluks are also severely affected by drought.

Mr. Speaker Sir, I hereby submit that drought conditions in Bidar, Humnabad and Raichur are the same, there is no difference. The situation prevailing in Gulbarga and Raichur is also prevailing in my district. There is no difference, May be here and there, there were scattered rains during the mansoon season. But one cannot say there is no drought in Bidar district. Earlier in the report submitted by the State Government to the Central Government it is stated that in Bidar district there were scanty rains and it can also be seen that water table has gone down very much in Bidar district. But the report has given totally a different verison. I bring it to the notice of the House that the the verison given by the officials is not correct. I very much dispute it. I want that relief works taken up in

Gulbarga and Raichur districts should be extended to Bidar district also. At this Junture while meeting the reqirements of the unfortunate people of the area, I would like to point out that irrigation projects should be completed. Last year, the Karanja project was provided Rs. 5 crores, but this year even though there is acute drought the Government has provided only Rs 2 crorers in budget. It is an injustice to the people of Bidar district. If the work on the Karanja project is taken up more labourers could be engaged and at least 3 to 40000 labourers could be employed at this project alone. Similarly, in other projects where the work is not started there also funds have not been properly provided in the budget. I request that talking into consideration the preveling drought condition in Bidar district, allocation of funds to the Karanja project should be enhanced, atleast 10 to 12 crores should be provided. Another aspect of the Karanja project is, unless Rs. 4 crores are provided for payment of compensatin to the formers whose lands have been acquired, the project work can not be taken up. So Rs. 4 crore alone required for payment of compensation. What I have learnt that the notification under Section-4 of the Land Acqisition Act which has been issued for the purpose of Acqisition of lands which are coming under submergence, the notification under section-4 and subsquent sections 6 and 9 of this notification are going to be lapsled. If these notifications are lapsed then pay ments to farmers can not be made and the farmers will remain without compensation. On the other hand if the notifications are lapsed and fresh notifications are issued, then from the date of issue of the notification the value of the land will be taken into consideration. In this way the value of the land will be enhanced and the Government in this way will be losing nearly 4 to 5 crores of Rupees. So, I request the notifications which have already been issued and acquisition procedings have already been completed there the compesation should be paid and where acquisition proceeding have not been completed there it should be completed and compensation paid By payment of such compensation it will serve double purposes. At the one hand farmers will get compensation which will give a great relief to the farmers particularly during this drought period and on the other hand the Government will be relied of the payment of compensation and moreover there will be much savings. If the notifications are lapsed, the Government will incur a loss of more than Rs. 5 crores. In this way, compensation to the land oweners and farmers should be made available this year so that during this calamity they can better utilise the compensation amount for the purpose of their livelihood.

Apart from Karanja project, I would like to mention that similar conditions are prevailing in regard to Mullamari and

other projects in Bidar district. Two more lift Irrigation projects are also there. For lift irrigation no amount is earmarked in the budget. This lift irrigation projects are rendered usless for paucity of funds. I request that some more funds should be provided for these projects.

The water level in Bidar district has gone down very much There are nearly 17 to 18,000 irrigations wells. In all these wells the water-table has gone down. They have to be deepened further. I request the Government to provide loans from co-operative Banks or Nationalised Banks or other banks for deeping of the wells. Moreover, there is much silt in the wells which have not been deepened for several years. For de-silting also additinal funds should be provided. By this the farmers could get water for the purpose of irrigation of their lands, Allocation of funds to the minor irrigation projects is also very low in Bidar district. I request that in order to improve the water level, the minor irrigation projects should be taken up, particularly percolation tanks, anicuts should be constructed and the work is speeded up.

At this stage, I would like to mention that Bidar district is having very bad roads. If the regular amount is provided for constrtuction of reads much labourers can be engaged an this will be a relief to the people during this droughr period. Usually the public works department uses machines. By this more labourers cannot be employed. I request the hon. Ministor for public works to give special instructions to the official that in stated of using machines they should employ more labourers.

5-00 P. M.

Lastly, without taking much of the time of this August House, I would like to suggest that in our area, under NREP, Rs. 1 Kilo rice my be provided and this is not being done at present in our district. In addition to rice, Jawar and other food grains should also be provided to the labouers. small and marginal farmers. In order to see that they get these food grains in time, action should be taken to provide such food grains at the places of their respective works.

I thank the Chair for giving me an opportunity to speak a few words in this August House on the Scarcity Conditions and conclude.

ಶ್ರೀ ಜಿ. ಎಸ್. ಬಾಗಲಕೋಟೆ (ಜಮಖಂಡಿ).—ಮಾನ್ಯ ಅಧ್ಯಕ್ಷರೇ, ಕಳೆದ ಎರಡು ಮೂರು ವರ್ಷಗಳಿಂದ ಇಡೀ ರಾಜ್ಯಕ್ಕೆ ಬಂದಂತಹ ಭೀಕರ ಬರಗಾಲದ ಬಗ್ಗೆ ಇಲ್ಲಿಯವರೆಗೆ ಅನೇಕ

ಸಹೋದರರು ಮಾತನಾಡಿದ್ದಾರೆ. ಅವರಲ್ಲಿ ನಾನು ಬರಗಾಲದ ಪರಂಪರೆಗೆ ಸಿಕ್ಕಿದಂತಹ ಬಿಜಾಪುರ ದಿಂದ ಬಂದವನು. ಕಳೆದ ಅನೇಕ ವರ್ಷಗಳಿಂದ ಬರಗಾಲ ಬಿಜಾಪುರಕ್ಕೆ ಹೊಸದಲ್ಲ. ಸುಮಾರು ರಾಜ್ಯದಲ್ಲೇ ಅತಿ ದೊಡ್ಡ ಜಿಲ್ಲೆಯಾದ ಬಿಜಾಪುರದಲ್ಲಿ ೧೧ ತಾಲ್ಲೂಕುಗಳಿವೆ. ದುರಾದೃಷ್ಟವಶಾತ್ ಬರಗಾಲ ಇಲ್ಲೇ ನೆಲೆಯೂರಿದೆ.

ಅಧ್ಯಕ್ಷರು.—ಬರಗಾಲದ ವಿಷಯವು ಗಂಭೀರವಾದದ್ದರಿಂದ ನಾನು ಎಲ್ಲರಿಗೂ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—೫-೩ಂಕ್ಕೆ ಡಿಸ್ಕಷನ್ ಅನ್ನು ತಾವೆಲ್ಲ ಮುಗಿಸಿದರೆ ನಾನು ಅರ್ಧ ಗಂಟೆಯಲ್ಲಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಬಾಗಲಕೋಟೆಯವರೇ ತಾವು ೫ ನಿಮಿಷದಲ್ಲಿ ಮುಗಿಸಿಬಿಡಿ.

† ಶ್ರೀ ಜಿ. ಎಸ್. ಬಾಗಲಕೋಟೆ.—ಅಧ್ಯಕ್ಷರೇ, ಇಡೀ ರಾಜ್ಯದ ನೀರಾವರಿ ಪರ್ಸೆಂಟ್ ೨೦ ಇದ್ದರೆ ದುರಾದೃಷ್ಟವಶಾತ್ ಬಿಜಾಪುರದ್ದು ಕೇವಲ ಒಂದೂವರೆ ಪರ್ಸೆಂಟ್ ಇದೆ. ಅದೇ ಪ್ರಕಾರ ಸುಮಾರು ೯೪ ಪರ್ಸೆಂಟ್ ಹಣ ಬೇಸಾಯು ಇದ್ದರೆ ಕೇವಲ ೬ ಪರ್ಸೆಂಟ್ ನೀರಾವರಿ ಕ್ಷೇತ್ರ ಇದೆ. ಆದರೆ ಸುದೈವದಿಂದ ನಮ್ಮ ಜಿಲ್ಲೆಯಲ್ಲಿ ಐದು ನದಿಗಳು ಅಂದರೆ ಕೃಷ್ಣಾ, ಘಟಪ್ರಭಾ, ಮಲಪ್ರಭಾ ಭೀಮಾ ಮತ್ತು ದೋಣಿ ಹರಿಯುತ್ತಿದ್ದರೂ ಕೂಡ ಯಾವ ಪ್ರಯೋಜನವಾಗಿಲ್ಲ ಕಳೆದ ಒಂದೂವರೆ ವರ್ಷದಲ್ಲಿ ಕೇವಲ ೧.೫ ಇಂಚಿನಿಂದ ೨ ಇಂಚು ಮಳೆಯಾಗಿದೆ. ಈ ಜಿಲ್ಲೆಯು ಬರಗಾಲದ ವಿಚಾರದಲ್ಲಿ ಇದನ್ನು ಬರಗಾಲದ ಜಿಲ್ಲೆ ಎಂದು ಪ್ರಕಟಿಸಿ ಅನೇಕ ಕಡೆ ಪ್ರಯೋಜನ ಕೊಡಲಾಗಿದೆ. ಆದರೂ ಕೂಡ ಬರಗಾಲವನ್ನು ಕಂಡಾಗ ತಾವು ಕೊಟ್ಟರತಕ್ಕ ಪರಿಹಾರ ಯಾವರೀತಿಯಿಂದಲೂ ಸಾಲದಾಗಿದೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದಹಾಗೆ ಪ್ರತಿ ಭಾಗದಲ್ಲೂ ಎರಡು ಕೆಲಸಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಈ ಅಧಿವೇಶನ ಮುಗಿದ ನಂತರ ಆ ಜಿಲ್ಲೆಗೆ ಭೇಟಿ ಕೊಟ್ಟು ಅಲ್ಲಿನ ಸಮಸ್ಯೆ ಯನ್ನು ಅರಿತುಕೊಂಡು ಪರಿಹಾರ ಒದಗಿಸುವಂತಹ ಕೆಲಸವನ್ನು ಮಾಡಬೇಕು. ಅಲ್ಲಿನ ಬರಗಾಲದ ಚಿತ್ರಣವನ್ನು ಖರ್ಗೆಯವರು ವಿವರವಾಗಿ ಕೊಟ್ಟಿದ್ದಾರೆ. ಅಲ್ಲಿ ಡಿ.ಸಿ. ಮತ್ತು ಸ್ಪೆಷಲ್ ಡಿ.ಸಿ. ಗಳಿದ್ದರೂ ಅನಾನುಕೂಲ ಆಗಿರಬಹುದು. ಅಲ್ಲಿ ಕುಡಿಯುವ ನೀರಿನ ತೊಂದರೆ ೪೦ ಹಳ್ಳಿಗಳಲ್ಲಿ ಭೀಕರವಾಗಿದೆ. ನಮ್ಮ ತಾಲ್ಲೂಕು ಮತ್ತು ರಹಮತ್ಪುರ ಮುಂತಾದ ಕಡೆಗಳಲ್ಲಿ ಟ್ರಾಕ್ಟರಿನಲ್ಲಿ ನೀರು ತರುತ್ತಿದ್ದಾರೆಂದರೆ ನೀವೇ ಊಹಿಸಿಕೊಳ್ಳಿ. ನಮ್ಮ ತಾಲ್ಲೂಕಿನ ದೊಡ್ಡ ನಗರವಾದ ರಬಕವಿ, ಬನಹಟ್ಟಿಗಳಿಗೆ ಸರಿಯಾದ ನೀರಿನ ವ್ಯವಸ್ಥೆ ಇರದಿರುವುದರಿಂದ ಕಾಮಾಲೆ ರೋಗ ತಗುಲಿ ೫-೧೦ ಜನ ಸತ್ತಿದ್ದಾರೆ. ೨೦೦೦ ಜನರಿಗೆ ಈ ರೋಗ ಮುಟ್ಟಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಂಡು ಜನರು ಕಾಯಿಲೆಯಿಂದ ಬಲಿಯಾಗುವುದನ್ನು ತಪ್ಪಿಸಬೇಕು.

ಇನ್ನು ದನಗಳ ಮೇವು ಸಿಗುತ್ತಿಲ್ಲ, ಅದನ್ನು ಒದಗಿಸುವ ಕಾರ್ಯ ಹಾಕಿಕೊಳ್ಳಬೇಕು, ಮುಖ್ಯ ವಾದ ಸಮಸ್ಯೆ ಎಂದರೆ ಎರಡು ದೃಷ್ಟಿಯಿಂದ ಇದನ್ನು ನಾವು ಎದುರಿಸಬೇಕಾಗಿದೆ. ಹಾಗೆ ಮಾಡಿದರೆ ಮಾತ್ರ ಈ ಸಮಸ್ಯೆ ಸಂಪೂರ್ಣ ಪರಿಹಾರವಾಗುತ್ತದೆ. ಕಳೆದ ಅನೇಕ ಶತಮಾನಗಳಿಂದ ಈ ಬರಗಾಲಕ್ಕೆ ನಾವು ಸಿಕ್ಕಿದ್ದೇವೆ. ಈ ವರ್ಷ ನೂರಾರು ಕೋಟಿ ರೂ, ಗಳನ್ನು ಬರಗಾಲದ ಮೇಲೆ ಖರ್ಚು ಮಾಡು ತ್ತಿದ್ದೀರಿ. ಆದ್ದರಿಂದ ಬರಗಾಲದ ಬಗ್ಗೆ ಅಧ್ಯಯನ ಮಾಡಲು ಒಂದು ಸಮಿತಿ ನೇಮಿಸಿ. ಬರಗಾಲಕ್ಕೆ ಹೆಸರಾದಂಥ ಬಿಜಾಪುರದಲ್ಲಿ ಒಂದು ನೀಲಿನಕ್ಷೆಯನ್ನು ತಯಾರು ಮಾಡಿ ಶಾಶ್ವತವಾಗಿ ಪರಿಹಾರ ಮಾಡಲು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಯೋಚಿಸಿ, ಹಂತಹಂತವಾಗಿ ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಕೋರುತ್ತೇನೆ.

ಇನ್ನು ಅಪ್ಪರ್ ಕೃಷ್ಣಾ ಪ್ರೋಜೆಕ್ಟ್ ಮುಗಿಸಬೇಕಾದರೆ ಸುಮಾರು ೨ ಸಾವಿರ ಕೋಟಿ ಬೇಕಾಗುತ್ತದೆ. ದುರ್ದೈವದಿಂದ ನಮಗೆ ಸಿಗುತ್ತಿರುವುದು ಕೇವಲ ೪೦ ಕೋಟಿ ರೂ. ಮಾತ್ರ. ಇದೇ ರೀತಿ ಹಣ ಖರ್ಚು ಮಾಡುತ್ತಾ ಹೋದರೆ ಇನ್ನು ೫೦-೬೦ ವರ್ಷವಾದರೂ ಯೋಜನೆ ಮುಗಿಯುವುದಿಲ್ಲ. ಈಗ ತಾತ್ಕಾಲಿಕ ಪರಿಹಾರವೆಂದರೆ ತಾವು ಪ್ರತಿ ತಾಲ್ಲೂಕಿನಲ್ಲೂ ಎರಡು ಮೂರು ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳಬಹುದು. ಹಾಗೂ ಎರಡುಮೂರು ಭಂಡಾರಗಳನ್ನು ತೆಗೆದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೊಳ್ಳುವುದಾದರೆ ಇನ್ನು ಒಂದು ಒಂದೂವರೆ ವರ್ಷದಲ್ಲಿ ಒಂದು ಲಕ್ಷ ಬರಗಾಲದ ಜಮೀನನ್ನು ನೀರಾವರಿಗೆ ಒಳಪಡಿಸಲು ಸಾಧ್ಯವಾಗಬಹುದು. ಇದಕ್ಕೆ ತಗಲುವ ಖರ್ಚು ೨೦ ಕೋಟಿ. ಆದ್ದರಿಂದ ಇದನ್ನು ಮಾಡಿ.

ಮತ್ತೊಂದೇನೆಂದರೆ ಅಧಿಕಾರಿಗಳು ಸರಿಯಾಗಿ ಗಮನಹರಿಸುತ್ತಿಲ್ಲ. ಇದರಿಂದಾಗಿ ಯುಕೆಪಿ ಮುಗಿಯಲು ಇನ್ನು ೫೦–೬೦ ವರ್ಷ ಬೇಕಾಗುತ್ತದೆ. ಜಮಖಂಡಿಯಲ್ಲಿ ಏನಾದರೂ ನೀರಾವರಿ ಯೋಜನೆ ಮಾಡಬೇಕೆಂದರೆ ಅಧಿಕಾರಿಗಳು ಏನು ಹೇಳುತ್ತಾರೆಂದರೆ ಇದು ಯುಕೆಪಿಯಲ್ಲಿ ಬರುತ್ತದೆ, ಆದ್ದರಿಂದ ಇದನ್ನು ತೆಗೆದುಕೊಳ್ಳಲಾಗದೆನ್ನುತ್ತಾರೆ. ಅಂದರೆ ಅಲ್ಲಿಯವರೆಗೆ ನಾವು ಯಾವ ಸಣ್ಣ ನೀರಾವರಿಯನ್ನೂ ತೆಗೆದುಕೊಳ್ಳಬಾರದೇ ? ಈ ನೀರಾವರಿ ಬಗ್ಗೆ ಪಕ್ಕದ ಮಹಾರಾಷ್ಟ್ರದಲ್ಲಿ ೧೫ ಕಿಲೋಮೀಟರ್‌ಗೆ ಒಂದು ಭಂಡಾರಗಳನ್ನು ಕೊಟ್ಟಿದ್ದಾರೆ. ಹಾಗೂ ತಾಲ್ಲೂಕಿನಲ್ಲಿ ಒಂದೆರಡು ಲಿಫ್ಟ್ ಇರಿಗೇಷನ್ ಹಾಕಿಸಿದ್ದಾರೆ. ಇದರಿಂದ ಶಾಶ್ವತ ಬರಗಾಲ ಹೋಗಲಾಡಿಸಲು ಸಾಧ್ಯವಾಗಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಎಲ್ಲ ಸದಸ್ಯರು ಹಾಗೂ ಮಂತ್ರಿಗಳು ಏನು ಭಾವನೆ ಇರಿಸಿಕೊಂಡಿದ್ದಾರೆಂದರೆ ಮಲೆನಾಡಿನಲ್ಲಿ ಬರಗಾಲ ಬರುವುದಿಲ್ಲವೆಂದು. ಆದರೆ ನಮಗಂತೂ ಬರಗಾಲ ಇದೆ. ಇದರ ಬಗ್ಗೆ ನಾನು ಸ್ಪಷ್ಟ ಚಿತ್ರವನ್ನು ಸಭೆಯ ಮುಂದಿಡಬಯಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಕಾಡಿನ ನಾಶದಿಂದ ಪ್ರಕೃತಿ ಸಂಪತ್ತು ಕಡಿಮೆಯಾಗುತ್ತಿದೆ. ಮಲೆನಾಡಿನ ಜನಗಳೂ ಸಹ ಈ ಬರಗಾಲದ ದವಡೆಯ ಬುಡಕ್ಕೆ ಬಂದಿದ್ದಾರೆ. ಪ್ರಾಸ್ತಾವಿಕ ಭಾಷಣದಲ್ಲಿ ನಮ್ಮ ನಾಯಕರು ತೀರ್ಥಹಳ್ಳಿಯಲ್ಲೂ ಸಹ ಮಳೆ ಇಲ್ಲ ಎನ್ನುವುದನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಎಂತಹ ಸಂಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ ಎಂದರೆ, ನಾವು ಬಿತ್ತನೆ ಮಾಡುತ್ತೇವೆ, ಬಿತ್ತನೆ ಮಾಡಿ ಸುಮಾರು ೧೫ ದಿವಸಗಳ ಕಾಲ ಮಳೆಗಾಗಿ ಕಾಯುತ್ತೇವೆ. ಆ ಸಮಯದಲ್ಲಿ ಮಳೆ ಬರುವುದಿಲ್ಲ, ಬಿತ್ತನೆ ಮಾಡಿದ ಬೀಜಗಳು ನಾಶವಾಗುತ್ತವೆ. ಈ ರೀತಿಯಾಗಿ ಮಳೆ ಬಾರದೆ ಇದೊಂದು ರೀತಿಯ ದೊಡ್ಡ ನಷ್ಟವಾಗುತ್ತದೆ. ಮಲೆನಾಡಿನಲ್ಲಿ ಆಗಾಗ ಮಳೆ ಧಾರಾಕಾರವಾಗಿ ಸುರಿಯುತ್ತದೆ. ಈ ಸಮಯದಲ್ಲಿ ಬಿತ್ತನೆ ಮಾಡಿದರೆ, ಬೀಜಗಳು ಹೆಚ್ಚು ಮಳೆಯಿಂದಾಗಿ ಕೊಳೆತು ಹೋಗುತ್ತವೆ. ಆಗ ಈ ತರಹ ನಷ್ಟಕ್ಕೂ ಒಳಗಾಗುತ್ತೇವೆ ಒಂದುಕಡೆ ಅನಾವೃಷ್ಟಿಗೆ ಸಿಕ್ಕಿಹಾಕಿಕೊಳ್ಳುತ್ತೇವೆ, ಇನ್ನೊಂದು ಕಡೆ ಅತಿವೃಷ್ಟಿಗೆ ಸಿಕ್ಕಿಹಾಕಿಕೊಳ್ಳುತ್ತೇವೆ ಶೃಂಗೇರಿ, ತೀರ್ಥಹಳ್ಳಿ, ಹೊಸನಗರ ಈ ಪ್ರದೇಶದ ಜನಗಳು ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ಈ ರೀತಿಯಾಗಿ ಪ್ರಾಥಮಿಕ ಹಂತದಲ್ಲಿಯೇ ನಷ್ಟ ಅನುಭವಿಸುತ್ತೇವೆ. ಮತ್ತೆ ಕೊನೆಯ ಹಂತದಲ್ಲೂ ಲಾಭ ಸಿಗುವುದಿಲ್ಲ. ಧಾರಾಕಾರವಾಗಿ ಸುರಿಯುವ ಮಳೆಯಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ. ಇದರಿಂದ ಇಳುವರಿ ಕಡಿಮೆಯಾಗುತ್ತದೆ. ಬರಗಾಲ ಪ್ರದೇಶವನ್ನು ಯಾವ ದೃಷ್ಟಿಯಿಂದ ನೋಡುತ್ತೀರೋ, ಅದೇ ದೃಷ್ಟಿಯಿಂದ ಮಲೆನಾಡು ಪ್ರದೇಶವನ್ನೂ ಕಾಣಬೇಕು. ಇನ್ನು ರಸ್ತೆಗಳು, ಮೋರಿಗಳು, ಸೇತುವೆಗಳು ಇವೆಲ್ಲವೂ ಬಹಳಷ್ಟು ಹಳ್ಳಗಳಾಗಿರತಕ್ಕಂಥ ಸ್ಥಿತಿಯಲ್ಲಿವೆ. ರೋಡುಗಳಲ್ಲಿ ಗುಂಡಿಗಳು ಬೀಳುತ್ತಿವೆ, ಗಾಡಿಯಲ್ಲಿ ವಸ್ತುಗಳನ್ನು ಸಾಗಾಣಿಕೆ ಮಾಡಬೇಕಾಗಿದೆ. ಸರ್ಕಾರ ಇದಕ್ಕಾಗಿ ಹಾಕಿರತಕ್ಕ ದುಡ್ಡನ್ನು ಸರಿಯಾದ ರೀತಿಯಲ್ಲಿ ವೆಚ್ಚ ಮಾಡಿದರೆ ಒಳ್ಳೆಯದು. ಪ್ರತಿ ವರ್ಷವು ಮಳೆಗೆ ಸಿಕ್ಕಿ, ರಸ್ತೆಗಳು ನಾಶವಾಗುತ್ತಿವೆ. ಇದರ ಬಗ್ಗೆಯೂ ಸಹ ನಮ್ಮ ಸಚಿವರು ಗಮನಹರಿಸಬೇಕು. ಲೋಕೋಪಯೋಗಿ ಇಲಾಖೆಯಿಂದ ನಮಗೆ ಸಿಗತಕ್ಕ ಎಲ್ಲಾ ಸೌಲಭ್ಯಗಳನ್ನೂ ಆದಷ್ಟು ಜಾಗ್ರತೆ ಕೊಡಬೇಕು. ಬರಗಾಲದ ಪ್ರದೇಶದ ಜನಗಳನ್ನು ಯಾವರೀತಿ ನೋಡುತ್ತೀರೋ, ಅದೇರೀತಿ ಮಲೆನಾಡು ಪ್ರದೇಶಗಳ ಜನರನ್ನೂ ನೋಡಬೇಕು. ಇವರೂ ಕೂಡ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ಪ್ರಾಥಮಿಕ ಹಂತದಲ್ಲಿ ಅನಾವೃಷ್ಟಿಯಿಂದ, ನಂತರ ಕೊನೆಯಲ್ಲಿ ಅತಿವೃಷ್ಟಿಯಿಂದ, ಹೀಗೆ ಎರಡು ಹಂತಗಳಲ್ಲೂ ಸಿಕ್ಕಿಹಾಕಿಕೊಳ್ಳುತ್ತಾರೆ. ಶೃಂಗೇರಿ, ಹೊಸನಗರ, ತೀರ್ಥಹಳ್ಳಿ ಈ ಪ್ರದೇಶದ ಜನಗಳು ಸಂಪೂರ್ಣವಾಗಿ ಬರಗಾಲಕ್ಕೆ ಈಡಾಗಿದ್ದಾರೆ. ಮಾನ್ಯ ಬಂಗಾರಪ್ಪನವರೂ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಈ ಭಾಗಕ್ಕೆ ಹೆಚ್ಚಿನ ಹಣವನ್ನು ಕೊಡುವ ಬಗ್ಗೆ ನಮ್ಮ ಸಚಿವರು ಗಮನ ಕೊಡಬೇಕು. ಮಾನ್ಯ ಸಚಿವರು ನಮ್ಮ ಕಳಕಳಿಯನ್ನು ಅರ್ಥಮಾಡಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ನಮ್ಮ ರೈತರೂ ಸಹ ತೊಂದರೆಯಲ್ಲಿದ್ದಾರೆ, ಮಾನವೀಯತೆ…

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಯಿಂದ ನೋಡುತ್ತಾರೆಂದು ತಿಳಿದುಕೊಂಡು, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಮುನಿಯಪ್ಪ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆ ಯವರ ನೇತೃತ್ವದಲ್ಲಿ ಸದನದ ಸಮಿತಿಯು, ಇಡೀ ರಾಜ್ಯದಲ್ಲಿ ಸಂಚಾರ ಮಾಡಿ, ಬರಗಾಲದ ಪ್ರದೇಶಗಳನ್ನು ಕಣ್ಣಾರೆ ಕಂಡು, ವರದಿಯನ್ನು ತಯಾರಿಸಿ ಸದನದ ಮುಂದೆ ಇಟ್ಟಿದ್ದಾರೆ. ವರದಿ ಯಲ್ಲಿ ಕೂಲಂಕುಷವಾಗಿ ಅವರು ಬರಗಾಲದ ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಮೊಟ್ಟಮೊದಲನೆಯದಾಗಿ ಸಲ್ಲಿಸುತ್ತೇನೆ. ಇಡೀ ರಾಜ್ಯ ಇವತ್ತು ಒಂದು ಭೀಕರ ಬರಗಾಲಕ್ಕೆ ಸಿಕ್ಕಿದೆ. ದನಕರುಗಳಿಗೆ ಮೇವು ಇಲ್ಲ. ನೀರು ಇಲ್ಲ ನಮ್ಮ ಕೋಲಾರ ಜಿಲ್ಲೆಗೆ ಬರುವುದಾದರೆ, ಕೋಲಾರ ಜಿಲ್ಲೆಯಲ್ಲಿ ಹೇಳಿಕೊಳ್ಳುವಂತಹ ಯಾವುದೇ ಒಂದು ನದಿ ಮೂಲಗಳು ಇಲ್ಲ, ಕಾಲುವೆಗಳೂ ಇಲ್ಲ ದೊಡ್ಡ ದೊಡ್ಡ ಕೆರೆಕುಂಟೆಗಳು ಇಲ್ಲ. ಕೋಲಾರ ಜಿಲ್ಲೆ ಎಂದರೆ ಬರಗಾಲ, ಬರಗಾಲ ಎಂದರೆ ಕೋಲಾರ ಜಿಲ್ಲೆ ಎನ್ನುವಂತಾಗಿದೆ. ಇದು ಬರಗಾಲಕ್ಕೆ ಪ್ರಖ್ಯಾತಿಯಾಗಿದೆ. ಈ ಕೋಲಾರ ಜಿಲ್ಲೆಗೆ ಬರಗಾಲ ಪ್ರತಿ ವರ್ಷವೂ ಬರುತ್ತಾ ಇದ್ದರೂ ಕೂಡ, ಇಲ್ಲಿ ಯಾವುದೇ ಒಂದು ಶಾಶ್ವತವಾದ ಕ್ಷಾಮ ಪರಿಹಾರ ಯೋಜನೆಗಳನ್ನು ಸರ್ಕಾರ ಕೈಗೊಂಡಿಲ್ಲ. ಈ ಒಂದು ಸಮಿತಿ ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಮಾಡಿ, ಗೌರಿಬಿದನೂರು, ಗುಡಿಬಂಡೆ ಮತ್ತು ಬಾಗೇಪಲ್ಲಿ ಈ ಪ್ರದೇಶಗಳಲ್ಲಿ ಪ್ರವಾಸ ಮಾಡಿದಾಗ, ಸರ್ಕಾರ ಒಂದುಕೋಟಿ ತೊಂಬತ್ತೈದು ಲಕ್ಷ ರೂಗಳಹಣವನ್ನು ಬಿಡುಗಡೆ ಮಾಡಿತ್ತು. ಇದರಲ್ಲಿ ಒಂದು ಕೋಟಿ ೧೦ ಲಕ್ಷ ಮಾತ್ರ ನಮ್ಮ ಕೈಗೆ ಬಂದಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸುತ್ತಾರೆ, ಇದನ್ನು ನೋಡಿದಾಗ ಭೀಕರ ಬರಗಾಲ ಇದ್ದರೂ ಕೂಡ, ಹೆಚ್ಚಿನ ಹಣ ಬಿಡುಗಡೆ ಮಾಡದೇ ಇರುವುದು ವಿಷಾದಕರವೆಂದು ಭಾವಿಸುತ್ತೇನೆ. ಇದೇರೀತಿ ಇವತ್ತು ಕೋಲಾರ ಜಿಲ್ಲೆಯಲ್ಲಿ ಹೆಚ್ಚು ಜನ ಖುಷ್ಕಿ ಬೇಸಾಯವನ್ನು ಹಮ್ಮಿಕೊಂಡಿದ್ದಾರೆ. ನೀರಾವರಿ ಬಾವಿಗಳು ಹೆಚ್ಚಿಗೆ ಇದ್ದರೂ ಕೂಡ ಅವುಗಳಲ್ಲಿ ನೀರು ಇಲ್ಲ. ಕುಡಿಯುವುದಕ್ಕೆ ನೀರು ಇಲ್ಲ. ದನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಈ ಭಾಗದಲ್ಲಿ ಅನೇಕ ಜನರು, ದನಗಳನ್ನು ಕಟುಕರಿಗೆ ಮಾರುತ್ತಿದ್ದಾರೆ. ಇಂತಹ ಒಂದು ಪ್ರಸಂಗ ಇದೆ. ಬಾಗೇಪಲ್ಲಿ ಜನಕ್ಕೆ ಕೂಲಿಯೂ ಸಿಗದೆ ವಲಸೆ ಹೋಗತಕ್ಕಂಥ ಪರಿಸ್ಥಿತಿ ಇದೆ. ಆದ್ದರಿಂದ ತಮ್ಮ ಮುಖಾಂತರ ನಾನು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ಬರಗಾಲ ಪೀಡಿತ ಕೋಲಾರ ಜಿಲ್ಲೆಗೆ ಹೆಚ್ಚಿನ ಹಣ ಒದಗಿಸಬೇಕು, ಹೆಚ್ಚಿನ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕು. ಇದರ ಬಗ್ಗೆ ಈಗಾಗಲೇ ನಮ್ಮ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಆ ಕಡೆ ಯವರೂ ಪ್ರಸ್ತಾಪ ಮಾಡಿದ್ದಾರೆ, ಈ ಕಡೆಯವರೂ ಪ್ರಸ್ತಾಪ ಮಾಡಿದ್ದಾರೆ, ಪರಿಹಾರ ಕಾಮ ಗಾರಿಗಳು ಎಂದರೆ, ಎಲ್ಲಿ ರಸ್ತೆ ಮಾಡಬೇಕೋ ಅಲ್ಲಿ ಇವತ್ತಿನವರೆಗೂ ರಸ್ತೆ ಮಾಡಿಲ್ಲ. ಅಧಿಕಾರಿಗಳು ಈ ರೀತಿ ಮಾಡುತ್ತಿದ್ದಾರೆ. ಅವರ ಮೇಲ್ಮಟ್ಟದ ಅಧಿಕಾರಿಗಳು, ಕೆಳಗಿನ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಒಂದು ಸಾರಿ ಮಾನ್ಯ ಭೈರೇಗೌಡರ ನೇತೃತ್ವದಲ್ಲಿ ಕೆಲವು ಶಾಸಕರು ಹೋದಾಗ, ಒಂದು ಕಡೆ ರಸ್ತೆಗೆ ಮಣ್ಣು ಹಾಕಿದ್ದರು, ಅದನ್ನು ಮಾನ್ಯ ಭೈರೇಗೌಡರೇ ಸ್ವತಃ ತೆಗೆಸಿ ನೋಡಿದರೆ, ಅಲ್ಲಿ ಮೊದಲು ಹೇಗಿತ್ತೋ ಹಾಗೆಯೇ ಇದೆ. ಯಾವುದೇ ಸರ್ಕಾರ ಇರಲಿ ಇಂತಹ ಕೆಲಸಗಳಿಗೆ ಅವಕಾಶ ಕೊಡಬಾರದು. ಅಧಿಕಾರಿಗಳು ತೀವ್ರವಾದ ಕಾರ್ಯಕ್ರಮ ಕೈಗೊಳ್ಳ ಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇನ್ನು ನಾಲ್ಕು ಲಕ್ಷ ರೂಪಾಯಿ ಗಳನ್ನು ದನಗಳ ಮೇವಿಗಾಗಿ ಒದಗಿಸಿದ್ದರೂ ಕೂಡ ೧೫ ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಇದು ಜಿಲ್ಲಾಧಿಕಾರಿಗಳ ಸಮಿಕ್ಷಾ ಸಭೆಯಲ್ಲಿ ಕಂಡುಬಂದಿದೆ. ಮೇವಿಗೆ ೪ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ, ಮೇವನ್ನು ತರಿಸದೇ, ಬೇಜವಾಬ್ದಾರಿ ತೋರಿಸಿರುವುದು ಕಂಡು ಬಂದಿದೆ. ಇಂತಹ ಅಧಿಕಾರಿಗಳಮೇಲೆ ಕಟ್ಟುನಿಟ್ಟಾದ ಕ್ರಮಕೈಗೊಳ್ಳಬೇಕೆಂದು ಹೇಳಿ ಈ ಸಂದರ್ಭದಲ್ಲಿ ತಮ್ಮಮುಖಾಂತರ ಮಾನ್ಯಸಚಿವರನ್ನು ಕೇಳಿಕೊಳ್ಳುತ್ತೇನೆ. ಇನ್ನು ಮೂರುಲಕ್ಷ ತೊಂಬತ್ತೊಂದು ಸಾವಿರದ ಐದುನೂರ ನಲವತ್ತೈದು ಜನ ರೈತರು ಬರಗಾಲಕ್ಕೆ ಸಿಕ್ಕಿದ್ದರೂ ೫,೫೮೨ ಜನ ಎಂದು ಕಮಿಟಿಯವರ ಗಮನಕ್ಕೆ ಬಂದಿದೆ. ಇಷ್ಟೊಂದು ಹೆಚ್ಚು ಜನ ಬರಗಾಲಕ್ಕೆಸಿಕ್ಕಿದರೂ ಕೂಡ ಇವರಿಗೆ ಉದ್ಯೋಗ ಒದಗಿಸುವುದಕ್ಕಾಗಿಲ್ಲ. ಹೆಚ್ಚಿನ ಹಣವನ್ನು ನಮ್ಮ ಜಿಲ್ಲೆಗೆ ಕೊಟ್ಟಿಲ್ಲ. ಹೆಚ್ಚಿನ ಹಣ ಕೊಡಬೇಕು, ಹೆಚ್ಚಾಗಿ ಉದ್ಯೋಗಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭ ದಲ್ಲಿ ಹೇಳುತ್ತೇನೆ. ವಿಶ್ವವಿಖ್ಯಾತ ಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯನವರು ಹುಟ್ಟಿದ್ದು ಕೋಲಾರಜಿಲ್ಲೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅದು ಬರಡು ಭೂಮಿಯಾಗಿದೆ, ಬೆಂಗಾಡು ಆಗಿದೆ. ಮಂಡ್ಯದಲ್ಲಿ ಮೈಸೂರಿನಲ್ಲಿ ವಿಶ್ವೇಶ್ವರಯ್ಯನವರನ್ನು ದೇವರೆಂದು ಪೂಜೆಮಾಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಹುಟ್ಟಿದ ವಿಶ್ವೇರಯ್ಯನವರು ನಮ್ಮ ಜಿಲ್ಲೆಗೆ ಏನನ್ನೂ ಮಾಡಲಿಲ್ಲ. ಅವರ ಹೆಸರಿನಲ್ಲಿ ಸರ್ಕಾರದವರು ಕೋಲಾರಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ. ಕೊನೆಯದಾಗಿ ಹೇಳುವುದಾದರೆ ಶಾಶ್ವತ ಕ್ಷಾಮ ಪರಿಹಾರ ಯೋಜನೆಯನ್ನು ಕೋಲಾರ ಜಿಲ್ಲೆಗೆ ರೂಪಿಸಬೇಕು. ಬಹಳ ಕಾಲದಿಂದ ನಾವು ಕೇಳುತ್ತಲೇ ಬಂದಿದ್ದೇವೆ, ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಆ ಸಮಯಕ್ಕೆ ಸ್ವಲ್ಪ ಹಣ ಖರ್ಚು ಮಾಡಿ, ಒಂದೆರಡು ಸಣ್ಣಪುಟ್ಟ ಕೆಲಸ ಮಾಡಿ ನಿಲ್ಲಿಸುತ್ತಾರೆ. ಆದುದರಿಂದ ಶಾಶ್ವತ ಪರಿಹಾರ ಯೋಜನೆಯನ್ನು ಕೈಗೊಳ್ಳಬೇಕೆಂದು ಹೇಳಿ, ಈ ಬರಗಾಲ ಪ್ರದೇಶ ನಿವಾರಣೆಗೆ ಹೆಚ್ಚು ಹಣವನ್ನು ಒದಗಿಸಬೇಕು. ಮತ್ತು ಒಳ್ಳೆಯ ಕೆಲಸಗಳನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತಾ, ಪ್ರಥಮತಃ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಲ್.ಜಿ. ರಾಮಕೃಷ್ಣ (ಕಮಲಾಪುರ).—ಮಾನ್ಯ ಅಧ್ಯಕ್ಷರೇ, ಈ ರಿಪೋರ್ಟನ್ನು ನೋಡಿದ ಮೇಲೆ ಈ ಸಲ ನಿಜವಾಗಿಯೂ ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಬರಗಾಲ ಇದೆ ಎನ್ನುವುದು ಎದ್ದು ಕಾಣುತ್ತದೆ. ಮೊದಲಿನಿಂದಲೂ ಕೂಡ ಹೈದ್ರಾಬಾದ್-ಕರ್ನಾಟಕ ಜಿಲ್ಲೆಯಲ್ಲಿ ಮಾತ್ರ ಸತತವಾಗಿ ಇತ್ತು. ಈ ಸಲ ಸಾಧಾರಣವಾಗಿ ಎಲ್ಲಾ ಜಿಲ್ಲೆಗಳಲ್ಲೂ ಬರಗಾಲ ಇರುವುದು ಈ ವರದಿಯಿಂದ ಕಂಡು ಬರುತ್ತಾ ಇದೆ. ರಾಜ್ಯದಲ್ಲಿ ಬರಗಾಲವನ್ನು ಎದುರಿಸುವುದು ಈ ಸಲ ಒಂದೇ ಅಲ್ಲ ಪ್ರತಿ ಸಲವು ಈ ರಾಜ್ಯದ ಜನರು ಬರಗಾಲಕ್ಕೆ ಸಿಕ್ಕಿಕೊಂಡು ಒದ್ದಾಡುತ್ತಿದ್ದಾರೆ. ಈ ಬರಗಾಲಕ್ಕೆ ತುತ್ತಾದಂಥ ಜನರಿಗೆ ತಾವು ಯಾವ ರೀತಿಯಾದ ಕೆಲಸಗಳನ್ನು ಕೊಡಬೇಕು, ಯಾವ ಕೆಲಸಗಳನ್ನು ತೆಗೆದುಕೊಂಡರೆ ಆ ಜನರಿಗೆ ಅನುಕೂಲವಾಗುತ್ತದೆ, ಈ ಭಾವನೆಯನ್ನಿಟ್ಟುಕೊಂಡು ಈ ಒಂದು ವರದಿಯನ್ನು ಕೊಟ್ಟಿದ್ದಾರೆ. ನನಗೆ ಅನಿಸುತ್ತದೆ ನಮ್ಮ ರಾಜ್ಯದಲ್ಲಿ ೧೫ ವರ್ಷದಿಂದಲೂ ಈ ಬರ ಬೀಳುತ್ತಲೇ ಇದೆ, ೧೫ ವರ್ಷದಿಂದಲೂ ತಾವು ಕೇಂದ್ರಕ್ಕೆ ಬರಗಾಲಕ್ಕೆ ಇಷ್ಟು ಕೋಟಿ ಬೇಕು ಎಂದು ಕೇಳಿ, ಆ ಜನಕ್ಕೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಅವರಿಂದ ಕೋಟಿಗಟ್ಟಲೆ ದುಡ್ಡನ್ನು ತರಿಸುತ್ತೀರಿ. ಈ ಬಗ್ಗೆ ಕೇಂದ್ರದಿಂದ ಏನು ದುಡ್ಡು ತರಿಸುತ್ತೀರಿ ಆ ದುಡ್ಡು ಬಂದಮೇಲೆ ತಾವು ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ಆ ಕಾರ್ಯಕ್ರಮಗಳಂತೆ ಆ ಕೆಲಸ ಆಗಿದೆಯೋ ಇಲ್ಲವೋ, ಆ ಜನರಿಗೆ ಅನುಕೂಲ ಆಗಿದೆಯೋ ಇಲ್ಲವೋ ಅದರ ಬಗ್ಗೆ ನನಗೆ ತಿಳಿದ ಹಾಗೆ ಸರಿಯಾಗಿ ಲಕ್ಷ್ಯ ಕೊಟ್ಟಿಲ್ಲ. ೫ ಕೋಟಿಯೋ, ೫೦ ಕೋಟಿಯೋ, ೬೦ ಕೋಟಿಯೋ ಕೇಂದ್ರದವರು ಇದಕ್ಕಾಗಿ ದುಡ್ಡು ಕೊಟ್ಟರೆ ಅದರಲ್ಲಿ ಎಷ್ಟು ಕೆಲಸವಾಗುತ್ತದೋ ಇಲ್ಲವೋ, ಜನಗಳು ಅದರಿಂದ ಪ್ರಯೋಜನ ಪಡೆಯುತ್ತಿದ್ದಾರೋ ಇಲ್ಲವೋ, ಎಷ್ಟು ಕೆಲಸ ನಡೆದಿದೆ ಇದನ್ನು ಯಾರೂ ಹೋಗಿ ನೋಡುವುದಿಲ್ಲ. ಏತಕ್ಕೆಂದರೆ ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿ ಪ್ರತಿಸಲ ಬರಗಾಲ ಬರುತ್ತಲೇ ಇದೆ, ಅಲ್ಲಿ ಪ್ರತಿಸಲವೂ ದೊಡ್ಡ ಪ್ರಮಾಣದಲ್ಲಿ ಕೆಲಸಗಳನ್ನು ಏನು ತೆಗೆದುಕೊಳ್ಳುತ್ತಾರೆ, ಅರಣ್ಯದ ಕೆಲಸ, ಟ್ರಾನ್ಸ್‌ಪೋರ್ಟ್ ಕೆಲಸ, ಬೋರ್‌ವೆಲ್ ಕೆಲಸ, ಬಾವಿಗಳನ್ನು ತೋಡುವುದು, ರೋಡ್ಸ್ ಮಾಡುವುದು, ಗೋಕಟ್ಟೆ ಕೆಲಸ ಇತ್ಯಾದಿ ಕೆಲಸಗಳನ್ನು ಏನು ತೆಗೆದುಕೊಳ್ಳುತ್ತಾರೆ ಇದರಿಂದ ಆ ಭಾಗದ ಜನಗಳಿಗೆ ಎಷ್ಟು ಅನುಕೂಲವಾಗಿದೆ ಎಂದು ಹೇಳುವುದಾದರೆ ನನಗೆ ಗೊತ್ತಿರುವ ಪ್ರಕಾರ ಇವರ ಒಂದು ಟಾರ್ಗೆಟ್ ಪ್ರಕಾರ ಆಗಿಲ್ಲ. ಇವರು ಇಂತಿಷ್ಟು ಹಣ ಎಂದು ಇಂತಿಂಥಾ ಕೆಲಸಗಳಿಗೆ ಎಂದು ಏನು ಕೊಡುತ್ತಾರೋ ಆ ದುಡ್ಡಿನಲ್ಲಿ ಇವರು ಸರಿಯಾಗಿ ಕೆಲಸವನ್ನೂ ಸಹ ಮಾಡಿರುವುದಿಲ್ಲ. ತಮಗೆ ಹೇಳಬೇಕಾದರೆ ನಮ್ಮ ಜಿಲ್ಲೆಯಲ್ಲಿ ಇವರು ಈ ಬರಗಾಲಕ್ಕಾಗಿ ಯಾವ ಕೆಲಸವನ್ನು ತೆಗೆದುಕೊಳ್ಳುತ್ತಾರೆ, ಆ ಕೆಲಸಗಳನ್ನು ಮುಂದಿನ ವರ್ಷ ಹೋಗಿ ನೋಡಿದರೆ, ಹಿಂದಿನ ವರ್ಷ ತೆಗೆದುಕೊಂಡಂಥಾ ಕೆಲಸಗಳು, ಮುಂದಿನ ವರ್ಷ ಆ ಕೆಲಸಗಳು ಉಳಿಯುವುದೇ ಇಲ್ಲ. ಇವರು ಖರ್ಚು ಮಾಡಿರುವುದರಲ್ಲಿ ಮುಂದಿನ ವರ್ಷ ನೋಡಿದರೆ ಅಲ್ಲಿ ಒಂದು ನಯಾಪೈಸೆ ಕೆಲಸ ಉಳಿದಿರುವುದಿಲ್ಲ. ಅಂದರೆ ಆ ಕೆಲಸಗಳನ್ನು ಅಷ್ಟು ಚೆನ್ನಾಗಿ ಮಾಡಿರುವುದಿಲ್ಲ. ಬರೇ ದುಡ್ಡು ಖರ್ಚಾಗುತ್ತದೇ ವಿನಾ ಕೆಲಸಗಳು ಏನೂ ಚೆನ್ನಾಗಿ ಮಾಡಿರುವುದಿಲ್ಲ. ಬರಗಾಲದಲ್ಲಿ ಸಿಕ್ಕಿಕೊಂಡಂಥಾ ಜನರು ಮಳೆ ಯಾವಾಗ ಬರುತ್ತದೋ ಎಂದು ಆಕಾಶ ನೋಡುತ್ತಿರುತ್ತಾರೆ. ಮೊದಲಿನ ಹಾಗೆ ಈವಾಗ ಮಳೆ ಬರುವುದಿಲ್ಲ ಎನ್ನುವುದು ಜನರಿಗೆ ಗೊತ್ತಿದೆ. ಆದುದರಿಂದ ಆ ಜನರು ಯಾವಾಗಲೂ ವಿಧಾನ ಸೌಧವನ್ನು ನೋಡುತ್ತಿರುತ್ತಾರೆ. ಸರ್ಕಾರ ನಮಗೆ ಏನು ಮಾಡುತ್ತದೆ, ನಮಗೆ ಯಾವ ರೀತಿಯಾದ ರಕ್ಷಣೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೊಡುತ್ತದೆ ಎನ್ನುವ ಭಾವನೆಯನ್ನು ಅವರು ಇಟ್ಟುಕೊಂಡಿದ್ದಾರೆ. ನಾನು ನೋಡಿದ ಹಾಗೆ ಕೆಲವು ಜನರು ಬರಗಾಲ ಬಂದರೆ ಒಳ್ಳೆಯ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಬೇಕು. ಅವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಭಾವನೆ ಇಟ್ಟುಕೊಂಡಿದ್ದರೆ ಇನ್ನು ಕೆಲವು ಜನರು ಮಾತ್ರ ನಮಗೆ ಬರಗಾಲ ಬರಬೇಕು ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದಾರೆ. ಕಾರಣ ಅವರಿಗೆ ಇದರಿಂದ ಏನಾದರೂ ಸಿಕ್ಕುತ್ತದೆ, ಅವರಿಗೆ ಈ ಬರಗಾಲ ಬರದೇ ಹೋದರೆ ಕಷ್ಟವಾಗುತ್ತದೆ. ಬರಗಾಲ ಬರಬೇಕು ಅನ್ನತಕ್ಕಂಥ ಜನರೂ ಇದ್ದಾರೆ. ಏತಕ್ಕೆಂದರೆ ಈ ಕೆಲಸ ಪ್ರತಿಫಲ ಏನು ತೆಗೆದುಕೊಳ್ಳುತ್ತಾರೆ ಇದಕ್ಕೆ ದುಡ್ಡು ಖರ್ಚು ಆಗುತ್ತದೇ ವಿನಃ ನಿಜವಾಗಿಯೂ ಯಾರು ಈ ಒಂದು ಬರಗಾಲಕ್ಕೆ ತುತ್ತಾಗಿದ್ದಾರೆ ಅವರಿಗೆ ಸರಿಯಾಗಿ ಮುಟ್ಟುವುದಿಲ್ಲ. ತಮಗೆ ಹೇಳಬೇಕಾದರೆ ನಮ್ಮ ಹೈದ್ರಾಬಾದ್-ಕರ್ನಾಟಕದ ಗುಲ್ಬರ್ಗ ಜಿಲ್ಲೆಯಲ್ಲಿ ಪ್ರತಿವರ್ಷವೂ ಆ ಭಾಗದ ಜನರು ಈ ಬರಗಾಲಕ್ಕೆ ತುತ್ತಾಗುತ್ತಿದ್ದಾರೆ. ಆ ಭಾಗದಲ್ಲಿ ಇವರು ಏನೇನು ಕೆಲಸ ತೆಗೆದುಕೊಳ್ಳುತ್ತಾರೆ ಉದಾಹರಣೆಗೆ ಬೋರ್‌ವೆಲ್ಸ್ ಕೆಲಸ ಮಾಡಿದರೆ ಅಲ್ಲಿ ನೀರೇ ಬರುವುದಿಲ್ಲ, ಎಷ್ಟೋ ಬೋರ್‌ವೆಲ್ಸ್‌ಗಳಲ್ಲಿ ನೀರು ಬರದೇ ಫೇಲ್ ಆಗಿದೆ. ಇದಲ್ಲದೆ ಇದಕ್ಕೆ ಸಂಬಂಧಪಟ್ಟ ಇಂಜಿನೀಯರ್‌ರವರು ಇದು ೩೦೦-೪೦೦ ಅಡಿ ಆಳವಾಗಿ ತೆಗೆಯಬೇಕು ಎಂದು ಹೋದರೆ ಅವರು ಅಷ್ಟೇ ತೆಗೆಯಬೇಕು, ಜಾಸ್ತಿ ತೆಗೆಯುವ ಹಾಗಿಲ್ಲ. ಹಾಗೆ ಮಾಡದೇ ಇರುವುದರಿಂದ ಎಷ್ಟೋ ಬೋರ್‌ವೆಲ್ಸ್ ಫೈಲ್ಯೂರ್ ಆಗಿದೆ. ಸಾಮಾನ್ಯವಾಗಿ ೭೫ ಪರ್ಸೆಂಟ್‌ಗಿಂತ ಹೆಚ್ಚಾಗಿ ಫೇಲ್ಯೂರ್ ಆಗಿದೆ. ಇದನ್ನು ಚೆಕ್ ಮಾಡಬೇಕು. ಯಾರೂ ಚೆಕ್ ಮಾಡುವುದಿಲ್ಲ. ತಮಗೆ ಹೇಳಬೇಕಾದರೆ ನಮ್ಮ ಜಿಲ್ಲೆಯಲ್ಲಿ ೪೬೭೭ ಬೋರ್‌ವೆಲ್ಸ್ ತೆಗೆದಿದ್ದಾರೆ. ಅದರಲ್ಲಿ ಎಷ್ಟು ಸರಿಯಾಗಿ ಕೆಲಸ ಮಾಡುತ್ತಿವೆಯೋ ಇಲ್ಲವೋ ಎನ್ನುವುದು ಗೊತ್ತಿಲ್ಲ. ಒಟ್ಟು ೪೬೭೭ ಬೋರ್‌ವೆಲ್ಸ್ ಕೊಟ್ಟಿದ್ದರೆ ಒಂದೊಂದು ತಾಲ್ಲೂಕಿಗೆ ೪೬೬ ಬೋರ್‌ವೆಲ್ಸ್ ಕೊಟ್ಟ ಹಾಗಾಯಿತು. ಇನ್ನೂ ಹೆಚ್ಚು ಬೋರ್‌ವೆಲ್ಸ್ ಬೇಕು ಎಂದರೆ ಎಕ್ಸಿಕ್ಯೂಟೀವ್ ಇಂಜಿನೀಯರ್ ಪಿ.ಹೆಚ್.ಇ. ಡಿವಿಷನ್‌ನವರು ಇದಕ್ಕೆ ಒಪ್ಪಿಗೆ ಕೊಡಬೇಕು. ನಾವು ಕಮಿಟಿ ಸದಸ್ಯರು ಅಲ್ಲಿ ಪ್ರವಾಸಕ್ಕೆ ಹೋದಾಗ ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಅದನ್ನು ತಮ್ಮ ಮುಂದೆ ಓದುತ್ತೇನೆ. ಅದು ಈ ರೀತಿ ಇದೆ:

> ''While reviewing the scarcity conditions of P.H.E. Department, the Exequtive Engineer Sri Sambrani had informed that he has received instructions from the higher authorities to stop drilling of new borewells under scarcity schemes''.

ಈ ಸ್ಕೀಂ ಪ್ರಕಾರ ಅವರು ಬೋರ್‌ವೆಲ್ ತೆಗೆದಿದ್ದಾರೆ, ಅಲ್ಲಿ ನೀರು ಬಂದಿಲ್ಲ. ಸರ್ಕಾರದ ಆರ್ಡರ್ ಈ ರೀತಿ ಬಂದಿದೆ ಎಂದು ಹೇಳಿದರು. ಅಲ್ಲಿ ಯಾವುದಾದರೂ ಬಾವಿ ತೆಗೆಯಬೇಕಾದರೆ ಚೀಫ್ ಇಂಜಿನಿಯರ್‌ರವರಿಂದ ಆರ್ಡರ್ ಬಂದರೆ ಮಾತ್ರ ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಇಲ್ಲ. ಇದು ಬಹಳ ಖೇದವನ್ನುಂಟು ಮಾಡುತ್ತದೆ, ಆದುದರಿಂದ ನಾನು ಹೇಳುವುದೇನೆಂದರೆ ಈ ಚೀಫ್ ಇಂಜಿನೀಯರ್‌ಗೆ ಬದಲಾಗಿ ಈ ಒಂದು ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟರೆ ಸ್ಕೇರ್ಸಿಟಿ ಭಾಗದಲ್ಲಿರುವ ಜನರಿಗೆ ಬಹಳ ಅನುಕೂಲವಾಗುತ್ತದೆ. ಚೀಫ್ ಇಂಜಿನಿಯರ್‌ರವರಿಂದ ಆರ್ಡರ್ ಬರುವಷ್ಟು ಹೊತ್ತಿಗೆ ಆ ಜನ ಸತ್ತು ಹೋಗುತ್ತಾರೆ. ಅದಕ್ಕೋಸ್ಕರವಾಗಿ ಈ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಕೊಡಬೇಕೆಂದು ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ. ಇದರಿಂದ ಜನಗಳಿಗೂ ಅನುಕೂಲವಾಗುತ್ತದೆ, ಈ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಯವರಿಗೆ ಒಪ್ಪಿಸಬೇಕು. ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸ್ಕೇರ್ಸಿಟಿ ರಿಲೀಫ್ ವರ್ಕ್ಸ್‌ನಲ್ಲಿ ಮೈನರ್ ಇರ್ರಿಗೇಷನ್ ಕೆಲಸ ಪರ್ಕುಲೇಷನ್ ಟ್ಯಾಂಕ್ ಕೆಲಸ ಇವೆಲ್ಲಾ ಮಾಡಿದರೆ ಒಳ್ಳೆಯದು.

ಇನ್ನು ದನಗಳ ಮೇವಿನ ಬಗ್ಗೆ ಹೇಳುವುದಾದರೆ ನಮ್ಮ ಸ್ಕೇರ್ಸಿಟಿ ಏರಿಯಾಕ್ಕೆ ೫ ಲಾರಿ ಮೇವನ್ನು ತರಿಸಿದರು. ಅವರು ಎಲ್ಲಾ ತಾಲ್ಲೂಕುಗಳಿಗೂ ಜಿಪಿ ಹುಲ್ಲನ್ನು ಸಪ್ಲೈ ಮಾಡುತ್ತಿದ್ದಾರೆ. ಆ ಹುಲ್ಲನ್ನು ದನಗಳು ತಿನ್ನುವುದಿಲ್ಲ. ನಮ್ಮ ಭಾಗದಲ್ಲಿ ಒಟ್ಟು ೯ ಲಕ್ಷ ೬ ಸಾವಿರ ೧೬೬ ದನಗಳು ಇವೆ. ನಾವು ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಈ ಜಿವಿ ಹುಲ್ಲನ್ನು ನಮ್ಮ ದನಗಳು ತಿನ್ನುವುದಿಲ್ಲ ನಮಗೆ ಕಳಕಿ ಹುಲ್ಲು ಸಿಕ್ಕುವುದಿಲ್ಲ. ಈ ಕಳಕಿ ಹುಲ್ಲನ್ನು ದನಗಳು ತಿಂದರೆ ಬದುಕುತ್ತದೆ, ಅವನ್ನು ತರಿಸಿಕೊಡಬೇಕು ಎಂದು ಹೇಳಿದೆವು.

ಇನ್ನೊಂದು ವಿಷಯ ಏನೆಂದರೆ ನಮ್ಮ ಜಿಲ್ಲೆಗೆ ೧೩೨ ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಅದರಲ್ಲಿ ಜಿಲ್ಲಾಧಿಕಾರಿಯವರು ೮೪ ಲಕ್ಷ ತೆಗೆದುಕೊಂಡು ೭೨ ಲಕ್ಷ ಖರ್ಚು ಮಾಡಿದ್ದಾರೆ. ಅಲ್ಲಿಗೆ ಒಂದೊಂದು ತಾಲ್ಲೂಕಿಗೆ ೭–೭ ಲಕ್ಷ ರೂಪಾಯಿ ಖರ್ಚು ಮಾಡಿದ ಹಾಗಾಯಿತು, ಇದು ಬಹಳ ಕಡಿಮೆ. ಇನ್ನೂ ಹೆಚ್ಚು ದುಡ್ಡು ಕೊಡಬೇಕು, ನೀವು ಕೊಟ್ಟಿರುವ ದುಡ್ಡು ಒಂದು ಹಳ್ಳಿಗೂ ಸಾಕಾಗುವುದಿಲ್ಲ. ಆಳಂದ್‌ಗೆ ಸಂಬಂಧಪಟ್ಟ ಹಾಗೆ ೨ ರೆವಿನ್ಯೂ ಸರ್ಕಲ್ ಇದೆ, ಗುಲ್ಬರ್ಗಕ್ಕೆ ಸಂಬಂಧಪಟ್ಟ ಹಾಗೆ ೨ ರೆವಿನ್ಯೂ ಸರ್ಕಲ್ ಇದೆ. ನನ್ನ ಕ್ಷೇತ್ರ ಈ ತರಹ ಒಂದು ಇಕ್ಕಟ್ಟಿನ ಪರಿಸ್ಥಿತಿಯಲ್ಲಿದೆ. ಬರಗಾಲ ಪ್ರದೇಶವಾದ ಕಮಲಾಪುರ ಕ್ಷೇತ್ರಕ್ಕೆ ಹೆಚ್ಚಿಗೆ ದುಡ್ಡು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಗ್ರಿಕಲ್‌ಚರಲ್ ಲೇಬರರ್ಸ್‌ಗೆ ನಮ್ಮ ಜಿಲ್ಲೆಯಲ್ಲಿ ನೋಡಿದರೆ ಬರೀ ೪ ಪರ್ಸೆಂಟ್ ಜನಕ್ಕೆ ಮಾತ್ರ ಕೆಲಸ ಸಿಕ್ಕುತ್ತದೆ. ಅದಕ್ಕೆ ಆ ಜನ ಏನು ಹೇಳುತ್ತಾರೆಂದರೆ ಬೇರೆ ಜಿಲ್ಲೆಗೆ ಹೋದರೆ ನಮಗೆ ಅನುಕೂಲವಾಗುತ್ತದೆ ಎಂದು ಹೇಳಿ ಬೇರೆ ಜಿಲ್ಲೆಗೆ ಹೋಗುತ್ತಿದ್ದಾರೆ. ಅವರಿಗೆ ಇಲ್ಲಿಯೇ ಕೂಲಿ ಸಿಕ್ಕಿದರೆ ಅವರು ಬೇರೆ ಕಡೆ ಹೋಗಲಾರರು. ಇದಕ್ಕೆ ತಾವು ಸರಿಯಾಗಿ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಗುಲ್ಬರ್ಗ ಸಿಟಿಯಲ್ಲಿ ವಾಟರ್ ಪ್ರಾಬ್ಲಮ್ಸ್ ಇದೆ. ಟೆಂಪರರಿಯಾಗಿ ಯಾದರೂ ಭೀಮಾನದಿಯಿಂದ ವಾಟರ್ ಸಪ್ಲೈ ಸ್ಕೀಂ ಅನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಹಾಗಾದರೆ ಆ ಜನರಿಗೆ ಅನುಕೂಲವಾಗುತ್ತದೆ. ಹಾಗೆಯೇ ಅಮರ್ಜ ಪ್ರಾಜೆಕ್ಟ್, ಬೆಣ್ಣೆ ತೊರೆ ಪ್ರಾಜೆಕ್ಟ್, ಯುಕೆಪಿ, ಮಲ್ಲಾಮಾರಿ ಪ್ರಾಜೆಕ್ಟ್ ಈ ಯೋಜನೆಗಳೆಲ್ಲಾ ಪೆಂಡಿಂಗ್‌ನಲ್ಲಿದೆ. ಈ ಯೋಜನೆಗಳನ್ನೆಲ್ಲಾ ತೆಗೆದುಕೊಂಡರೆ ಬರಗಾಲದ ಪ್ರದೇಶದ ಜನರಿಗೆ ತುಂಬಾ ಅನುಕೂಲವಾಗುತ್ತದೆ. ದಯಮಾಡಿ ಈ ಯೋಜನೆಗಳನ್ನೆಲ್ಲಾ ತೆಗೆದುಕೊಂಡು ಅವು ಆದಷ್ಟು ಬೇಗ ಮುಗಿಯುವ ಹಾಗೆ ತಾವು ಮನಸ್ಸು ಮಾಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೫–೩೦. ಪಿ.ಎಂ.

† ಶ್ರೀ ಜೆ. ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಅಧ್ಯಕ್ಷರೆ, ಈ ಬರಗಾಲದ ಅಧ್ಯಯನದ ಸಲುವಾಗಿ ಕೇಂದ್ರದ ತಂಡ ಬಂದು ಹೋದಮೇಲೆ ಅದರ ಬೆನ್ನು ಹಿಂದೆಯೇ ಸದನದ ಶಾಸಕರ ಸಮಿತಿಯನ್ನು ಮಾಡಿದಿರಿ, ಅದು ಸರ್ಕಾರದ ಬೇಡಿಕೆಯನ್ನು ಬಲಪಡಿಸಲು ಒಂದು ವರದಿಯನ್ನು ಇಲ್ಲಿ ಇಟ್ಟಿದೆ. ಬರಗಾಲದ ಬಾಯಿಯನ್ನು ಮುಚ್ಚಲಿಕ್ಕೆ, ಬರಗಾಲದ ಕಾಮಗಾರಿ ಕೆಲಸ ಯಾವ ರೀತಿ ಇದೆ ಎಂದರೆ ಕದ ತಿನ್ನುವ ರಾಕ್ಷಸನಿಗೆ ಹಪ್ಪಳ ಕೊಟ್ಟ ಹಾಗೆ ಆಗಿದೆ. ಎಷ್ಟೇ ದುಡ್ಡು ಕೊಟ್ಟರೂ ಕೂಡ ಜನರಿಗೆ ಇನ್ನೂ ಕೆಲಸ ಕೊಡಬೇಕಾಗಿದೆ, ಕೆಲಸ ಆಗಬೇಕಾಗಿದೆ. ಆದರೂ ಕೂಡ ಕೆಲವು ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈಗಾಗಲೇ ಅಪೂರ್ಣಗೊಂಡಿರುವ ರಸ್ತೆ ಕೆಲಸ, ಚಿಕ್ಕ ನೀರಾವರಿ ಕೆಲಸಗಳನ್ನು ತೆಗೆದುಕೊಳ್ಳಬೇಕು, ತುಂಗಭದ್ರ ಪ್ರಾಜೆಕ್ಟ್‌ನಲ್ಲಿ ಕೆಲವು ಕೆಲಸಗಳನ್ನು ತೆಗೆದುಕೊಳ್ಳಬೇಕು, ರೈತಾಪಿ ಜನರಿಗೆ ಅನುಕೂಲವಾಗುವಹಾಗೆ ಕೆರೆ ಕೆಲಸಗಳನ್ನು ತೆಗೆದುಕೊಳ್ಳಬೇಕು. ಮಲಪ್ರಭ ಬಲದಂಡೆಯನ್ನು ಬಲಪಡಿಸಬೇಕು, ಕೆಲವು ಸಾಮೂಹಿಕ ನೀರಾವರಿ ಬಾವಿಗಳು ಕೆಟ್ಟು ಹೋಗಿವೆ, ಇವುಗಳಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಆದ್ದರಿಂದ ಕೆಟ್ಟಿರತಕ್ಕ ಸಾಮೂಹಿಕ ನೀರಾವರಿ ಬಾವಿಗಳ ದುರಸ್ತಿ ಕಾರ್ಯವನ್ನು ಮಾಡಬೇಕು. ಮೊದಲನೆಯದಾಗಿ ಆರ್ಥಿಕ ಮೂಲವನ್ನು ಪೂರ್ಣವಾಗಿ ಕೇಂದ್ರೀಕರಿಸಿಕೊಂಡು ದೃಢವಾದ ಹೆಜ್ಜೆ ಇಡಬೇಕು. ಇನ್ನು ದನ ತಿನ್ನುವ ಚಿಪ್ಪಾಡಿಯನ್ನು ಒಗೆಯುತ್ತಾರೆ, ಅದನ್ನು ಮತ್ತೆ ತಿನ್ನಲು ಯೋಗ್ಯವಾದಂಥ ಒಂದು ಯೋಜನೆ ಇದ್ದರೆ ಅದನ್ನು ಕೃಷಿ ಇಲಾಖೆಯಿಂದ ಕಂಡು ಹಿಡಿದು ಈ ಚಿಪಾಡಿಯನ್ನು ತಿನ್ನಲಿಕ್ಕೆ ಬರುವಂಥ ಯೋಗ್ಯವಾದ ಆಹಾರವನ್ನಾಗಿ ಮಾಡಲು ಬರುವುದಾದರೆ ಅದನ್ನೂ ಕೂಡ ಮಾಡಲಿಕ್ಕೆ ಅಡ್ಡಿ ಇಲ್ಲ. ಆಮೇಲೆ ತಾಂತ್ರಿಕ ಮಂಜೂರಾತಿ ಕೂಡ ಬೇಗ ಸಿಗುವುದಿಲ್ಲ. ತಾಲ್ಲೂಕು ಮಟ್ಟದ ಅಧಿಕಾರಿಗಳಲ್ಲಿ ಅಂದರೆ ಅರಣ್ಯ ಇಲಾಖೆ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಲ್ಲಿ ಬಂಡಿಂಗ್ ವಿಚಾರದಲ್ಲಾಗಲೀ, ಯಾವುದೇ ವಿಚಾರದಲ್ಲಾಗಲೀ ಇವರಲ್ಲಿ ಸಮನ್ವಯ ದೃಷ್ಟಿಬೇಕು, ಇವರಲ್ಲಿ ತಾಳ್ಮೆ ಇರುವುದಿಲ್ಲ. ತಾಲ್ಲೂಕು ಮಟ್ಟದ ಅಧಿಕಾರಿಗಳಲ್ಲಿ ತಾಳ್ಮೆ ಇಲ್ಲದೇ ಇರುವುದರಿಂದ ಕೆಲಸಗಳೂ ಕೂಡ ತಾಳ್ಮೆ ಇಲ್ಲದ ಹಾಗೆ ಆಗುತ್ತವೆ. ನಮ್ಮಲ್ಲಿ ಹೊಟ್ಟೆಗೆ ಹಿಟ್ಟು ಇಲ್ಲದೇ ಹೋದರೂ ಜುಟ್ಟಿಗೆ ಮಲ್ಲಿಗೆ ಹೂ'', ಎಂದ ಹಾಗೆ ಕೆಲಸವನ್ನು ಮಾಡಬಾರದು.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮೊದಲು ಅವಶ್ಯಕವಾದ ಕೆಲಸವನ್ನು ನಾವು ಮಾಡಬೇಕು. ಜನರಿಗೆ ಉದ್ಯೋಗ ಕೊಡಲು ತಿಂಗಳಿಗೆ ೧೫–೧೮ ಲಕ್ಷ ರೂಪಾಯಿಗಳು ನಮಗೆ ಬೇಕಾಗುತ್ತದೆ, ಮತ್ತೆ ನೀರು ಕೊಡುವುದು ಬೇರೆ, ಮೇವು ಕೊಡುವುದು ಬೇರೆ. ತಾಲ್ಲೂಕಿಗೆ ತಿಂಗಳಿಗೆ ೧೮ ಲಕ್ಷ ರೂಪಾಯಿಗಳನ್ನು ಹೇಗೆ ಪಡೆದುಕೊಳ್ಳಬೇಕು ಎನ್ನುವ ವಿಚಾರ ಮಾಡಬೇಕು. ಕೇಂದ್ರ ಸರ್ಕಾರಕ್ಕೆ ನಮ್ಮ ಸದನದ ಸಮಿತಿಯು ವರದಿಯನ್ನು ಕಳಿಸಿ, ನಾವು ಬಲವಾಗಿ ಪ್ರತಿಪಾದನೆ ಮಾಡಿ ಹಣಕಾಸಿನ ನೆರವನ್ನು ಪಡೆಯಲು ಪ್ರಯತ್ನ ಮಾಡಬೇಕು, ಅದಕ್ಕೆ ತಕ್ಕ ಹಾಗೆ ಕೆಲಸವನ್ನು ಮಾಡಬೇಕು ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ೭ ತಾಲೂಕುಗಳಿವೆ. ಆದರೆ ಮೂರು ತಾಲ್ಲೂಕುಗಳು ಮಾತ್ರ ಬರಗಾಲಕ್ಕೆ ತುತ್ತಾಗಿವೆ ಎಂದು ವರದಿಯಲ್ಲಿ ಕೊಟ್ಟಿದ್ದಾರೆ. ಆದರೆ ಈ ೭ ತಾಲ್ಲೂಕುಗಳೂ ಪೂರ್ಣವಾಗಿ ಬರಗಾಲಕ್ಕೆ ತುತ್ತಾಗಿದೆ, ಈ ಬಗ್ಗೆ ಸಮೀಕ್ಷೆಯಾಗಿದೆ. ಆದುದರಿಂದ ಪೂರ್ಣವಾಗಿ ಚಿಕ್ಕಮಗಳೂರು ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶ ಎಂದು ಪರಿಗಣನೆ ಮಾಡಬೇಕು ಎಂದು ಹೇಳುತ್ತೇನೆ. ತರೀಕೆರೆ ತಾಲ್ಲೂಕು ವಿಶೇಷವಾಗಿ ಎರಡು ರೀತಿಯ ಲಾಸನ್ನು ಅನುಭವಿಸಿದೆ. ಮುಂಗಾರು ಮಳೆ ಸ್ವಲ್ಪ ಬಂತು, ಬಿತ್ತನೆಯಾಯಿತು. ನಂತರ ಬಿತ್ತಿದ್ದೆಲ್ಲಾ ಒಣಗಿ ಹೋಯಿತು. ಇವತ್ತಿನ ದಿವಸ ರೈತ ಇದ್ದಿದ್ದೆಲ್ಲಾ ಕಳೆದುಕೊಂಡಿದ್ದಾನೆ ಮುಂಗಾರು ಮಳೆ ಸ್ವಲ್ಪ ಬರದೇ ಹೋಗಿದ್ದರೆ ಬೀಜ, ಗೊಬ್ಬರ ಎಲ್ಲಾ ಉಳಿದುಕೊಳ್ಳುತ್ತಿತ್ತು. ಇವತ್ತಿನ ದಿವಸ ಬಿತ್ತಿದ್ದೆಲ್ಲಾ ಒಣಗಿಹೋಗಿದೆ. ಆದ್ದರಿಂದ ಕಡೂರು, ತರೀಕೆರೆಯಲ್ಲಿ ಹೆಚ್ಚಿಗೆ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ವಿಶೇಷವಾಗಿ ತೋಟಗಾರಿಕೆಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕಾಗಿದೆ. ಅನೇಕ ತೋಟಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಕುಂಠಿತವಾಗಿದೆ. ಅಡಿಕೆ ತೋಟಗಳು, ತೆಂಗಿನ ತೋಟಗಳು ಒಣಗುತ್ತಿವೆ. ಮನೆಗಳಿಗೆ ವಿದ್ಯುಚ್ಛಕ್ತಿ ಕೊಡದೇ ಹೋದರೂ ಚಿಂತೆಯಿಲ್ಲ, ತೋಟಗಳ ಪಂಪುಸೆಟ್ಟುಗಳಿಗೆ ವಿಶೇಷ ರೀತಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಆಗುವಂತೆ ಸರ್ಕಾರ ಒಂದು ಮುನ್ಸೂಚನೆ ಕೊಡಬೇಕು. ಜಂಬದಾಳ ಜಲಾಶಯದಲ್ಲಿ ಸರ್ಕಾರದ ಯೋಜನೆ ಪೂರ್ಣವಾಗಿದೆ, ಅವರ ಕಾಮಗಾರಿಯನ್ನು ತೆಗೆದುಕೊಳ್ಳಬೇಕು. ತೆಂಗು ಮತ್ತು ಅಡಿಕೆ ಬೆಳೆಗಾರರಿಗೆ ಸಬ್ಸಿಡಿ ೫೦ ಪರ್ಸೆಂಟ್ ದರದಲ್ಲಿ ಬೋರ್‌ವೆಲ್ ಹೊಡೆಸಲಿಕ್ಕೆ ಸರ್ಕಾರದವರು ಕೊಡಬೇಕು. ಈ ನಾಲ್ಕು ತಾಲ್ಲೂಕುಗಳಲ್ಲಿ ಸಬ್ಸಿಡಿ ದರದಲ್ಲಿ ಕೊಡಬೇಕು. ನಮಗೆ ಹಣ ಬೇಕಾದರೆ ನಾವು ವಿಧಾನಸಭೆಯನ್ನು ನೋಡುತ್ತೇವೆ. ಕೇಂದ್ರ ಸರ್ಕಾರದಿಂದ ಹೆಚ್ಚಿಗೆ ಹಣ ಪಡೆಯಲಿಕ್ಕೆ ಕೆಂಪು ಕೋಟೆಯನ್ನು ನೋಡುತ್ತಾರೆ. ಮಾನ್ಯ ಬಂಗಾರಪ್ಪನವರು ನಮ್ಮ ಹತ್ತಿರ ವಿಧಾನಸಭೆಯಲ್ಲಿ ಗುದ್ದಾಡುತ್ತಾರೆ. ಮಾನ್ಯ ಬಂಗಾರಪ್ಪನವರು ಶ್ರಮವಹಿಸಿ ಕೆಂಪುಕೋಟೆಯಿಂದ ಹಣವನ್ನು ತರಲಿಕ್ಕೆ ಪ್ರಯತ್ನ ಮಾಡಿ, ಪ್ರಧಾನಮಂತ್ರಿಗಳ ಹತ್ತಿರ ಹೆಚ್ಚಿಗೆ ಹಣ ತನ್ನಿ ಎಂದು ಹೇಳುತ್ತಾ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು).—ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಬರಗಾಲದ ಬವಣೆಯನ್ನು ಬಗೆಹರಿಸುವಲ್ಲಿ ಕೆಲವು ಸಲಹೆಗಳನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ, ಮಾನ್ಯ ಕಂದಾಯ ಸಚಿವರು ಅನೇಕ ಸಂದರ್ಭಗಳಲ್ಲಿ ಈ ಮನೆಯ ಒಳಗೆ ಮತ್ತು ಹೊರಗಡೆ ಅನೇಕ ರೀತಿಯ ಹೊಸ ಆಶ್ವಾಸನೆಗಳನ್ನು ಜನರಿಗೆ ಕೊಡುತ್ತಾ ಇದ್ದಾರೆ. ಮೊನ್ನೆ ಹುಬ್ಬಳ್ಳಿಯಲ್ಲಿ ಪುಕ್ಕಟೆಯಾಗಿ ದನಗಳಿಗೆ ಫಾಡರ್ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಎನ್ನುವುದನ್ನು ಪೇಪರಿನಲ್ಲಿ ಓದಿದ್ದೇನೆ, ಆದರೆ ಇವತ್ತಿನವರೆಗೂ ನಮ್ಮ ರೈತರಿಗೆ ಯಾವುದೇ ರೀತಿಯಾಗಿ ಪುಕ್ಕಟೆಯಾಗಿ ದನಗಳಿಗೆ ಮೇವನ್ನು ಒದಗಿಸತಕ್ಕ ಕಾರ್ಯಕ್ರಮ ಆಗಿಲ್ಲ. ಅಲ್ಲದೆ ನಮ್ಮ ತಾಲ್ಲೂಕಿನಲ್ಲಿ ೫೦ ಪರ್ಸೆಂಟ್ ಟ್ರಾನ್ಸ್‌ಪೋರ್ಟ್ ಕೊಡಬೇಕು ಎಂದು ತಹಸೀಲ್ದಾರರು ನಮ್ಮ ರೈತರಿಗೆ ಹೇಳುತ್ತಿದ್ದರು. ನಮ್ಮ ತಾಲ್ಲೂಕಿನಲ್ಲಿ ಕೇವಲ ಚುರಿಮುರಿ ತಿನ್ನುತ್ತಾ ಕೆಲಸಗಾರರು ಇದ್ದಾರೆ, ಅವರಿಗೆ ಕೆಲಸ ಸಿಗುತ್ತಿಲ್ಲ. ನಾನು ಅನೇಕ ಜನರನ್ನು ಕರೆದುಕೊಂಡು ತಾಲ್ಲೂಕು ಆಫೀಸಿಗೆ ಹೋದರೆ ದುಡ್ಡಿಲ್ಲ ಎಂದು ಹೇಳುತ್ತಾ ಇದ್ದಾರೆ. ಮೊನ್ನೆ ಒಂದು ಲಕ್ಷ ಬಂದಿದೆ ಎಂದು ಕೇಳಿದ್ದೇನೆ, ಆದರೆ ಕಾರ್ಯಾರಂಭ ಆಗಿಲ್ಲ, ನಮ್ಮ ತಾಲ್ಲೂಕಿನಲ್ಲಿ ಇನ್ನೂ ಕೆಲಸ ಆರಂಭವಾಗಿಲ್ಲ. ಮಾನ್ಯ ಕಂದಾಯ ಸಚಿವರನ್ನು ಕೇಳಿಕೊಂಡಿದ್ದೇನೆ, ನಮ್ಮ ಜನರು ಬಹಳ ತೊಂದರೆಯಲ್ಲಿದ್ದಾರೆ. ನಮ್ಮ ಸರ್ಕಾರದವರು ಪ್ರತಿವರ್ಷ ಬರಗಾಲಕ್ಕೆ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದಾರೆ. ಆಂಧ್ರ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದಲ್ಲಿ ತೆಲುಗು ಗಂಗಾ ಯೋಜನೆಯನ್ನು ಯಾವರೀತಿ ಪ್ರಾರಂಭಿಸಿದ್ದಾರೋ ಅದೇರೀತಿ ನಮ್ಮಲ್ಲೂ ಮಾಡಿ ಎಂದು ನಾನು ಧಾರವಾಡದ ಜನತೆಯ ಪತಿಯಿಂದ ಮಾನ್ಯ ಕಂದಾಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಾ ಇದ್ದೇವೆ. ಸ್ಕೀಮ್ಸಿಟಿಯಲ್ಲಿ ೧೦೦ಕ್ಕೆ ೫೦ ಭಾಗ ಕೆಲಸ ತೆಗೆದುಕೊಳ್ಳಬೇಕು. ಹೊನ್ನಾಳಿಯ ಕಾಲುವೆ ತೆಗೆಸಲಿಕ್ಕೆ ಪ್ರಯತ್ನ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಅಪ್ಪರ್ ಕೃಷ್ಣ ಮತ್ತು ಕಾಳಿಯಿಂದ ಎಷ್ಟರಮಟ್ಟಿಗೆ ಅನುಕೂಲವಾಗುತ್ತಿದೆ ಎನ್ನುವುದು ಅವರಿಗೆ ತಿಳಿದಿದೆ. ಆದುದರಿಂದ ಈ ಕಾಲುವೆಯನ್ನು ತೆಗೆಸಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಮಾನ್ಯ ಕಂದಾಯ ಸಚಿವರಲ್ಲಿ ಧಾರವಾಡ ಜನತೆಯ ಪರವಾಗಿ ಕಳಕಳಿಯಿಂದ ಕೇಳಿಕೊಳ್ಳಲಿಕ್ಕೆ ಇಚ್ಛೆ ಪಡುತ್ತಾ ಇದ್ದೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬಗ್ಗೆ ಶಾಸಕರ ವರದಿಯನ್ನು ನೋಡಿದರೆ ಅದರಲ್ಲಿ ಧಾರವಾಡ ಜಿಲ್ಲೆಯಲ್ಲಿ ೧೦೧ ಕೊಳವೆ ಬಾವಿಗಳು ಫೇಲಾಗಿವೆ ಎಂದು ಹೇಳಿದ್ದಾರೆ. ಕನಿಷ್ಟ ಪಕ್ಷ ನಮ್ಮ ರಾಣಿಬೆನ್ನೂರು ಒಂದೇ ಒಂದು ತಾಲ್ಲೂಕಿನಲ್ಲಿ ೧೦೧ ಬಾವಿಗಳು ಫೇಲಾಗಿವೆ. ಹೆಚ್ಚು ನೀರು ಇಲ್ಲದೆ ಒಣಗಿ ಹೋಗಿ ಕುಡಿಯುವ ನೀರು ಕಡಿಮೆಯಾಗಿದೆ. ನಮ್ಮ ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಪರಿಸ್ಥಿತಿ ಇದೆ, ಧಾರವಾಡದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡದೇ ಹೋದರೆ ಜನ ಕಂಗಾಲಾಗುತ್ತಾರೆ. ಹೊಟ್ಟೆಗೆ ಇಲ್ಲದೇ ಹೋದರೂ ನೀರನ್ನಾದರೂ ಕುಡಿಸಿ ಬದುಕಿಸತಕ್ಕ ಕಾರ್ಯಕ್ರಮವನ್ನು ಅತಿ ಜರೂರಾಗಿ ಮಾಡಬೇಕು. ದನಗಳು ಮೇವಿಲ್ಲದೆ ಸಾಯುತಕ್ಕ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿದೆ. ನಮ್ಮ ಜಿಲ್ಲೆಯವರಾದ ಮಾನ್ಯ ಕಂದಾಯ ಮಂತ್ರಿಗಳು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ದನಗಳಿಗೆ ಮೇವನ್ನು ಒದಗಿಸತಕ್ಕ ಕಾರ್ಯಕ್ರಮವನ್ನು ಹಾಕಬೇಕು. ೧೦೦ಕ್ಕೆ ೫೦ರಷ್ಟು ಹಣವನ್ನು ರೈತರಿಗೆ ಕೊಡಬೇಕೆಂದು ಏನು ಕರಾರನ್ನು ಹಾಕಿದ್ದೀರಿ, ಅದು ಇಲ್ಲವೆಂದು ಡಿಕ್ಲೇರ್ ಮಾಡಿ. ಅದು ಈ ತಕ್ಷಣದಲ್ಲಿ ಜಾರಿಗೆ ಬರಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಣ್ಣ ರೈತರು, ದೊಡ್ಡ ರೈತರು ಎನ್ನುವ ಭಿನ್ನಾಭಿಪ್ರಾಯವನ್ನು ಬಿಟ್ಟು ಬಿಡಿ, ಎಲ್ಲ ರೈತರಿಗೂ ಕೂಡ ಇದೇ ಪರಿಸ್ಥಿತಿಯಾಗಿದೆ. ಸಣ್ಣ ರೈತರಲ್ಲಿ ಒಂದೆರಡು ದನಗಳ್ನ ಇದ್ದರೆ, ದೊಡ್ಡ ರೈತರು ಎಮ್ಮೆಗಳನ್ನು ಎತ್ತುಗಳನ್ನು ಕಟ್ಟಿ, ಅವಕ್ಕೆ ಮೇವು ಇಲ್ಲದೆ ತುಂಬಾ ತೊಂದರೆಯಾಗಿದೆ. ರೈತನ್ನು ತನ್ನ ಹೊಟ್ಟೆ ತುಂಬಿಸಿಕೊಳ್ಳುವುದೇ ಕಷ್ಟವಾಗಿರುವಾಗ, ದನಗಳ ಹೊಟ್ಟೆ ತುಂಬಿಸಲು ಹೇಗೆ ಸಾಧ್ಯವಾಗುತ್ತದೆ ? ಎಲ್ಲ ರೈತರಿಗೂ ಪುಕ್ಕಟೆಯಾಗಿ ಮೇವನ್ನು ಒದಗಿಸ ತಕ್ಕಂತಹ ಯೋಜನೆ ತಕ್ಷಣ ಕಾರ್ಯರೂಪಕ್ಕೆ ತರಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ತುಂಗಾ ಕಾಲುವೆಯನ್ನು ತಕ್ಷಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ೧೦೦ಕ್ಕೆ ೫೦ರಷ್ಟು ಹಣನ್ನು ರೈತರಿಗೆ ಕೊಡಬೇಕೆಂದು ಒತ್ತಾಯ ಪಡಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇಲ್ಲಿಯವರೆಗೆ ೫೧ಜನ ಸದಸ್ಯರು ಮಾತನಾಡಿದ್ದಾರೆ. ಇದು ಅತಿ ಮಹತ್ವದ ವಿಚಾರವೆಂದು ಇಲ್ಲಿಯವರೆಗೆ ಸಮಯವನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಲ್ಲಪ್ಪನವರು ಮಾತನಾಡಲಿ.

ಶ್ರೀ ಕೆ. ಮಲ್ಲಪ್ಪ (ಮಾಯಕೊಂಡ).—ಮಾನ್ಯ ಅಧ್ಯಕ್ಷರೆ, ಈಗಾಗಲೇ ಬರಗಾಲದ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಆದುದರಿಂದ ನಾನು ಇನ್ನು ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಬರಗಾಲ ಕಾಮಗಾರಿಗೆಂದು ಇವತ್ತು ಹಣ ಕೊಟ್ಟರೆ, ಒಂದು ವಾರದಲ್ಲಿ ಕೆಲಸ ಮುಗಿಸಬೇಕೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಒಂದು ವೇಳೆ ಅದು ಮುಗಿಯದೇ ಹೋದರೆ, ಹಣವನ್ನು ವಾಪಸ್ ತೆಗೆದುಕೊಳ್ಳುವಂತಹ ಸಂದರ್ಭ ಬಂದಿದೆ. ಕೆಲವರು ಅವಸರವಸರವಾಗಿ ಮಾಡಲು ಹೋಗಿ, ಹಣ ಪೋಲಾಗತಕ್ಕಂತಹ ಸಂದರ್ಭ ಬರುತ್ತದೆ. ಆದುದರಿಂದಾಗಿ ಅವರಿಗೆ ಕಾಲಾವಧಿಯನ್ನು ಜಾಸ್ತಿ ಕೊಟ್ಟು ಹಣವನ್ನೂ ಜಾಸ್ತಿ ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಬರಗಾಲ ಕಾಮಗಾರಿಯ ಜೊತೆಗೆ ಶಾಲಾ ಕಟ್ಟಡಗಳೂ ಇದೆ, ಇಲ್ಲಿನ ಮಕ್ಕಳಿಗೆ ಇದರಿಂದ ಅನುಕೂಲವಾಗುತ್ತಿದೆಯೇ ಎಂಬುದನ್ನೂ ಕೂಡ ನೋಡಬೇಕು. ಇನ್ನು ಜಮೀನುಗಳಿಗೆ ಸಣ್ಣ ಸಣ್ಣ ಮೋರಿಗಳನ್ನು ಸೇತುವೆಗಳನ್ನು ಕಟ್ಟತಕ್ಕಂತಹ ವ್ಯವಸ್ಥೆ ಮಾಡಬೇಕು. ನೀರಾವರಿ ಪ್ರದೇಶವೆಂದು ಕೆಲವು ಭಾಗಗಳಿಗೆ ಹಣ ಕೊಡತಕ್ಕಂತಹ ಸಂದರ್ಭವಿಲ್ಲ. ಬರಗಾಲ ಪ್ರದೇಶದಿಂದ ಜನರು ಕೆಲಸ ಸಿಗುತ್ತದೆಂದು ನೀರಾವರಿ ಪ್ರದೇಶಕ್ಕೆ ಬರುತ್ತಿದ್ದಾರೆ. ಆದರೆ ನೀರಾವರಿ ಪ್ರದೇಶಕ್ಕೆ ಹಣ ಕೊಡತಕ್ಕಂತಹ ಸಂದರ್ಭ ಕಡಿಮೆಯಿರುತ್ತದೆ. ನೀರಾವರಿ ಪ್ರದೇಶಗಳಿಗೂ ಸಹ ರಸ್ತೆಗಳನ್ನು ಮಾಡತಕ್ಕಂತಹ ವ್ಯವಸ್ಥೆ ಮಾಡಬೇಕು. ಪೂರ್ಣ ಬರಗಾಲ ಇರತಕ್ಕಂತಹ ಪ್ರದೇಶದಿಂದ

ಇಲ್ಲಿಗೆ ಬಂದಾಗ, ಕೆಲಸವಿಲ್ಲದೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಮುಖ್ಯವಾಗಿ ಕೆ.ಇ.ಬಿ. ಪಾತ್ರ ಬಹಳ ಇದೆ. ಬರಗಾಲ ಪ್ರದೇಶದಲ್ಲಿ ಪಿ.ಎಲ್.ಡಿ. ಬ್ಯಾಂಕ್‌ಗಳ ಮೂಲಕ ಮತ್ತು ಇತರ ಬ್ಯಾಂಕುಗಳ ಮೂಲಕ ಕೊಳವೆ ಬಾವಿಗಳನ್ನು ತೋಡಿಸಿದ್ದಾರೆ, ಆದರೆ, ಅದಕ್ಕೆ ವಿದ್ಯುಚ್ಛಕ್ತಿ ಸರ್ವೀಸನ್ನು ಕೊಟ್ಟಿಲ್ಲ. ವಿದ್ಯುಚ್ಛಕ್ತಿ ಮಂಡಲಿಯವರು ತ್ವರಿತಗತಿಯಲ್ಲಿ ಈ ಕಾರ್ಯವನ್ನು ಕೈಗೊಳ್ಳಬೇಕು. ಮುಂಗಾರು ಪ್ರದೇಶದಲ್ಲಿ ರೈತರು ಬಿತ್ತನೆ ಮಾಡಿ, ಕೈಯಲ್ಲಿದ್ದ ಬೀಜ, ಗೊಬ್ಬರ ವನ್ನು ಕಳೆದುಕೊಂಡಿದ್ದಾರೆ. ಅದು ಒಣಗಿಹೋಗಿದೆ. ಹಿಂಗಾರು ಬೆಳೆಗೆ ಅನುಕೂಲವಾಗುವ ದೃಷ್ಟಿಯಿಂದ ವ್ಯವಸಾಯ ಇಲಾಖೆಯವರು ಕೂಡಲೇ ಸಾಕಷ್ಟು ಬೀಜ ಗೊಬ್ಬರವನ್ನು ಶೇಖರಿಸು ವುದರ ಮೂಲಕ, ಬಿತ್ತನೆಗೆ ವ್ಯವಸ್ಥೆ ಮಾಡಬೇಕೆಂದೂ ಮತ್ತು ಶಾಲಾ ಕಟ್ಟಡಗಳನ್ನು, ಮತ್ತು ಮೋರಿಗಳನ್ನು ಕೂಡ ಮಾಡಬೇಕೆಂದು ಹೇಳುತ್ತಿದ್ದೇನೆ. ಬರಗಾಲ ಪ್ರದೇಶದಿಂದ ಬಂದಂತಹ ರೈತರಿಗೆ ಉದ್ಯೋಗ ದೊರೆಯುವತಂಹ ಪಕ್ಕಾ ಕೆಲಸಗಳನ್ನು ಮಾಡಬೇಕೆಂದು ಹೇಳಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ದಿವಸ ಭೀಕರ ಬರಗಾಲದ ಪರಿಸ್ಥಿತಿಯ ಬಗ್ಗೆ ಸದನದಲ್ಲಿ ಸುಧೀರ್ಘವಾಗಿ ಚರ್ಚೆಯಾಗಿದೆ. ಮಾನ್ಯ ಸದಸ್ಯರುಗಳು ಮಾಡಿದ ಸಲಹೆ ಸೂಚನೆಗಳ ಬಗ್ಗೆ, ನಾನು ಉತ್ತರ ಕೊಡುವುದಕ್ಕಿಂತ ಮೊದಲು ಒಂದು ಲಿಖಿತ ಹೇಳಿಕೆಯನ್ನು ಓದುತ್ತೇನೆ. ಅದರಲ್ಲೂ ವಿಶೇಷವಾಗಿ ಶ್ರೀಮಾನ್ ಖರ್ಗೆಯವರ ಸಮಿತಿಯವರು ಕೊಟ್ಟಂತಹ ವರದಿಯ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಹೇಳಿ, ನಂತರ ಉತ್ತರವನ್ನು ಕೊಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಅಪೋಸಿಷನ್ ಅವರನ್ನು ಛೇರ್‌ಮನ್ ಮಾಡಿದರೆ ಕೆಲಸ ಚಲೋ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೋಸ್ಕರವೇ ನಾನು ಮಾಡಿದ್ದು. ಅಧ್ಯಕ್ಷರೇ ಕನ್ನಡಕ್ಕೆ ಟ್ರಾನ್ಸ್‌ಲೇಟ್ ಆಗಿರತಕ್ಕ ಸ್ಟೇಟ್‌ಮೆಂಟ್ ನನಗೆ ಅಷ್ಟು ಸಮಾಧಾನ ಕಾಣಲಿಲ್ಲ. ಆದ್ದರಿಂದ, ಇಂಗ್ಲೀಷ್‌ನಲ್ಲಿರತಕ್ಕದ್ದು ಓದುತ್ತೇನೆ. ಆದ್ದರಿಂದ, ದಯಮಾಡಿ ಕ್ಷಮಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಡ್ರೈಲ್ಯಾಂಡ್ ಡೆವಲಪ್‌ಮೆಂಟಿಗೆ ಒಂದೇ ಒಂದು ಲಕ್ಷ ರೂಪಾಯಿ ಇಟ್ಟಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರ ಬಗ್ಗೆ ನಾನು ಅನಂತರ ಹೇಳುತ್ತೇನೆ.

(ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

At the outset, I would like to thank all the members of the Committee of Legislators, who, under the leadership of Shri Mallikarjun Kharge, have taken enormous pains to go round the 17 scarcity affected districts in the state to have an on-the-spot study of the drought situation and for having presented a comprehensive report to government. Inspite of all the inconvenience they were put to, the Hon'ble Members have meticulously visited each and every district and have assessed the local situation after deatiled discussions with all concerned and field visits.

The report presented by this Committee is carefully studied by me. It contains numerous valuable suggestions and recommendations.

I may incidentally add that on some of the suggestion/recommendations which have been now made in the report, action has already been taken by the Government. Of course, there

is considerable scope for improving upon the steps so far instiated by the Government. Some of the important recomendations made by the Committee, and action taken by Government/proposed to be taken thereon are as follows:

1. The Committee has recommended that due to the damage caused to early sown kharif crops, the Government should undertake free supply of seeds and fertilizers to the farmers for resowing operations. It is also suggested that adequate stock of seeds, fertilizers and pesticides should be kept readily available with Government for supply to the needy farmers.

   This is a very valuable suggestion and will be proccessed by the Government. Already, under the agricultural minikits and plant protection programme under Scarcity Heads, we have in the first 4 months of 1985-86 released Rs. 206 lakhs for this purpose this will be further intensified according to actual needs.

2. While taking note of the constitution of dry land development boards by the Government for promoting Dry Land Development, the Committee has felt that some more watersheds in each of the affected districts are to be identified and that Dry Land Development Board may be encouraged to take up Dry Land farming in the affected districts in a big way.

   As already made clear by me, while making statements on the floor of the Assembly, on earlier occasions, I would like to assure the Hon'ble Member of the House, that Government is very keen in promoting Dry Land farming on a large scale. The matter would be pursued vigorously.

3. On the issue of the meeting the drinking Water scarcity, in rural areas, the Committee has felt that the power of sanctioning borewel should vest with the DCs under the scarcity programme.

   A decession in this regard has already taken by Government, To remove delay and to ensure immediate action in taking up borewells, Government has taken a decision to release funds under scarcity relief for rural drinking water supply, district wise to the C.E.P.H.E. with the direction that the PHE authorities should take up borewells in the locations suggested by the DCs out of the funds released to each of the districts. This will

ensure that there is no delay in providing borewells wherever necessary. Similar arrangements have also been made in respect of urban water supply.

4. The Committee hhs further suggested that habitations whic are having population of more than 50 should be considered for taking up borewells instead of population of 150 as per the existing norms at present.

It is also suggested that the drinking water shortage in localities coming under notified areas like HAL, ITI should be adquately met. These suggestions will be examined carefully.

5. A suggestion is made to purchase 8 new cyclone rigs for the State.

I may state here that the State Government in its recent Memorandum presented to Government of India, has rueqested for assistance for the purchase of 5 new cyclone rigs to drill borewells in specific areas. On hearing from Government of India in this regard, further action would be taken.

6. On the question of Employment Generation programme, the Committee has recommended that atlest 50% of the labour population affected should be provided jobs continuously for 100 days at least.

Government is committed to provide jobs to any one who Offers himself for a job. Every effort woud be made to ensure that no one would be denied employment.

7. A view is expressed in the report that, presently 2 works in each village panchayat are not being taken up.

As already seated, every one who offers himself for a job will provided work. Instructions will be issued to DCs to ensure that works are taken up as per the guidelines issued by Government.

8. On the question of equal wages of Rs. 7.80 for both male and female workers, strict instructions are already issued to the concerned officers. At present, wages are being paid promptly at the rate of Rs. 7.80 per day to both men and woman who are engaged in scarcity relief works. Our instructions will be reiterated.

9. The Committee has stressed the need for intimating to the local MLAs/MLCs/MPs all details, about the employ-

ment generation works, such as, commencement of the works, the numbers of labour employment, the amount spent, etc. ಈ ವಿಚಾರದಲ್ಲಿ ಹೇಳಬೇಕೆಂದರೆ, ನಾನು ಶಿವಮೊಗ್ಗ, ಚಿಕ್ಕಮಗಳೂರು ಈ ರೀತಿ ಮೂರು ಜಿಲ್ಲೆಗಳಿಗೆ ಹೋಗಿದ್ದೆ. ಈ ಡೀಟೈಲ್ಸ್ ಎಲ್ಲಾ ಎಂ. ಎಲ್. ಎ. ಗೂ ಕೊಟ್ಟಿದ್ದಾರೆ. ಬಿ. ಡಿ. ಓ. ಮತ್ತು ತಹಶೀಲ್ದಾರ್ ಆಫೀಸಿನ ನೋಟೀಸ್ ಬೋರ್ಡ್‌ನಲ್ಲಿ ಹಚ್ಚಿದಂತ ವಿಚಾರ ನನಗೆ ಗೊತ್ತಾಗಿದೆ.

I have already made it clear on more than one occasion on the floor of the house, that the Implementing officers have been directed to provide all these details to the local MLAs/MLCs/MPs, and also to display these details on the notice board in their offices. In fact, this is being followed already.

6-00 P. M.

10. A suggestion is made that, as under the regular N. R. E. P. Programme, supply of foodgrains to labourers under scarcity works also should be considered.

This will be examined by the Government. Central Government will be moved for greatr allotment of rice and other foodgrains.

11. On the question of fodder supply, the Committee has stressed the need for release of larger funds, free supply of fodder and free transportation are suggested. It is also recommended to open atleast one fodder bank within 15-20 K. M. of each affected place. A crash programme of cultivation of fodder in livestock forms and particularly in irrigated areas is another suggestion made.

Sufficient funds have been released by the Government to words fodder supply. Strict instruction have also been issued to the Deputy Commissioners that fodder should be procured by the Government and supplied free of cost to the small and marginal farmers. Transportation charges are also to be ment by Government in such cases. It is seen that though adequate funds are released to Deputy Commissioners for purchagse, transportation and supply of fodder, the problem is that adequate fodder is not available in a majority of the drought affected districts. Government has also taken steps to ban movement of cattle fodder outside the state. In addition, the Government is contemplating import of fodder from outside the State, wherever it is avilable, and Government is also explaring the possibility of taking up fodder cultivation in some of the central fodder farms which are not put to optimnm use. The question of providing incentives for cultivation of fodder in private farms is also being examined ಈ ವಿಚಾರದಲ್ಲಿ ನಾನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕೊಟ್ಟಂತಹ

ಮನವಿ ಪತ್ರದಲ್ಲಿ ಕೂಡ ಪ್ರಸ್ತಾಪ ಮಾಡಿ, ಅದರಲ್ಲಿ ಸೇರಿಸಿದ್ದೇನೆ, Instructions have already been issued to the Deputy Commissioners for opening of fodder banks atleast in taluk head quarters.

12. Stressing the need for proper co-ordination in the district and talklevels, in the effective implementation of releef measures, the Committee has felt that the Deputy Commissionres should be made responsible for proper executions of the relief works and should be vested with powers to takele the reliefworks and should be situation on a war footing. The Committee has also recommended for filling up all vacancies of posts such as B. D. Os., J. Es and other personnel at the field level.

Orders are already issued from time to time making the Deputy Commissioners responsible for proper implementation of all scarcity relief programme. I have personally reviewed the progress of scarcity relief works in most of the districts and I met all the Deputy Commissioners in a meeting last month. I have issued instructions to them to effectively co-ordinate and implement relief mesures systematically on a war footing to provide adquate and timely relief.

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ಕನ್ನಡದಲ್ಲಿ ಸ್ಟೇಟ್‌ಮೆಂಟ್ ಮಾಡಿದರೆ ಒಳ್ಳೆಯದು. ನಾನು ಈ ಸದನಕ್ಕೆ ಬಂದತಕ್ಷಣ ಎಲ್ಲಿಗೆ ಬಂದೇ ಎನ್ನುವುದೇ ನನಗೆ ಅರ್ಥವಾಗಲಿಲ್ಲ.

(ಗೊಂದಲ)

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೆ, ಯಾವಾಗಲೂ ಕನ್ನಡ ಅಂದರೆ ಅದು ಸರಿಯಲ್ಲ. ಮಾನ್ಯ ಮಂತ್ರಿಗಳು ಮೊದಲೇ ಕೇಳಿಕೊಂಡಾಗ ಮಾನ್ಯ ಸದಸ್ಯರು ಇರಲಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಸ್ಟೇಟ್‌ಮೆಂಟ್ ಮಾಡಲಿಕ್ಕೆ ಹೇಳಬೇಕು.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ನಾರಾಯಣಕುಮಾರ್‌ರವರು ದಯಮಾಡಿ ಕುಳಿತು ಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೆ, ಇದರ ಬಗ್ಗೆ ತಾವು ಒಂದು ರೂಲಿಂಗ್ ಕೊಡಬೇಕು. ಅನಂತರ ಬೇಕಾದರೆ ಕ್ರಮ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಕರ್ನಾಟಕ ರಾಜ್ಯದಲ್ಲಿ ಕನ್ನಡ ಆಗಬೇಕು.

ಛೇರ್‌ಮನ್.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ, ತಾವು ಕುಳಿತುಕೊಳ್ಳಿ, ಅಂದರೆ ಅದು ರೂಲಿಂಗ್ ಆಗುವುದಿಲ್ಲ. ಪದೇ ಪದೇ ಮಾನ್ಯ ಸದಸ್ಯರು ಈ ರೀತಿಯಲ್ಲಿ ಎದ್ದು ನಿಂತು ಹೇಳುವುದು ಒಳ್ಳೆಯದಲ್ಲ. ಆದ್ದರಿಂದ ಇದರ ಬಗ್ಗೆ ತಾವು ಒಂದು ರೂಲಿಂಗ್ ಕೊಡಬೇಕು ಅದು ಕಡತದಲ್ಲಿ ಬರಬೇಕು.

(ಗೊಂದಲ)

ಶ್ರೀ ಎಂ. ರಾಮಪ್ಪ.—ಇಂಥ ವ್ಯವಹಾರಗಳೆಲ್ಲೆಲ್ಲಾ ಅಸೆಂಬ್ಲಿಯಲ್ಲಿ ಹೀಗೆ ನಡೆಯುತ್ತಿದೆ ಅಂದರೆ ನಾಚಿಕೆಪಡಬೇಕಾಗುತ್ತದೆ.

(ಗೊಂದಲ)

ಛೇರ್‌ಮನ್.—ಮುಂದೆ ಈ ತರಹ ಆಗದಂತೆ ನೋಡಿಕೊಳ್ಳೋಣ ದಯವಾಡಿ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಕನ್ನಡ ಗೊತ್ತಿಲ್ಲ ಎಂದು ಹೇಳಿದರೆ ನಾಚಿಕೆ ಪಡಬೇಕಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ಕನ್ನಡ ನಮಗೂ ಮಾನ್ಯ ಬೊಮ್ಮಾಯಿಯವರಿಗೂ ಚೆನ್ನಾಗಿ ಗೊತ್ತಿದೆ. ಮಾನ್ಯ ನಾರಾಯಣ್‌ಕುಮಾರ್ ಅವರಿಗಿಂತಲೂ ನಮಗೆ ಚೆನ್ನಾಗಿ ಗೊತ್ತಿದೆ. ಅವರ ಭಾಷೆ ಯಾರಿಗೂ ಗೊತ್ತಿಲ್ಲ. ಅವರು ಕನ್ನಡ ಎನ್ನುವುದನ್ನು ಸರಿಯಾಗಿ ಹೇಳಲಿ. ಅವರು ಕಾನ್ನಡ ಎಂದು ಹೇಳುತ್ತಾರೆ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೆ, ನನಗೆ ಕನ್ನಡ ಗೊತ್ತಿದೆ. ಮಾನ್ಯ ರಾಮಪ್ಪನವರಿಗೂ ಮಾನ್ಯ ನಾಯಕ್ ಅವರಿಗೂ ಉಚಿತವಾಗಿ ಕನ್ನಡ ಹೇಳಿಕೊಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೆ, ಕನ್ನಡ ಭಾಷೆಯಲ್ಲಿರತಕ್ಕ ಸ್ವರ, ವ್ಯಂಜನದಲ್ಲಿ ತಪ್ಪು ಮಾಡುತ್ತಾರೆ. ಕ್ರಿಯಾಪದ ಉಪಯೋಗಿಸುವಾಗ ತಪ್ಪು ಮಾಡುತ್ತಾರೆ. ಹಾಗಿರುವಾಗ ಮಾನ್ಯ ಸದಸ್ಯರು ಏತಕ್ಕೆ ಮಧ್ಯೆ ಮಧ್ಯೆ ಈ ರೀತಿ ಹೇಳಬೇಕು ?

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೆ, ಅವರಿಗೆ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಗೊತ್ತಿದೆಯೇ ಹೇಳಲಿ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ, ಕನ್ನಡದ ಬಗ್ಗೆ ಅಭಿಮಾನ ಇರಲಿ, ಆದರೆ ಕನ್ನಡದ ಬಗ್ಗೆ ದುರಭಿಮಾನ ಬೇಡ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಕನ್ನಡ ಗೊತ್ತಿಲ್ಲದೇ ಇದ್ದರೆ ಅವರಿಗೆ ನಾನು ಕಾಗುಣಿತ ಹೇಳಿಕೊಡುತ್ತೇನೆ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ, ನಾರಾಯಣಕುಮಾರ್ ಅವರಿಗೆ ಹೇಳುವುದಾದರೆ ಕನ್ನಡದ ಬಗ್ಗೆ ಸ್ವಾಭಿಮಾನ ಬೇಕು ಆದರೆ ದುರಭಿಮಾನ ಇರಬಾರದು.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೆ, ನನ್ನ ಭಾಷೆಯ ಬಗ್ಗೆ ನನಗೆ ಅಭಿಮಾನ ಇದೆ. ಅದನ್ನು ವೇದಾಂತ ಹೆಮ್ಮಿಗೆಯವರಿಂದ ಕಲಿಯಬೇಕಾಗಿಲ್ಲ.

(ಗೊಂದಲ)

ಛೇರ್‌ಮನ್.—ಮಾನ್ಯ ನಾರಾಯಣಕುಮಾರ್ ರವರೇ ತಾವು ತಡವಾಗಿ ಬಂದಿದ್ದೀರಿ. ತಾವು ಬರುವುದಕ್ಕೆ ಮೊದಲೇ ಮಾನ್ಯ ಮಂತ್ರಿಗಳು ನನ್ನಿಂದ ಪರವಾನಿಗೆ ಪಡೆದು ಉತ್ತರ ಪ್ರಾರಂಭ ಮಾಡಿದ್ದಾರೆ. ಆದುದರಿಂದ ಮಾನ್ಯ ಸದಸ್ಯರು ಈ ರೀತಿ ಪದೇ ಪದೇ ಹೇಳುವುದು ಸರಿಯಲ್ಲ ದಯಮಾಡಿ ಸುಮ್ಮನೆ ಕುಳಿತುಕೊಳ್ಳಬೇಕು. ಬರಗಾಲ ಪರಿಹಾರ ಸಮಿತಿಯನ್ನು ಕೂಡಲೇ ಕರೆದು, ಸ್ಥಾನೀಕ ಶಾಸಕರನ್ನು ಕೂಡ ಕರೆದು ಅವರ ಸಲಹೆಗಳನ್ನು ಪಡೆದು, ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸರ್ಕಾರ ಈಗಾಗಲೇ ಸೂಚನೆ ಕೊಟ್ಟಿದೆ. Regarding filling up of vacancies, actions would be taken by Government to fill up the vacancies in a phased manner. ಇಲ್ಲಿ ವೈಯಕ್ತಿಕವಾದ ಪ್ರಶ್ನೆಯಿಲ್ಲ. ಪರಿಸ್ಥಿತಿ ಎಲ್ಲಿ ಬಹಳ ಕಷ್ಟದಲ್ಲಿದೆಯೋ ಅಂಥ ಕಡೆ ಲೋಕೋಪಯೋಗಿ ಇಲಾಖೆ ಕೆಲಸ ಕೊಡಲಿಕ್ಕೂ ಸೂಚನೆ ಕೊಟ್ಟಿದ್ದೇವೆ. ಖಾಲಿ ಇರತಕ್ಕ ಸ್ಥಾನಗಳನ್ನು ಕೂಡಲೇ ತುಂಬಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

13. The Committee has recommended that the Land Revenue Assessment in all dry areas of the affected taluks should be remitted and that no land revenue collection should be made. It is also suggested to defer the collection of the short term and medium term co-operative loans advanced to farmers. ಈ ವಿಚಾರದಲ್ಲಿ ವಿವರಣೆ ಕೊಡುವುದು ಅವಶ್ಯಕ. ಹೋದ ವರ್ಷಕ್ಕೆ ಸಂಬಂಧಪಟ್ಟಂತೆ ಈ ಮನೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ, ಮಾನ್ಯ ಸದಸ್ಯರಾದ ಕೆ.ಹೆಚ್. ಪಾಟೀಲರು ಕೇಳಿದಂಥ ಪ್ರಶ್ನೆಗೆ ಬರಗಾಲಕ್ಕೆ ತುತ್ತಾದಂಥ ೧೫,೩೩೫ ಹಳ್ಳಿಗಳಿದ್ದು ಲ್ಯಾಂಡ್ ರೆವಿನ್ಯೂ ರೆಮಿಷನ್ ಮಾಡಿರುವ ಬಗ್ಗೆ ಹೇಳಿದ್ದೇನೆ. ೧೦,೮೨೬ ಹಳ್ಳಿಗಳಲ್ಲಿ ಪೂರ್ತಿ ರೆಮಿಷನ್ ಸಸ್ಪೆಂಡ್ ಮಾಡಲಾಗಿದೆ. ೨೩೮೪ ಹಳ್ಳಿಗಳಲ್ಲಿ ಅರ್ಧ ರೆಮಿಷನ್ ಸಸ್ಪೆಂಡ್ ಮಾಡಲಾಗಿದೆ. ಇತ್ತೀಚೆಗೆ ೧೧೦೮ ಹಳ್ಳಿಗಳಲ್ಲಿ ಸಸ್ಪೆಂಡ್ ಮಾಡಲಾಗಿದೆ. ಒಟ್ಟು ಈ ವರ್ಷ ೧೪,೦೦೦ ಚಿಲ್ಲರೆ ಹಳ್ಳಿಗಳಲ್ಲಿ ಸಸ್ಪೆಂಡ್ ಮಾಡಲಾಗಿದೆ. ಹೋದ ವರ್ಷಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಹೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟ ಸರ್ಕಾರಿ ಆಜ್ಞೆ ಹೊರಟಿದೆ. ಇನ್ನು ಸಹಕಾರೀ ಸಾಲಗಳ ಬಗ್ಗೆ ಕೂಡ ವಸೂಲಾತಿಯನ್ನು ಮುಂದಕ್ಕೆ ಹಾಕುವ ಬಗ್ಗೆ ಸಂಬಂಧಪಟ್ಟ ಮಂತ್ರಿಯವರು ಕ್ರಮ ಕೈಗೊಂಡಿದ್ದಾರೆ. ಮತ್ತೆ ಈ ವರ್ಷಕ್ಕೆ ಸಂಬಂಧಪಟ್ಟಂತೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಈ ವರ್ಷ ಎಲ್ಲೆಲ್ಲಿ ಮಳೆ ಬಂದಿಲ್ಲ, ಬೆಳೆ ಬಂದಿಲ್ಲ, ಅಂಥ ಕಡೆ ಸೂಟ್ ಬಿಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ, ಸಾಲ ವಸೂಲಿ ವಿಚಾರದಲ್ಲಿ ಈ ವರ್ಷ ಇನ್ನೂ ಸಾಲ ಕೊಡಬೇಕಾಗಿದೆ. ವಸೂಲು ಮಾಡುವ ಪ್ರಮೇಯವೇ ಇಲ್ಲ. ಈಗಾಗಲೇ ಸಾವಿರಾರು ಹಳ್ಳಿಗಳಲ್ಲಿ ಲ್ಯಾಂಡ್ ರೆವಿನ್ಯೂ ಸ್ಯೂಟ್ ಮಾಡಿದ್ದೇವೆ, Under rules wherever there is suspension and demand of recovery, action will be taken to stay the recovery of co-operative loans.

Crop cutting experiments will be got conducted expeditiously and based on the reports, further action will be taken on top priority.

14. In view of the recurring drought over the past several years, the Committee has stressed the immediate taking up of permanent relief measures like community irrigation wells, sprinkler irrigation and completion of irrigation works (Medium and Major irrigation works which come under Krishna and Cauvery basins), construction on new irrigation tanks etc.

These are very valuable suggestions and will be followed up. In fact, in the Memorandum at pages 38, 39, submitted by the State Government, the State Government has requested the Government of India, for substantial Central Assistance towards

permanent relief measures, like promotion of sprinkler/drip irrigation dry land development etc., If requisite assistance comes from the Government of India, this would be undertaken on a large scale.

15. Some of the other suggestions made by the Committee are:

(a) Provision of interest free loans to sink irrigation wells and writing them off if the wells fails.

(b) Provision of Rs. 100.00 crores to UKP per year.

(c) Prompt energisation of Irrigation wells.

(d) Proper up-keep of transformers to ensure requisite voltage.

These would be examined. In fact, in case of failed wells, there is already a provision of extending relief, subject to certain conditions.

16. While making its recommendations, the Committee hae expressed its view to provide fuuds to the extent of Rs. 200.00 crores for employment generation, 40.00 crores towards rural water supply etc., I would take this opportunity to stress that while keepirg in view the financial constrains the State Government has been making concerted efforts to take up relief works in a big way, by providing requisite funds, as and when necessary I would like to make it very clear to the Hon'ble Members that it would be ensured that finance would not be a constraint in providing adequate and timely relief to the affected people. In fact, the State Government has already released more than 36.00 Crores of Rupees during the last four to five months exclusively under scarcity heads to ensure timely relief being extended to the people, I would like to assure this House that suggestions/recommendations made by the Committee have been carefully noted by the Government. The various recommendations made would be examined very carefully. ಮಾನ್ಯ ಸಭಾಧ್ಯಕ್ಷಿಣಿಯವರೆ ಸಮಿತಿಯು ಅಲ್ಪ ಕಾಲದಲ್ಲಿಯೇ ಅಧ್ಯಯನ ಮಾಡಿ ಒಂದು ಉತ್ತಮವಾದ ವರದಿಯನ್ನು ಕೊಟ್ಟಿದೆ. ಸಮಿತಿಯವರ ಕೆಲವು ಸಲಹೆಗಳನ್ನು ಈಗಾಗಲೇ ನಾವು ಕಾರ್ಯಗತಮಾಡಿದ್ದೇವೆ, ಉಳಿದ ಸಲಹೆಗಳನ್ನು ಕೂಡ ವಾರದಲ್ಲಿಯೇ ಈ ಬಗ್ಗೆ ಇರತಕ್ಕ ಮಂತ್ರಿಮಂಡಲದ ಸಬ್ ಕಮಿಟಿಯ ಸಭೆಯನ್ನು ಕರೆದು, ಆ ಕಮಿಟಿಯ ಮುಂದೆ ವಿಚಾರವನ್ನು ಇಟ್ಟು ಆದಷ್ಟು ಬೇಗ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳತಕ್ಕ ಒಂದು ಭರವಸೆಯನ್ನು ಕೊಡಬಯಸುತ್ತೇನೆ. ಇನ್ನು ಮುಖ್ಯವಾಗಿ ಇಂದು ನಡೆದ ಚರ್ಚೆಯಲ್ಲಿ ಬಹುತೇಕ ಮಾನ್ಯ ಸದಸ್ಯರುಗಳೆಲ್ಲಾ ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಬರಗಾಲ ಪರಿಸ್ಥಿತಿ ಮೇಲಿಂದ ಮೇಲೆ ಬರುತ್ತಿದೆ. ಸರ್ಕಾರ ಪ್ರತಿ ವರ್ಷ ಹಣವನ್ನು ಖರ್ಚುಮಾಡುತ್ತಾ ಇದೆ. ಆದರೆ ಶಾಶ್ವತವಾದ ಪರಿಹಾರವನ್ನು ಒದಗಿಸತಕ್ಕ ಒಂದು ಪ್ರಯತ್ನ ನಡೆದಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಾನು ಈ ಮಾತನ್ನು ಒಪ್ಪುತ್ತಾ

ಇದ್ದೇನೆ. ಪ್ರತಿ ವರ್ಷ ಬರಗಾಲ ಬಂದಾಗ ೨೦-೩೦-೪೦-೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆ ಮಾಡುವುದು, ಕೆರೆಕಟ್ಟೆಗಳ ಕೆಲಸ ಮಾಡುವುದು ಮಾಡಿದ ಕೆಲಸವನ್ನು ಪುನಃ ಪುನಃ ಮಾಡುವುದು ಇಂತಹ ಉದಾಹರಣೆಗಳು ನಮ್ಮ ಗಮನಕ್ಕೆ ಬಂದಿವೆ. ಶಾಶ್ವತವಾದ ಪರಿಹಾರ ಆಗಬೇಕಾದರೆ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳನ್ನು ತೀವ್ರವಾಗಿ ಕಾರ್ಯಗತ ಮಾಡಬೇಕಾಗುತ್ತದೆ. ಅದು ಕಾವೇರಿ ಬೇಸಿನ್‌ನ ಯೋಜನೆಗಳು ಇರಬಹುದು. ಕೃಷ್ಣಾ ಬೇಸಿನ್‌ನ ಯೋಜನೆಗಳು ಇರಬಹುದು, ಚಿಕ್ಕ ನೀರಾವರಿ ಯೋಜನೆಗಳು ಇರಬಹುದು. ಕೆರೆಗಳು ಇರಬಹುದು, ಕಾಲುವೆಗಳು ಇರಬಹುದು. ದುರ್ದೈವದಿಂದ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಮೇಲೆ ಇದುವರೆಗೂ ಈ ವಿಚಾರದಲ್ಲಿ ನಾವು ಎಷ್ಟು ಗಮನವನ್ನು ಕೊಡಬೇಕಾಗಿತ್ತೋ ಅಷ್ಟು ಗಮನವನ್ನು ಕೊಟ್ಟಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ನಾನು ದೂಷಿಸಬೇಕೆಂದು ಹೇಳುತ್ತಿಲ್ಲ. ೧-೧೧-೧೯೫೬ರಿಂದ ೧-೧೧-೧೯೭೬ರವರೆಗೆ ಏನು ಕೆಲಸ ಕಾರ್ಯಗಳನು ಮಾಡಬೇಕಾಗಿತ್ತೋ ಅದು ಸಾಕಷ್ಟು ಆಗಿಲ್ಲ. ನಾವು ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ತಮಿಳು ನಾಡು ರಾಜ್ಯಗಳಂತೆ ಕೆಲಸ ಮಾಡಬೇಕಾಗಿತ್ತು. ಕಟ್ಟಡಗಳಿಗಾಗಿ, ರಸ್ತೆಗಳಿಗಾಗಿ ಹಣವನ್ನು ವೆಚ್ಚ ಮಾಡಲಾಗಿದೆ. ಪಕ್ಕದ ರಾಜ್ಯಗಳಂತೆ ವಿಶೇಷವಾದ ರೀತಿಯಲ್ಲಿ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದರೆ ಇಂದು ನಾವು ಈ ಕಷ್ಟಕಾಲವನ್ನು ಎದುರಿಸತಕ್ಕ ಅವಶ್ಯಕತೆ ಇರಲಿಲ್ಲ ಎನ್ನುವ ಭಾವನೆ ನನಗೆ ಇದೆ ಹಿಂದೆ ಆಗಿ ಹೋದ ಮಾತನ್ನು ಈಗ ಹೇಳಿ ಪ್ರಯೋಜನವಿಲ್ಲ. ಅಂದರೆ ಈ ದಿಶೆಯಲ್ಲಿ ಹಿಂದಿನವರು ದಿಟ್ಟ ಹೆಜ್ಜೆಯನ್ನು ಇಡಬೇಕಾಗಿತ್ತು. ಅನೇಕ ಸದಸ್ಯರುಗಳು ಎಲ್ಲಾ ಕೆಲಸವನ್ನು ನಿಲ್ಲಿಸಿ ಶಾಶ್ವತವಾಗಿ ಅನುಕೂಲವಾಗುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಅದೇರೀತಿ ವಿದ್ಯುತ್ ಮತ್ತು ನೀರಾವರಿ ಯೋಜನೆಗಳಿಗಾಗಿ ಹಣವನ್ನು ಖರ್ಚು ಮಾಡತಕ್ಕ ವಿಚಾರದಲ್ಲಿ ಸರ್ಕಾರ ಈ ದಿಶೆಯಲ್ಲಿ ಆಲೋಚನೆ ಮಾಡುತ್ತಿದೆ. ಇಂದು ಮಾನ್ಯ ಸದಸ್ಯರಿಗೆ ಒಂದೆರಡು ವಿಚಾರಗಳನ್ನು ಮಾತ್ರ ಹೇಳಬಯಸುತ್ತಿದ್ದೇನೆ. ಈ ಸಲ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದಂತಹ ಬಡ್ಜೆಟ್‌ನಲ್ಲಿ ಮತ್ತು ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಯಾವ್ಯಾವ ನೀರಾವರಿ ಯೋಜನೆಗಳು ಕುಂಠಿತವಾಗಿವೆ, ಅವುಗಳ ಹೆಸರು ಕೂಡ ಇರಲಿಲ್ಲ. ಕೆಲವು ಯೋಜನೆಗಳಿಗೆ ಪ್ಲಾನಿಂಗ್ ಇಲಾಖೆಯ ಕ್ಲಿಯರೆನ್ಸ್ ಸಿಕ್ಕಿಲ್ಲ, ಯಾವ ಯೋಜನೆಗಳು ಬಡ್ಜೆಟ್ ಭಾಷಣದಲ್ಲಿ ಪ್ರಸ್ತಾಪವಾಗಿರಲಿಲ್ಲ ಅಂತಹ ಯೋಜನೆಗಳನ್ನು ಈ ಸಲ ಯೋಜನಾ ಇಲಾಖೆ ಒಪ್ಪಿದೆ. ಅವುಗಳನ್ನೆಲ್ಲಾ ಬಡ್ಜೆಟ್‌ನಲ್ಲಿ ಸೇರಿಸಿದ್ದು ಆಗಿದೆ. ಟೋಕನ್ ಗ್ರಾಂಟನ್ನು ಮಾತ್ರ ಕೊಟ್ಟಿದ್ದೇವೆ. ಒಪ್ಪಿಗೆ ಕೊಟ್ಟಿರತಕ್ಕದ್ದು ಅಪ್ಪರ್ ಕೃಷ್ಣಾದ ಹಿಪ್ಪರಗಿ, ತುಂಗಭದ್ರಾ, ಅಪ್ಪರ್ ಭದ್ರಾ ಅದು ಯಾವುದೇ ಇರಬಹುದು ಅದನ್ನು ಇಷ್ಟಕ್ಕೆ ಬಿಟ್ಟಿಲ್ಲ ಮಾನ್ಯ ಮುಖ್ಯಮಂತ್ರಿಗಳು, ನೀರಾವರಿ ಮಂತ್ರಿಗಳು ನಾನು ಕೂಡ ಕೇಂದ್ರದ ನೀರಾವರಿ ಮಂತ್ರಿಗಳಾದ ಮಾನ್ಯ ಶಂಕರಾನಂದರವರ ಜೊತೆಗೆ ಮೊದಲ ಸುತ್ತಿನ ಮಾತುಕತೆಗಳನ್ನು ಆಡಿದ್ದೇವೆ. ಈ ಬಗ್ಗೆ ವಿವರವಾಗಿ ಚರ್ಚೆಯಾಗಿದೆ. ಅವರು ಈ ಯೋಜನೆಗಳಿಗೆ ಹಣವನ್ನು ಒದಗಿಸುವ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಅವರ ಜೊತೆಯಲ್ಲಿ ಪುನಃ ಚರ್ಚೆ ಮಾಡುವುದಕ್ಕೆ ಒಪ್ಪಿದ್ದಾರೆ. ನಾವೆಲ್ಲಾ ಸೇರಿ ಯೋಜನಾ ಆಯೋಗದ ಮೇಲೆ ಒಂದು ರೀತಿಯ ಪರಿಣಾಮಕಾರಿಯಾದ ರೀತಿಯಲ್ಲಿ ಒತ್ತಾಯ ಮಂಡಿಸಿದ್ದೇವೆ. ಈ ಯೋಜನೆಗಳಿಗೆ ಹಣವನ್ನು ಪಡೆದುಕೊಂಡು ಆದಷ್ಟು ಬೇಗ ಈ ಯೋಜನೆಗಳನ್ನು ಕಾರ್ಯಗತ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ, ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತಿದ್ದೇನೆ.

ಇನ್ನು ಮಾನ್ಯ ಸದಸ್ಯರುಗಳು ಮತ್ತೊಂದು ವಿಚಾರವನ್ನು ಎತ್ತಿದ್ದಾರೆ. ದನಕರುಗಳಿಗೆ ಮೇವು ಒದಗಿಸುವ ಬಗ್ಗೆ ಹೇಳಿದ್ದಾರೆ. ಅದನ್ನು ನಾನು ಇಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ದನಕರುಗಳ ಸಂಪತ್ತು ಏನಿದೆ ಅವುಗಳ ಮೇವಿಗೆ ಜನರು ಭಯಾನಕ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಮಾನ್ಯ ಸದಸ್ಯರಾದ ಕೆ. ಎಚ್. ಪಾಟೀಲರು ಹೇಳಿದ್ದಾರೆ, ನಾನು ಗದಗ್ ತಾಲ್ಲೂಕುನಲ್ಲಿ ನೋಡಿದ್ದೇನೆ. ನಾಲ್ಕೈದು ಕಡೆ ಬರಗಾಲ ಕಾಮಗಾರಿ ಕೆಲಸಗಳನ್ನು ಮಾಡುತ್ತಿದ್ದರು. ಅಲ್ಲಿಯ ರೈತರು ಹೇಳಿದರು ನಮಗೇನೋ ಮಾಡಲಿಕ್ಕೆ ಕೆಲಸ ಸಿಕ್ಕಿದೆ, ಆದರೆ ತಾವು ಬಂದು ನೋಡಿ ನಮ್ಮ ಮನೆಯಲ್ಲಿ ೮-೧೦ ಎತ್ತುಗಳು ಇವೆ, ನಾವು ಅವುಗಳಿಗೆ ಮೇವನ್ನು ಎಲ್ಲಿಂದ ತರುವುದು ಎಂದು ಕೇಳಿದ್ದರು. ನಾನು ಸ್ವತಃ ಅದನ್ನು ನೋಡಿದ್ದೇನೆ. ಇದೇರೀತಿ ಬೇರೆ ಬೇರೆ ಜಿಲ್ಲೆಗಳಲ್ಲಿರತಕ್ಕ ವಿಚಾರಗಳು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ನಾವು ಆದೇಶವನ್ನು ಕೊಟ್ಟಿದ್ದೇವೆ. ಒಂದು ಕೋಟಿ ರೂಪಾಯಿ ಹಣವನ್ನು ಮೇವಿಗಾಗಿ ಕೊಟ್ಟರೆ ೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದಾರೆ. ನಿಮ್ಮ ಜಿಲ್ಲಾಧಿಕಾರಿಗಳ ಹತ್ತಿರ ಹಣವಿದೆ ಹಣ ಕೊಟ್ಟರೂ ಮೇವು ಇಲ್ಲ. ಇತ್ತೀಚೆಗೆ ರೈತರು

ಕೂಡ ಹಣ ಬರುವ ದೃಷ್ಟಿಯನ್ನು ಇಟ್ಟುಕೊಂಡು ಮನಿ ಕ್ರಾಪ್ಸ್‌ಗಳನ್ನು ಅವರೆ ಹೆಚ್ಚಿಗೆ ಹಣ ಬರತಕ್ಕ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ರೈತರು ಹತ್ತಿ, ಕಬ್ಬು ಈ ತರಹ ಬೆಳೆಗಳನ್ನು ಬೆಳೆಯುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ವರದಿ ಪ್ರಕಾರ ಸಂಬಂಧಪಟ್ಟ ಆ ಗೌರ್ನ್‌ಮೆಂಟ್ ಆರ್ಡರ್ ಜಿಲ್ಲಾಧಿಕಾರಿಗಳಿಗೆ ಬಂದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ತಪ್ಪು ಮಾಡಿದ್ದಾರೆ, ಹಣವನ್ನು ಕೊಟ್ಟಿದ್ದೇವೆ. ಅದರ ಬಗ್ಗೆ ಸರ್ಕಾರದ ಆದೇಶವಿದೆ. ಆದರೆ ಮೇವು ಸಿಗುತ್ತಿಲ್ಲ. ಬೇರೆ ರಾಜ್ಯಗಳ ಜೊತೆಯಲ್ಲಿ ಸಮಾಲೋಚನೆ ಮಾಡುತ್ತಿದ್ದೇವೆ. ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಆದಷ್ಟುಬೇಗ ದನಕರುಗಳಿಗೆ ಮೇವು ತರಲಿಕ್ಕೆ ಪ್ರಯತ್ನ ಮಾಡುತ್ತೇವೆ, ಮೇವು ಕೊಡುತ್ತೇವೆ. ಮಾನ್ಯ ಬಂಗಾರಪ್ಪನವರು ಒಂದು ಮಾತನ್ನು ಹೇಳಿದ್ದಾರೆ. ನಾನು ಕೂಡ ಆ ಮಾತನ್ನು ಒಪ್ಪುತ್ತೇನೆ. ರಾಜ್ಯದಲ್ಲಿರತಕ್ಕ ಕೆಲವು ಪ್ರದೇಶಗಳಲ್ಲಿ ರೈತರ ಹತ್ತಿರ ಮೇವು ಇದೆ. ಎಲ್ಲೆಲ್ಲಿ ನೀರಾವರಿ ಪ್ರದೇಶವಿದೆ ಅಲ್ಲೆಲ್ಲಾ ಮೇವು ಸಿಗುತ್ತದೆ. ಅಂತಹ ರೈತರನ್ನು ನಾನು ಈ ಮನೆಯ ಮೂಲಕ ಮನವಿ ಮಾಡಿಕೊಳ್ಳುತ್ತೇನೆ, ತಾವು ತಮ್ಮ ಸಹೋದರರಿಗೆ ಸಹಾಯ ಮಾಡಿ, ರೈತರು ಪುಕ್ಕಟೆ ಮೇವನ್ನು ಕೊಡುತ್ತಿದ್ದಾರೆ. ಕಳೆದ ಸಲ ಮಂಡ್ಯಾ ಜಿಲ್ಲೆಯಲ್ಲಿ ೫೦೦ ಲಾರಿ ಹುಲ್ಲನ್ನು ಶಾಸಕರಾದ ದೊಡ್ಡಬೋರೇಗೌಡರು ಸಹಕಾರ ಕೊಟ್ಟಿದ್ದರಿಂದ ಒಂದೇ ದಿವಸದಲ್ಲಿ ತಂದಿದ್ದೇವೆ. ಈ ಮನೆಯ ಸದಸ್ಯರಲ್ಲೂ ಕೂಡ ವಿನಯದಿಂದ ಕೇಳಿಕೊಳ್ಳುತ್ತೇನೆ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಎಲ್ಲೆಲ್ಲಿ ಮೇವು ಇದೆ ಅದನ್ನು ಕೊಡಲಿಕ್ಕೆ ತಾವು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಎಂ. ಎಸ್. ನಾರಾಯಣರಾವ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇದರ ಬಗ್ಗೆ ಹೆಚ್ಚಿನ ಪ್ರಚಾರ ಮಾಡೋಣ. ರೈತರಲ್ಲಿ ಮನವಿ ಮಾಡಿಕೊಳ್ಳೋಣ ಪ್ರಯತ್ನ ಮಾಡಿದರೆ ಹೆಚ್ಚಿನ ರೀತಿಯಲ್ಲಿ ಮೇವು ದೊರಕುತ್ತದೆ. ಅವರಿಗೆ ಒಂದು ರೀತಿಯ ಮನವರಿಕೆಯಾಗಿದೆ. ಆದರೆ ನಮ್ಮ ಅಧಿಕಾರಿಗಳು ಅವರ ಹತ್ತಿರ ಹೋಗುವುದಿಲ್ಲ. ನಾವೂ ಕೂಡ ಅವರ ಹತ್ತಿರ ಹೋಗುವುದಿಲ್ಲ. ಆದ್ದರಿಂದ ಅಧಿಕಾರಿಗಳು ರೈತರ ಹತ್ತಿರ ಹೋಗಬೇಕೆಂಬ ಸೂಚನೆಯನ್ನು ಕೊಡುತ್ತೇನೆ. ಎಲ್ಲೆಲ್ಲಿ ಮೇವು ಸಿಕ್ಕುತ್ತದೆ, ಅಂತಹ ಕಡೆಗಳಲ್ಲೆಲ್ಲಾ ರೈತರ ಬಳಿಗೆ ನಮ್ಮ ಅಧಿಕಾರಿಗಳು ಹೋಗಬೇಕು. ಪರಿಸ್ಥಿತಿಯನ್ನು ಅವರಲ್ಲಿ ವಿವರಿಸಬೇಕು. ಅದಕ್ಕೊಪ್ಪಿ ಆ ರೈತರು ಒಂದು ವೇಳೆ ಪುಕ್ಕಟೆಯಾಗಿ ಮೇವನ್ನು ಕೊಡುವುದಾದರೆ ಸಂತೋಷ, ಆ ರೀತಿ ಕೊಡದಿದ್ದರೆ ಅದಕ್ಕೆ ಹಣವನ್ನು ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಸರ್ಕಾರದಲ್ಲಿ ಅದಕ್ಕಾಗಿ ಕೊಡಲು ಹಣ ಇದೆ. ಅಧಿಕಾರಿಗಳು ಈ ಒಂದು ಕೆಲಸವನ್ನು ಕಡ್ಡಾಯವಾಗಿ ಮಾಡಬೇಕು. ಜೊತೆಗೆ ನಮ್ಮ ಎಲ್ಲ ಶಾಸಕರ ಸಹಕಾರವನ್ನೂ ಕೂಡ ನಾನು ಕೇಳುತ್ತಿದ್ದೇನೆ. ಮುಂದಿನ ವರ್ಷ ಏನು ಮಾಡಬೇಕೆಂಬುದರ ಬಗ್ಗೆ ನಮ್ಮ ಮನವಿಯಲ್ಲೇ ವಿವರಗಳನ್ನು ಕೊಟ್ಟಿದ್ದೇವೆ. ಆದರೆ ಈ ವರ್ಷದ ಮಟ್ಟಿಗೆ ನಮ್ಮ ರಾಜ್ಯದಲ್ಲಿರತಕ್ಕ ರೈತರಿಂದ ಮೇವನ್ನು ಶೇಖರಿಸುತ್ತೇವೆ. ಎಲ್ಲೆಲ್ಲಿ ಮೇವು ಸಿಕ್ಕುತ್ತದೆ ಅದನ್ನು ತಂದು ಉಚಿತವಾಗಿ ರೈತರಿಗೆ ಹಂಚತಕ್ಕ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದೂ ಸಾಲದಿದ್ದರೆ ಪಕ್ಕದ ರಾಜ್ಯಗಳಿಂದ ಕೂಡ ಮೇವನ್ನು ತಂದು ರೈತರಲ್ಲಿರುವ ಜಾನುವಾರುಗಳಿಗೆ ಮೇವನ್ನು ಒದಗಿಸಲು ರೈತರ ಸಮಸ್ಯೆಯನ್ನು ಬಹಳ ಮಟ್ಟಿಗೆ ಪರಿಹರಿಸಲು ಸರ್ಕಾರ ತನ್ನ ಎಲ್ಲ ಪ್ರಯತ್ನವನ್ನೂ ಮಾಡುತ್ತದೆಂಬ ಇಚ್ಛೆಯನ್ನು ವ್ಯಕ್ತಮಾಡುತ್ತಿದ್ದೇನೆ.

ಮತ್ತೆ ಕುಡಿಯುವ ನೀರಿನ ಬಗ್ಗೆ ಹೇಳಿದ್ದಾರೆ. ಅದರಲ್ಲೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಸಾಕಷ್ಟು ಹಾಕಿದ್ದೇವೆ, ಇನ್ನೂ ಕೊಳವೆ ಬಾವಿಗಳನ್ನು ಹಾಕಬೇಕಾಗುತ್ತದೆ. ಇಂತಹ ಒಂದು ಸಮಸ್ಯೆ ಬರೀ ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರವಲ್ಲ. ಪಟ್ಟಣಗಳಲ್ಲೂ ಇದೇ ಸಮಸ್ಯೆ ಇದೆ. ಅದರಲ್ಲಿ ಹಿಂದೆ ಯಾವ ಕಾರಣಕ್ಕಾಗಿ ಮಾಡಿದ್ದಾರೋ ಗೊತ್ತಿಲ್ಲ. ೭ ಸಾವಿರ ಜನಸಂಖ್ಯೆ ಇರತಕ್ಕಂತಹ ಒಂದು ಊರನ್ನು ಪುರಸಭೆಗಳನ್ನಾಗಿ ಮಾಡಿದ್ದಾರೆ. ಅರ್ಬನ್ ಏರಿಯಾದಲ್ಲಿ ೧೦ ಸಾವಿರ ಜನಸಂಖ್ಯೆ ಇರತಕ್ಕಂತಹ ಊರುಗಳನ್ನು ಪುರಸಭೆಗಳನ್ನಾಗಿ ಮಾಡಿದ್ದಾರೆ. ಇದು ಒಂದು ತಪ್ಪು ಕಲ್ಪನೆಯಿಂದ ಮಾಡಿದ್ದಾರೆಂದು ನನಗನ್ನಿಸುತ್ತದೆ. ೨೦ ಸಾವಿರ ಜನಸಂಖ್ಯೆಗಿಂತ ಕಡಿಮೆ ಇರತಕ್ಕ ಯಾವುದೇ ನಗರ ಕೂಡ ನಗರಸಭೆಗಳಾಗುವುದು ಅಷ್ಟೊಂದು ಸೂಕ್ತವಲ್ಲ. ಅದರಿಂದ ನಮಗೇ ಬಹಳ ನಷ್ಟ. ಇವತ್ತು ೨೦ ಅಂಶದ ಕಾರ್ಯಕ್ರಮಗಳಲ್ಲಿ ಏನೇನು ಸೌಕರ್ಯಗಳು

ಸಿಕ್ಕುತ್ತವೆಯೋ, ಅವು ಹರಿಜನ-ಗಿರಿಜನರಿಗೆ ಹಾಗೂ ಬಡವರಿಗೆ, ಯಾರು ಇಂತಹ ನಗರಗಳಲ್ಲಿರುತ್ತಾರೆ. ಅವರಿಗೆ ಈ ಒಂದು ಅನುಕೂಲ ಸಿಕ್ಕುತ್ತಿಲ್ಲ. ಆದ್ದರಿಂದ ಈ ಸಮಸ್ಯೆಯ ಬಗ್ಗೆ ಸರ್ಕಾರ ಗಮನಹರಿಸಿ ಹೋದ ವರ್ಷ ಅವರಿಗಾಗಿ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅನೇಕ ನಗರಗಳಲ್ಲಿ ಕೊಳವೆ ಬಾವಿಗಳನ್ನು ಹಾಕಿದ್ದೇವೆ. ಪುನಃ ಒಂದೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನಗರಸಭೆಗಳಲ್ಲಿ ವಿಶೇಷವಾಗಿ ಎಲ್ಲೆಲ್ಲಿ ಈ ರೀತಿಯ ಸಮಸ್ಯೆ ಇದೆ, ಅಂತಹ ಕಡೆ ಕೊಳವೆ ಬಾವಿಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ಗದಗಿನ ವಿಚಾರವನ್ನು ಹೇಳಿದ್ದಾರೆ. ಅದೇ ರೀತಿ ಬೇರೆ ಬೇರೆ ಸದಸ್ಯರು ಬೇರೆ ಬೇರೆ ವಿಚಾರಗಳನ್ನು ಹೇಳಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಗದಗಿನ ವಿಚಾರದಲ್ಲಿ ಎರಡು-ಮೂರು ಸಾರಿ ರೆಫರೆನ್ಸ್ ಮಾಡಿದ್ದೇನೆ. ಈಗಾಗಲೇ ಯೋಜನೆ ನಡೆಯುತ್ತಿದೆ. ೨ ಕೋಟಿ ರೂಪಾಯಿಗಳನ್ನು ಎಲ್. ಐ. ಸಿ. ಯಿಂದ ರಿಲೀಸ್ ಮಾಡಿಕೊಂಡಿದ್ದಾರೆ. ಒಂದು ಕೋಟಿ ರೂಪಾಯಿಗಳನ್ನು ರಾಜ್ಯದ ಹಣದಿಂದ ಅದಕ್ಕಾಗಿ ಪ್ರೊವೈಡ್ ಮಾಡಿದ್ದಾರೆ. ಇಷ್ಟರಿಂದಲೇ ಅದು ಆಗುವುದಿಲ್ಲ. ರಸ್ತೆ ಮಾಡುವುದಕ್ಕಾಗಿ, ಹಾಗೂ ಕೆರೆಯ ಹೂಳನ್ನು ತೆಗೆಯುವುದಕ್ಕೆ ಹಣವನ್ನು ಖರ್ಚು ಮಾಡುವುದಕ್ಕೆ ಬದಲಾಗಿ ಅದೇ ಹಣದಿಂದ ಈ ಪೈಪುಗಳನ್ನು ಹಾಕುವ ಕಾಲುವೆಯನ್ನು ಉದ್ದಕ್ಕೂ ತೆಗೆಸಿಬಿಟ್ಟರೆ ಬರೀ ಪೈಪು ಹಾಕುವ ಕೆಲಸ ಮಾತ್ರ ಉಳಿಯುತ್ತದೆ. ಈಗ ಪೈಪು ಬರುವಂತಹ ಆ ಜಾಗದಲ್ಲಿ ಎಲ್ಲೂ ಹಸಿರು ಇಲ್ಲ, ಜನರು ಯಾರೂ ಅಡ್ಡಿ ಮಾಡುವುದಿಲ್ಲ. ಸುಲಭದಲ್ಲಿ ಕೆಲಸ ಆಗಿಹೋಗಿ ಬಿಡುತ್ತದೆ. ಆದುದರಿಂದ ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಶ್ರೀಮಾನ್ ಮಲ್ಲಿಕಾರ್ಜುನ್ ಖರ್ಗೆಯವರು ಬಹಳ ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಿದ್ದೀರಿ. ಇದಕ್ಕೂ ಮೊದಲು ಮಾತನಾಡಿದಂತಹ ಬಹುತೇಕ ಸದಸ್ಯರು ಸಮಸ್ಯೆಯನ್ನು ಯಾವಾಗ ನಿವಾರಣೆ ಮಾಡಬೇಕೆಂಬುದರ ಬಗ್ಗೆ ಹೇಳಿದ್ದಾರೆ. ಶ್ರೀಮಾನ್ ಖರ್ಗೆಯವರು ಕೊಟ್ಟಿರತಕ್ಕಂಥ ವರದಿಯಲ್ಲಿ ಏನೇನು ಕೊಟ್ಟಿದ್ದಾರೆ ಅದರ ಬಗ್ಗೆ ಒಂದೊಂದಕ್ಕೂ ಉತ್ತರವನ್ನು ಕೊಡಿ. ಎಲ್ಲಿಯವರೆಗೆ ಸರ್ಕಾರ ಆ ವರದಿಯನ್ನು ಒಪ್ಪುತ್ತದೆ, ಅವನ್ನು ಅನುಷ್ಠಾನಕ್ಕೆ ತರುತ್ತದೆಂಬುದನ್ನು ಹೇಳಿ. ನಂತರ ಇನ್ಯಾವುದನ್ನು ನಿಮ್ಮಿಂದ ಮಾಡುವುದಕ್ಕೆ ಆಗುವುದಿಲ್ಲ, ಎಂಬುದನ್ನೂ ಹೇಳಿ. ಸದನದ ಸಮಿತಿಯನ್ನು ಎಲ್ಲ ಕಡೆಗೆ ಕಳುಹಿಸಿ ಎಂಬುದಾಗಿ ನಾವು ಹಿಂದೆ ಏನು ಸಲಹೆ ಮಾಡಿದ್ದೆವು, ಅದರಂತೆ ಸರ್ಕಾರ ಸದನದ ಸಮಿತಿಯನ್ನು ರಾಜ್ಯದ ಎಲ್ಲ ಕಡೆಗೆ ಕಳುಹಿಸಿ ಏನು ವಸ್ತುಸ್ಥಿತಿ ಇದೆ ಎಂಬುದನ್ನು ತಿಳಿದುಕೊಂಡಿದೆ, ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ವರದಿಯನ್ನು ಎಲ್ಲಿಯವರೆಗೆ ಒಪ್ಪಿಕೊಳ್ಳುತ್ತೀರಿ ಎಂಬುದನ್ನು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲದಕ್ಕೂ ಉತ್ತರ ಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಫ್ಯಾಮಿನ್ ರಿಲೀಫ್‌ನಲ್ಲಿ ೧೦೦ ದಿವಸ ಕೆಲಸವನ್ನು ಎಲ್ಲರಿಗೂ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಅದಕ್ಕಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾರ್ಚಿ ೩೧ನೇ ತಾರೀಖಿನವರೆಗೂ ಕೊಡಬೇಕಾಗುತ್ತದೆಂದು ಹೇಳಿದ್ದೇನೆ. ಎಲ್ಲಿಯವರೆಗೆ ಈ ಬರಗಾಲದ ಪರಿಸ್ಥಿತಿ ಮುಂದುವರಿಯುತ್ತದೆಯೋ ಅಲ್ಲಿಯವರೆವಿಗೂ ಜನರಿಗೆ ಕೆಲಸಗಳನ್ನು ನಾವು ಕೊಡಬೇಕಾಗುತ್ತದೆ. ಇನ್ನೊಂದು ವಿಚಾರದಲ್ಲಿ ಈ ಸದನದಲ್ಲಿ ತಿಳಿಸಿದರೆ ತಪ್ಪಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಬರಗಾಲದ ಮೇಲೆ ಚರ್ಚೆ ನಡೆದಿದೆ, ಅದು ಕಂದಾಯ ಇಲಾಖೆಗೆ ಸಂಬಂಧಪಟ್ಟದ್ದು, ನನ್ನ ಇಲಾಖೆಗೆ ಸಂಬಂಧಪಟ್ಟಂತೆ ನನ್ನ ಇತಿಮಿತಿಗೆ ಸಂಬಂಧಪಟ್ಟಹಾಗೆ ಮಾತ್ರ ನಾನು ಇಲ್ಲಿ ಉತ್ತರ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರು ಮಾತನಾಡುವಾಗ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅನೇಕ ಜನ ಸದಸ್ಯರು ಮೇಜರ್ ಮತ್ತು ಮೈನರ್ ಇರಿಗೇಷನ್ ವಿಚಾರವನ್ನು ಹೇಳಿದ್ದಾರೆ. ಆದರೆ ನನ್ನ ಇತಿಮಿತಿಯಲ್ಲಿ ಇದಕ್ಕೆ ಉತ್ತರ ಹೇಳಬೇಕಾಗುತ್ತದೆ. ಹಿಂದೆ ಮಾಡಿದಂತಹ ಪರಿಹಾರ ಕೆಲಸವನ್ನೇ ಈಗಲೂ ಮಾಡುವುದು ಬೇಡ. ಶಾಶ್ವತವಾದ ಪರಿಹಾರದ ಕೆಲಸವನ್ನು ಮಾಡೋಣ. ಗದಗಿನ ವಿಚಾರವನ್ನು ಹೇಳಿದ್ದಾರೆ. ಸ್ಕೇರ್‌ಸಿಟಿ ಕಂಡೀಷನ್ ಹಣದಲ್ಲಿ ಕಾಲುವೆಯನ್ನು ತೆಗೆಸತಕ್ಕಂತಹ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು. ಮಾನ್ಯ ಮೊಯ್ಲಿಯವರಿಗೆ ಗೊತ್ತಿದೆ. ೧೯೮೦ನೇ ಇಸವಿ

ಯಲ್ಲಿ ಬರಗಾಲಕ್ಕೆ ಒದಗಿಸಿದಂತಹ ಹಣವನ್ನು ಯಾವ ರೀತಿ ಖರ್ಚು ಮಾಡಬೇಕೆಂಬುದರ ಬಗ್ಗೆ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಇದೆ. ನನ್ನ ಅಭಿಪ್ರಾಯದಲ್ಲಿ ಆ ಒಂದು ಗೈಡ್‌ಲೈನ್ಸ್ ಅನ್ನು ರಿವೈಸ್ ಮಾಡಬೇಕು. ಆ ಒಂದು ಗೈಡ್‌ಲೈನ್ಸ್ ಪ್ರಕಾರ ಸಾಯಿಲ್ ಕನ್ಸರ್‌ವೇಸನ್ನಿನ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದರೆ ಅದರಿಂದ ಜನರಿಗೆ ಕೆಲಸಗಳನ್ನು ಕೊಡುವುದಕ್ಕಾಗುವುದಿಲ್ಲ. ಒಣ ಬೇಸಾಯ ಪದ್ಧತಿ ಎಲ್ಲೆಲ್ಲಿ ಇದೆಯೋ ಅಲ್ಲಿ ಸಾಯಿಲ್ ಕನ್ಸರ್ವೇಸನ್ ಕೆಲಸ ಮಾಡುವುದು ಉತ್ತಮ ವಾದುದು. ಆದರೆ ಬರಗಾಲ ಕಾಮಗಾರಿಯಲ್ಲಿ ಆ ಕೆಲಸವನ್ನು ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಒಂದು ಮಾತನ್ನು ಈ ಸದನದಲ್ಲಿ ಹೇಳಬಯಸುತ್ತೇನೆ. ಕೇಂದ್ರದ ಕೃಷಿ ಸಚಿವರಾಗಿರತಕ್ಕಂತಹ ಸನ್ಮಾನ್ಯ ಶ್ರೀ ಬೂಟಾಸಿಂಗ್‌ರವರನ್ನು ನಾನು ಭೇಟಿಯಾಗಿದ್ದೆ ಅವರಲ್ಲಿ ಈ ವಿಚಾರವನ್ನು ಹೇಳಿದಾಗ ಅವರೂ ಹೇಳಿದರು ಈ ಒಂದು ಗೈಡ್‌ಲೈನ್ಸ್ ಏನಿದೆ ಅದನ್ನು ರಿವೈಸ್ ಮಾಡಬೇಕಾಗಿದೆ. ಬರಗಾಲಕ್ಕಾಗಿ ಖರ್ಚು ಮಾಡದ ಹಣ ಪರ್ಮನೆಂಟ್ ಅಸೆಟ್ ಆಗಬೇಕು. ವರ್ಷೇ ವರ್ಷೇ ಬರಗಾಲದ ಪ್ರದೇಶಗಳು ಕಡಿಮೆಯಾಗುವ ರೀತಿಯಲ್ಲಿ ನಾವು ಹಣವನ್ನು ಖರ್ಚು ಮಾಡಬೇಕೆಂಬುದಾಗಿ ಸ್ಪಷ್ಟವಾಗಿ ಹೇಳಿದರು. ಪ್ರಧಾನ ಮಂತ್ರಿಗಳೂ ಕೂಡ ಇದೇ ವಿಚಾರವನ್ನು ಹೇಳಿದ್ದಾರೆ. ಒರಿಸ್ಸಾ ಹಾಗೂ ರಾಜಸ್ಥಾನ್ ರಾಜ್ಯಗಳಲ್ಲಿ ಅವರು ಪ್ರವಾಸ ಮಾಡಿದಾಗ ಬರಗಾಲ ಕ್ಕಾಗಿ ಇದುವರೆವಿಗೂ ಖರ್ಚು ಮಾಡಿದ ಹಣವೆಲ್ಲಾ ಪೋಲಾಗಿದೆ, ಯಾವ ಉದ್ದೇಶಕ್ಕಾಗಿ ಹಣವನ್ನು ಖರ್ಚು ಮಾಡಲಾಗಿದೆಯೋ ಆ ಒಂದು ಉದ್ದೇಶ ಸಾಧನೆಯಾಗಿಲ್ಲ ಎಂಬ ಸೂಚನೆಯನ್ನು ಪ್ರಧಾನ ಮಂತ್ರಿಗಳೇ ಕೊಟ್ಟಿದ್ದಾರೆ, ಎನ್ನುವ ಮಾತನ್ನು ಶ್ರೀ ಪಾನ್ ಬೂಟಾಸಿಂಗ್ ಅವರೇ ನಮಗೆ ಹೇಳಿದರು. ಇರತಕ್ಕ ಗೈಡ್‌ಲೈನ್ ರಿವೈಸ್ ಆಗಬೇಕೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಅವಶ್ಯ ಬಂದರೆ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಮುಂದೆ ಬರತಕ್ಕ ನ್ಯಾಷನಲ್ ಡೆವಲಪ್ ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಈ ವಿಚಾರವನ್ನು ಆ ಒಂದು ಸಭೆಯಲ್ಲಿ ಕೈಗೆತ್ತಿಕೊಳ್ಳಬೇಕೆಂಬ ಸಲಹೆಯನ್ನು ಕೊಡುತ್ತಿದ್ದೇನೆ. ಕೊನೆಗೆ ಯೋಜನಾ ಆಯೋಗದ ವರು ಒಪ್ಪಿಗೆ ಕೊಡಬೇಕಾಗುತ್ತದೆ. ಯೋಜನಾ ಆಯೋಗದ ಮುಂದೆ ಈ ವಿಚಾರವನ್ನು ಇಡುವುದಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. ಇದುವರೆವಿಗೂ ಏನು ಹಣವನ್ನು ಬಿಡುಗಡೆ ಮಾಡಲಾಗಿದೆ, ಅದು ಸಾಲದು ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ.—೧,೩೦,೦೦೦ ಪ್ರಜಾಸಂಖ್ಯೆ ಇರತಕ್ಕಂತಹ ಎರಡು ಪ್ರದೇಶಗಳು ನನ್ನ ಕ್ಷೇತ್ರದಲ್ಲಿವೆ. ಅವು ಒಂದನೆಯದು ಎಚ್.ಎ.ಎಲ್. ಸ್ಯಾನಿಟರಿ ಬೋರ್ಡ್ ಹಾಗೂ ಐ.ಟಿ.ಐ. ಅಲ್ಲಿ ಯಾವ ಕಾರಣದಿಂದಲೋ ಏನೋ ಸರ್ಕಾರ ಹಣವನ್ನು ಬಿಡುಗಡೆ ಮಾಡಿಲ್ಲ. ಅಲ್ಲಿ ಕುಡಿಯುವ ನೀರಿನ ತೊಂದರೆ ವಿಪರೀತವಾಗಿದೆ. ವಿಶೇಷವಾಗಿ ಆ ಒಂದು ತೊಂದರೆಯನ್ನು ನಿವಾರಣೆ ಮಾಡು ವುದಕ್ಕೆ ಮಾನ್ಯ ಮಂತ್ರಿಗಳಿಂದ ನೇರವಾದ ಉತ್ತರ ನನಗೆ ಬೇಕಾಗಿದೆ. ತೊಂದರೆಯನ್ನು ಬಗೆ ಹರಿಸದಿದ್ದರೆ, ಆ ಜನರ ತೊಂದರೆ ಕಣ್ಣೀರಾಗಿ ಮುಂದುವರಿಯುತ್ತದೆ. ತಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನು ಕೊಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅನೇಕ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳ ಬಗ್ಗೆ ಹೇಳಿ ದ್ದಾರೆ. ಎಲ್ಲದರ ಬಗ್ಗೆಯೂ ನೇರವಾಗಿ ನಾನು ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ನಗರ ಪ್ರದೇಶಗಳಲ್ಲೂ ಕುಡಿಯುವ ನೀರಿನ ವಿಚಾರದಲ್ಲಿ ತೊಂದರೆಯಾಗುತ್ತಿದೆ ಎಂಬುದನ್ನು ಹೇಳಿದ್ದಾರೆ.

ಶ್ರೀ ಎ. ಕೃಷ್ಣಪ್ಪ.—ಕೃಷ್ಣರಾಜಪುರ ಹಾಗೂ ಹೆಚ್.ಎ.ಎಲ್. ಸ್ಯಾನಿಟರಿ ಬೋರ್ಡಿನ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನಮಗೆ ಹಣ ಮಂಜೂರಾಗಿಲ್ಲ. ಆದ್ದರಿಂದ ಯಾವುದೇ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಅಂತ ಹೇಳುತ್ತಿದ್ದಾರೆ. ಆದ್ದರಿಂದ ಆ ಬಗ್ಗೆ ಏನು ಅರೇಂಜ್‌ಮೆಂಟ್ಸನ್ನು ಮಾಡುತ್ತೀರಿ ಎಂಬುದನ್ನು ಸದನದಮುಖಾಂತರ ನಮಗೆ ಭರವಸೆ ಕೊಡಬೇಕು. ಇಲ್ಲದಿದ್ದರೆ ನಮ್ಮ ನಮ್ಮ ಕ್ಷೇತ್ರದಲ್ಲಿ ಜನಗಳನ್ನು ಸುಧಾರಿಸುವುದು ಬಹಳ ಕಷ್ಟ ವಾಗುತ್ತದೆ.

೬–೩೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಡಿ.ಸಿ. ಗೆ, ಸೂಕ್ತ ಸೂಚನೆ ಕೊಡುತ್ತೇನೆ ಸ್ಕೇರ್ಸಿಟಿ ಕೆಲಸ ಏನು ನಡೆದಿದೆ ಇದರ ಬಗ್ಗೆ ಮುಖ್ಯವಾಗಿ ಅಧ್ಯಯನಮಾಡಿದ ಸಮಿತಿಯವರು ಹೇಳಿದ್ದಾರೆ. ಕೆಳಗಿನ ಮಟ್ಟದಲ್ಲಿ ಹೊಂದಾಣಿಕೆ ಇಲ್ಲವೆಂದು ಹೇಳಿದ್ದಾರೆ. ಒಂದು ಕಡೆ ಡಿ. ಸಿ. ಯವರೋ ಅಥವಾ

ಒಬ್ಬ ಅಧಿಕಾರಿಯೋ ಸರ್ಕಾರದ ಸುತ್ತೋಲೆ ಗೊತ್ತಿಲ್ಲವೆಂದು ಹೇಳಿದ್ದಾರೆಂದು ಉಲ್ಲೇಖ ಮಾಡಿದ್ದಾರೆ. ಯಾವ ಅಧಿಕಾರಿಗಳು ಈ ರೀತಿ ಅಲಕ್ಷ್ಯವಾಗಿ ನಡೆದುಕೊಳ್ಳುತ್ತಾರೆ, ಸರ್ಕಾರದ ಸುತ್ತೋಲೆಗಳು, ಆದೇಶಗಳು ಏನು ಇವೆ ಅವುಗಳನ್ನು ಓದಿ ಕೆಲಸ ಮಾಡದೇ ಇರತಕ್ಕ ಅಧಿಕಾರಿಗಳು ಇದ್ದಾರೆ ಅವರು ಸರ್ಕಾರೀ ಕೆಲಸದಲ್ಲಿರುವುದಕ್ಕೆ ಯೋಗ್ಯರಲ್ಲವೆಂದು ಹೇಳುತ್ತೇನೆ. ಸಮಿತಿಯವರ ವಿಶೇಷವಾದ ಉಲ್ಲೇಖ ಏನಿದೆ ಅದರ ಬಗ್ಗೆ ಯೋಗ್ಯ ಕ್ರಮ ಕೈಗೊಳ್ಳುತ್ತೇನೆ. ಸ್ಕೇರ್ಸಿಟಿ ಕೆಲಸದ ವಿಚಾರದಲ್ಲಿ ನಾನು ಪ್ರವಾಸ ಮಾಡಿ ಬಂದ ಮೇಲೆ ಕೆಲವು ನಿರ್ದಿಷ್ಟವಾದ ಆದೇಶಗಳನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇನೆ. ಮೊದಲನೆಯದು ಎಲ್ಲ ಕೆಲಸಗಳ ಬಗ್ಗೆ ಎಸ್ಟಿಮೇಟುಗಳು, ಕೆಲಸದ ಹೆಸರು, ಅದರ ವಿವರ, ಮಂಜೂರಾದ ಹಣ, ಕೆಲಸ ಪ್ರಾರಂಭವಾಗುವ ದಿನ ಎಲ್ಲವನ್ನು ಶಾಸಕರಿಗೆ ಮತ್ತು ಲೋಕ ಸಭಾ ಸದಸ್ಯರಿಗೆ ಕೊಡತಕ್ಕ ಆದೇಶ ಕೊಟ್ಟಿದ್ದೇನೆ. ಇದರ ಬಗ್ಗೆ ಬಿ.ಡಿ.ಓ. ಮತ್ತು ತಹಶೀಲ್ದಾರರ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಹಾಕುವಂತೆ ಆದೇಶಿಸಿದ್ದೇನೆ. ಎಲ್ಲಿ ಕೆಲಸ ನಡೆಯುತ್ತಿದೆ ಅಲ್ಲಿ ಬೋರ್ಡ್ ಹಾಕಲಿಕ್ಕೆ ಹೇಳಿದ್ದೇನೆ. ಏಕೆಂದರೆ ಆ ಊರಿನ ಜನರಿಗೆ ಗೊತ್ತಾಗಬೇಕು ಎಂದು. ಕೆರೆ ಕೆಲಸಗಳಿಗೆ ಎಷ್ಟು ಹಣ ಮಂಜೂರಾಗಿದೆ ಎಂಬುದು ಗೊತ್ತಾಗಲು ಬೋರ್ಡ್ ಹಾಕುವುದಕ್ಕೆ ಆದೇಶ ಕೊಟ್ಟಿದ್ದೇ. ಲೋಕಸಭಾ ಸದಸ್ಯರು ಅಥವಾ ಮಾನ್ಯ ಸದಸ್ಯರು ಯಾವುದಾದರೂ ಕೆಲಸವನ್ನು ಇನ್ಸ್‌ಪೆಕ್ಷನ್ ಮಾಡುತ್ತೇವೆಂದರೆ ಅಧಿಕಾರಿಗಳು ಕೂಡಲೇ ವಾಹನ ಸೌಕರ್ಯ ಮಾಡಿಕೊಡಬೇಕು ಮತ್ತು ಜೊತೆಗೆ ಹೋಗಬೇಕು ಹಾಗೂ ಇನ್ಸ್‌ಪೆಕ್ಷನ್ನಿಗೆ ಅನುಕೂಲ ಮಾಡಿಕೊಡಬೇಕೆಂದು ಆದೇಶ ಕೊಟ್ಟಿದ್ದೇನೆ. ನಾನು ಎಲ್ಲೆಲ್ಲಿ ಹೋಗಿ ಸಭೆ ಮಾಡಿದ್ದೇನೆ ಅಲ್ಲಿ ಶಾಸಕರು ಹಾಜರಿದ್ದರು. ಅವರ ಸಮಕ್ಷಮದಲ್ಲಿಯೇ ಈವಿಚಾರವನ್ನು ಹೇಳಿದ್ದೇನೆ. ಇದರ ಜೊತೆಗೆ ತಿಂಗಳಿಗೆ ಒಂದು ಸಾರಿ ಎಷ್ಟು ಕೆಲಸ ಆಗಿದೆ, ಎಷ್ಟು ಹಣ ಖರ್ಚಾಗಿದೆ ಎಂಬ ವಿವರಗಳನ್ನು ಶಾಸಕರಿಗೆ ಕೊಡಲಿಕ್ಕೆ ಆದೇಶ ಕೊಟ್ಟಿದ್ದೇನೆ

(ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ಆದೇಶ ಕೊಟ್ಟ ವಿಚಾರದಲ್ಲಿ ಡಿ.ಸಿ. ಮತ್ತು ಬೇರೆ ಬೇರೆ ಅಧಿಕಾರಿಗಳ ಜೊತೆ ಸಭೆ ಮಾಡಿದಾಗ ತಿಳಿದುಕೊಳ್ಳಬೇಕು ಮತ್ತು ಅನುಕೂಲ ಇದ್ದಾಗ ಈ ಕೆಲಸಗಳ ಬಗ್ಗೆ ಮೇಲ್ವಿಚಾರಣೆಯನ್ನು ಮಾಡಿಕೊಳ್ಳಬೇಕೆಂದು ಶಾಸಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕೆಲವು ಸದಸ್ಯರು ಹೇಳಿದರು, ಡಿ.ಸಿ. ಗೆ ಆ್ಯಕ್ಷನ್ ಪ್ಲಾನ್ ಇದೆ, ಅದರಲ್ಲಿ ಕೆಲಸ ತೆಗೆದುಕೊಳ್ಳಬೇಕು, ಹೊಸ ಕೆಲಸ ತೆಗೆದುಕೊಳ್ಳು ಆಗುವುದಿಲ್ಲವೆಂದು, ಅದು ತಪ್ಪು. ಸ್ಕೇರ್ಸಿಟಿಗೆ ಸಂಬಂಧಪಟ್ಟ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಬೇಕೆಂದು ಸಲಹೆ ಸೂಚನೆಗಳನ್ನು ಕೊಟ್ಟಿದ್ದೇನೆ, ಮತ್ತು ವಿಶೇಷವಾದ ಸಲಹೆಗಳ ನಕಲು ಪ್ರತಿಗಳನ್ನು ಶಾಸಕರಿಗೆ ಕಳುಹಿಸಿಕೊಡುತ್ತೇನೆ. ಬಂಗಾರಪ್ಪನವರು ಏನು ಹೇಳಿದರು ಅದೇ ರೀತಿ ವೆಂಕಟರಾಮಯ್ಯನವರು ಹೇಳಿದರು. ಎಲ್ಲೆಲ್ಲಿ ಗ್ರಾಮದ ಜನರು ಮುಂದೆ ಬರುತ್ತಾರೆ ಅವರಿಗೆ ಕೆಲಸ ಒದಗಿಸಿಕೊಡತಕ್ಕ ಭರವಸೆ ಕೊಟ್ಟಿದ್ದೇನೆ. ಆ ಬಗ್ಗೆ ಸೂಕ್ತ ಸುತ್ತೋಲೆ ಕಳುಹಿಸುತ್ತಿದ್ದೇನೆ. ಗ್ರಾಮದ ಜನರು ಮುಂದೆ ಬಂದರೆ ಕೆಲಸ ಚೆನ್ನಾಗಿ ಆಗುತ್ತದೆ, ಅವರಿಗೆ ಸಂಬಳವೂ ಸಿಗುತ್ತದೆ, ಕೆಲಸದ ಮಟ್ಟ ಉತ್ತಮವಾಗುತ್ತದೆಂಬ ಭರವಸೆ ಇದೆ. ಇಂಥ ವಿಚಾರದಲ್ಲಿ ಶಾಸಕರು ಮುಂದೆ ಬಂದು ಗ್ರಾಮದ ಜನರಿಗೆ ಒಪ್ಪಿಸಿ ಕೆಲಸ ಮಾಡಲು ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರೈನ್‌ಗೇಜ್ ಬಗ್ಗೆ ಒಬ್ಬ ಸದಸ್ಯರು ಹೇಳಿದರು. ಆಗಸ್ಟ್ ೧೫ರೊಳಗೆ ಅಥವಾ ಅಂತ್ಯದೊಳಗೆ ರಾಜ್ಯದ ಪ್ರತಿಯೊಂದು ಹೋಬಳಿಗೂ ಒಂದೊಂದು ರೈನ್‌ಗೇಜ್ ಕೊಡಬೇಕೆಂದು ಆದೇಶ ಕೊಟ್ಟಿದ್ದೇನೆ. ಕೆಲವು ಕಡೆ ತಾಲ್ಲೂಕಿಗೆ ಒಂದು-ಎರಡು ಇವೆ. ಆದ್ದರಿಂದ ಹೋಬಳಿಗೆ ಒಂದು ಹೊಸ ರೈನ್‌ಗೇಜ್ ಕೊಡಬೇಕೆಂದು ಹಣ ಕೂಡ ಕೊಟ್ಟಿದ್ದೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಈ ಕೆಲಸವನ್ನು ಯಾವ ಇಲಾಖೆಯವರು ಮಾಡಬೇಕು ? ಇದನ್ನು ನೇರವಾಗಿ ಒಬ್ಬರಿಗೇ ವಹಿಸಿ, ಇಲ್ಲದಿದ್ದರೆ ತೊಂದರೆಯಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಆ ಕೆಲಸವನ್ನು ಕಂದಾಯ ಇಲಾಖೆ ಮಾಡುತ್ತದೆ. ವ್ಯವಸಾಯ ಇಲಾಖೆಯವರು ಮಾಡಿರುವುದನ್ನು ಏನೂ ಮಾಡುವುದಕ್ಕಾಗುವುದಿಲ್ಲ. ರಾಜ್ಯ ಸರ್ಕಾರ ಈಗಾಗಲೇ ೩೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇದು ಸಾಲದು. ಇನ್ನೂ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಒಂದು ವಿಚಾರವನ್ನು ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದಿಂದ ಏನು ಹಣ ಬರುತ್ತದೆ ಅದನ್ನು ಮಾತ್ರ ಬರಗಾಲ ಕಾಮಗಾರಿಗಳಿಗೆ ಸರ್ಕಾರ ಖರ್ಚು ಮಾಡುತ್ತದೆ, ಈ ಬಗ್ಗೆ ರಾಜ್ಯ ಸರ್ಕಾರದ ಹೆಚ್ಚಿನ ಪ್ರಯತ್ನವೇನು ಇಲ್ಲವೆಂಬ ಮಾತು ಅನೇಕ ಸಾರಿ ಬಂದಿದೆ. ಈ ವಿಚಾರದಲ್ಲಿ ಕೆಲವು

ವಿವರಗಳನ್ನು ಕೊಡಬಯಸುತ್ತೇನೆ. ಕುಡಿಯುವ ನೀರಿನ ವಿಚಾರವಾಗಿ ೧೯೮೨-೮೩ರಲ್ಲಿ ನಾರ್ಮಲ್ ಪ್ಲಾನ್ ಪ್ರಕಾರ ೬.೮೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ನಾವು ಮಾಡಿದ್ದು ೧೬.೭೭ ಕೋಟಿ ರೂಪಾಯಿಗಳು. ಕೊಳವೆ ಬಾವಿಗಳು ನಾರ್ಮಲ್ ಆಗಿ ತೆಗೆಯತಕ್ಕದ್ದು ೪೭೫೦. ಆದರೆ ಸ್ಕೇರ್ಸಿಟಿ ಬಂದುದ್ದರಿಂದ ೧೯೮೨-೮೩ರಲ್ಲಿ ನಾವು ಹಾಕಿದಂತಹ ಬೋರ್‌ವೆಲ್‌ಗಳು ೧೫೭೧೮. ಗುರಿಗಿಂತ ಹೆಚ್ಚಾಗಿ ತೆಗೆದಿದ್ದೇವೆ, ೧೯೮೨-೮೩ರಲ್ಲಿ ಸರ್ಕಾರ ಖರ್ಚು ಮಾಡಬೇಕಾದುದು ೧೪ ಕೋಟಿ. ಆದರೆ ನಾವು ಮಾಡಿದ್ದು ೩೧.೫ ಕೋಟಿ. ೧೯೮೩-೮೪ರಲ್ಲಿ ಖರ್ಚು ಮಾಡಬೇಕಾದುದು ೩೨.೭೩ ಕೋಟಿ ಆದರೆ ಖರ್ಚು ಮಾಡಿದ್ದು ೩೯.೮೭ ಕೋಟಿ ರೂಪಾಯಿಗಳು. ೧೯೮೩-೮೪ರಲ್ಲಿ ತೆಗೆಯಬೇಕಾಗಿದ್ದ ಬಾವಿಗಳ ಸಂಖ್ಯೆ ೧೦೭೧೫ ಆಗಿದ್ದರೆ ನಾವು ತೆಗೆದದ್ದು ೧೩೮೧೦. ಕೇಂದ್ರ ಸರ್ಕಾರದಿಂದ ಬಂದ ಹಣ ಸಹಾಯ ಅಲ್ಲದೆ ಈ ರೀತಿ ಹೆಚ್ಚಿನ ಹಣವನ್ನು ರಾಜ್ಯ ಸರ್ಕಾರ ಖರ್ಚು ಮಾಡಿದೆ ಎಂದು ಹೇಳುತ್ತಿದ್ದೇನೆ. ಎನ್.ಆರ್.ಇ.ಪಿ. ಕೆಳಗೆ ಕೂಡ ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದೇವೆ. ಕೇಂದ್ರದ ಅಧ್ಯಯನ ತಂಡ ಬಂದು ಹೋದ ಮೇಲೆ ಪುನಃ ನಮ್ಮ ರಾಜ್ಯದ ಬರಗಾಲ ಸ್ಥಿತಿ ಬಹಳ ಕಷ್ಟದಾಯಕವಾಗಿದೆ. ಸೆಪ್ಟಂಬರ್ ತಿಂಗಳಲ್ಲಿ ಸರಾಸರಿ ತಿಂಗಳಲ್ಲಿ ಆಗತಕ್ಕ ಮಳೆಯ ಕಾಲು ಭಾಗ ಮಾತ್ರ ಬಿದ್ದಿದೆ. ಹೀಗಾಗಿ ಬರಗಾಲದ ಪರಿಸ್ಥಿತಿ ಇನ್ನೂ ಭೀಕರವಾಗತಕ್ಕ ವಿಚಾರವನ್ನು ಸದಸ್ಯರು ಏನು ವ್ಯಕ್ತ ಮಾಡಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಬಹಳ ಕಳವಳ ಪಡುವ ಪರಿಸ್ಥಿತಿ ಬಂದಿದೆ. ಕೇಂದ್ರ ಅಧ್ಯಯನ ಸಮಿತಿ ಈಗಾಗಲೇ ತನ್ನ ವರದಿಯನ್ನು ಕೊಟ್ಟಿರಬಹುದೆಂಬ ಮಾಹಿತಿ ಬಂದಿದೆ. ಆ ಸಮಿತಿಯವರು ಬಂದು ಹೋದ ಮೇಲೆ ಕೇಂದ್ರ ಸರ್ಕಾರ ೧೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರದ ಅಧ್ಯಯನ ಸಮಿತಿ ಮೊದಲ ಬಾರಿಗೆ ಬಂದಾಗ ನಮಗೆ ಸುಮಾರು ೨೨.೧೬ ಕೋಟಿ ರೂಪಾಯಿಗಳು ಸೀಲಿಂಗ್ ಲಿಮಿಟ್‌ನಲ್ಲಿ ಕೊಟ್ಟರು. ಅನಂತರ ಸುಮಾರು ೧೮ ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದರು. ಮತ್ತೆ ಕೇಂದ್ರದಿಂದ ಎರಡನೇ ತಂಡದ ಅಧ್ಯಯನ ಸಮಿತಿ ಬಂದಾಗ ಸುಮಾರು ೧೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. ಆದರೆ ಈಗಾಗಲೇ ರಾಜ್ಯ ಸರ್ಕಾರ ಎಲ್ಲಿ ಬರಗಾಲ ಪರಿಸ್ಥಿತಿಯ ನಿವಾರಣೆ ಮಾಡುವ ಸಲುವಾಗಿ ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅಲ್ಲಿ ಹಣವನ್ನು ಖರ್ಚು ಮಾಡುತ್ತಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಇದರಲ್ಲಿ ಮಾರ್ಜಿನ್ ಮನಿ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾರ್ಜಿನ್ ಮನಿಯನ್ನು ನಾವು ಯಾವಾಗ ಬೇಕಾದರೂ ಉಪಯೋಗಿಸಿಕೊಳ್ಳಬಹುದು. ನಾವು ಈಗಾಗಲೇ ಸುಮಾರು ೩೬ ಕೋಟಿ ರೂಪಾಯಿಗಳನ್ನು ಬರಗಾಲ ಪರಿಸ್ಥಿತಿಯ ನಿವಾರಣೆಗೆ ಖರ್ಚು ಮಾಡಿದ್ದೇವೆ. ನಾನು ಮೊದಲೇ ಹೇಳಿದ ಹಾಗೆ ಕೇಂದ್ರ ಸರ್ಕಾರದಿಂದ ನಮಗೆ ಹಣ ಬರಲಿ, ಒಂದು ವೇಳೆ ಬಾರದೆ ಇರಲಿ ಬರಗಾಲ ಪರಿಸ್ಥಿತಿಯ ನಿವಾರಣೆ ಸಲುವಾಗಿ ಹಣವನ್ನು ಎಷ್ಟು ಬೇಕಾದರೂ ಖರ್ಚು ಮಾಡುತ್ತೇವೆ ಮತ್ತು ಎಲ್ಲಿ ಬರಗಾಲ ವಿದೆಯೋ ಅಲ್ಲಿ ಜನರಿಗೆ ಕೂಲಿ ಕೆಲಸ ಕೊಡುತ್ತೇವೆ, ದನಕರುಗಳಿಗೆ ಮೇವು ಒದಗಿಸಿಕೊಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸತತವಾಗಿ ಸುಮಾರು ೫ ತಿಂಗಳಿನಿಂದ ಬರಗಾಲದ ಪರಿಸ್ಥಿತಿ ಇದ್ದರೂ ಸಹ ಸರ್ಕಾರದವರು ಸುಮಾರು ೩೬ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಇವರು ಸುಮಾರು ೨೦೦ ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕಾಗಿತ್ತು. ಮಾನ್ಯ ಮಂತ್ರಿಗಳು ಬರೀ ಹೇಳಿಕೆಯನ್ನು ಕೊಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹಣವನ್ನು ಖರ್ಚು ಮಾಡಬೇಕು, ಜಿಲ್ಲಾಧಿಕಾರಿಗಳ ಕಡೆ ತಾವು ಹಣವನ್ನು ಕೊಡಬೇಕು. ತಾವು ದೊಡ್ಡ ಮನಸ್ಸು ಮಾಡಿದರೆ ಮಾತ್ರ ಆ ಜನರ ಕಷ್ಟ ಪರಿಹಾರವಾಗುತ್ತದೆ ಇಲ್ಲದಿದ್ದರೆ ಅವರ ಕಷ್ಟ ಪರಿಹಾರವಾಗುವುದಿಲ್ಲ. ನೀವು ಎಲ್ಲೆಲ್ಲಿ ಏನೇನು ಕೆಲಸಕಾರ್ಯಗಳನ್ನು ತೆಗೆದುಕೊಂಡಿದ್ದೀರೆಂದು ವರದಿ ಬಂದಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ಕೇರ್‌ಸಿಟಿ ವರ್ಕ್ಸ್‌ನಲ್ಲಿ ಸುಮಾರು ೩೬ ಕೋಟಿ ರೂಪಾಯಿಗಳು, ಇದರ ಜೊತೆಗೆ ನಾಮಿನಲ್ ಎನ್.ಆರ್.ಇ.ಪಿ. ಯಲ್ಲಿ ೧೨.೭೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆರ್.ಎಲ್.ಇ.ಜಿ.ಪಿ. ಯಲ್ಲಿ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಎರಡೂ ಹಣ ಸೇರಿ ಸುಮಾರು ೧೦.೨೩ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಡಿ.ಪಿ.ಎ.ಪಿ. ಯಲ್ಲಿ ಸುಮಾರು ೪.೮೫ ಕೋಟಿ ರೂಪಾಯಿಗಳನ್ನು ಬಿಡುಗಡೆ

ಮಾಡಿದ್ದೇವೆ. ಇದರಲ್ಲಿ ಅಲ್ಲದೆ ಪಿ.ಡಬ್ಲ್ಯೂ.ಡಿ ಫಾರೆಸ್ಟ್ ಡಿಪಾರ್ಟ್ ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ಗಳಿಂದಲೂ ಸೇರಿಸಿ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ಈ ವಿವರಗಳನ್ನು ನಾನು ಮೊದಲೇ ಕೊಟ್ಟಿದ್ದೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ತಾವು ಜಿಲ್ಲಾಧಿಕಾರಿಗಳಿಗೆ ೧೦ ಪರ್ಸೆಂಟ್ ಹಣ ಸಹ ಕೊಟ್ಟಿಲ್ಲ. ಹಣ ಜಾಸ್ತಿ ಕೊಟ್ಟರೆ ಉಪಯೋಗವಾಗುತ್ತದೆ. ಇಲ್ಲದಿದ್ದರೆ ಏನೂ ಪ್ರಯೋಜನ ವಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ಎರಡು ಮೂರು ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಕ್ಯಾಬಿನೆಟ್ ಸಬ್ ಕಮಿಟಿಯನ್ನು ನೇಮಕ ಮಾಡಿದ್ದೇವೆ. ಅವರ ವರದಿಯನ್ನು ಸಹ ಪರಿಶೀಲಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಯಾರೂ ವಿರೋಧ ಮಾಡಲಿಲ್ಲವಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸದನದಲ್ಲಿ ಬರಗಾಲ ಪರಿಸ್ಥಿತಿಯ ಬಗ್ಗೆ ಪ್ರಾರಂಭದಲ್ಲಿ ಚರ್ಚೆ ನಡೆದಿದೆ. ಕೇಂದ್ರ ಅಧ್ಯಯನ ಸಮಿತಿ ಬಂದು ಹೋಗಿದೆ. ನಮ್ಮ ಸದನದ ಸಮಿತಿಯನ್ನು ಅಧ್ಯಯನ ಮಾಡಿಕೊಂಡು ಬರುವುದಕ್ಕೆ ನಾವು ಕಳುಹಿಸಿದ್ದೆವು. ಇಲ್ಲಿ ಎರಡು ಮೂರು ವಿಷಯ ಗಳನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು, ಎಲ್ಲಿ ಬರಗಾಲ ಪರಿಸ್ಥಿತಿ ಇದೆಯೋ ಅಂತಹ ಕಡೆಗಳಲ್ಲಿ ವಿದ್ಯಾರ್ಥಿಗಳ ಫೀಜು ಸಹ ರಿಯಾಯಿತಿ ಕೊಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೊಡುತ್ತೇವೆಂದು ಧಾರವಾಡದ ಭಾಷೆಯಲ್ಲಿ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮತ್ತೆ ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಹೇಳಿದರು ಸರ್ವಪಕ್ಷಗಳ ನಿಯೋಗ ಒಂದು ಡೆಲ್ಲಿಗೆ ಹೋಗಬೇಕೆಂದು, ಇದು ಬಹಳ ಉತ್ತಮವಾದಂಥ ಸಲಹೆ ಅವಶ್ಯಕತೆ ಬಿದ್ದರೆ ಆ ಕೆಲಸವನ್ನು ಸಹ ಮಾಡೋಣವೆಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಮಾನ್ಯ ಸದಸ್ಯರು ಮಾತನಾಡುತ್ತಾ ಎಲ್ಲರೂ ಒಂದೇ ರೀತಿಯಾದಂಥ ಸೂಚನೆ ಗಳನ್ನು ಕೊಟ್ಟಿದ್ದಾರೆ. ಆ ಎಲ್ಲಾ ಸೂಚನೆಗಳನ್ನು ನಾನು ಸ್ವಾಗತ ಮಾಡುತ್ತೇನೆ. ಅದರಲ್ಲೂ ಮುಖ್ಯವಾಗಿ ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರ ಅಧ್ಯಕ್ಷತೆಯಲ್ಲಿ ನೇಮಕ ಮಾಡಿ ದಂಥಹ ಸಮಿತಿ ಸದಸ್ಯರೆಲ್ಲರಿಗೂ ನಾನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ನಾನು ಮಾತನಾಡುವಾಗ ಮಾನ್ಯ ಮಂತ್ರಿಗಳು ಇರಲಿಲ್ಲ. ಬೇರೆ ಮಂತ್ರಿಗಳು ಇದ್ದರು. ಕೃಷ್ಣ ಮೇಲ್ದಂಡೆ ಯೋಜನೆಗೆ ಸುಮಾರು ಒಂದು ನೂರು ಕೋಟಿ ರೂಪಾಯಿಗಳು ಕೊಡಬೇಕೆಂದು ಸಹ ಶಿಫಾರಸ್ಸು ಮಾಡಿದ್ದಾರೆ. ತಾವು ಈಗ ೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇನ್ನು ಉಳಿದ ೫೦ ಕೋಟಿ ರೂಪಾಯಿಗಳನ್ನು ಕೊಟ್ಟರೆ ಅನುಕೂಲ ವಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಕೊಡಬೇಕು. ಮತ್ತು ಸಮಿ ತಿಯು ೩ನೇ ಆಗಸ್ಟ್‌ನಲ್ಲಿ ನಮ್ಮ ಭಾಗಕ್ಕೆ ಬಂದಿತ್ತು. ನಾನುಸಹ ಅಲ್ಲಿ ಇದ್ದೆ. ಅಲ್ಲಿನ ಚೀಫ್ ಇಂಜಿನಿಯರ್‌ರವರನ್ನು ಕರೆಸಿ ಏತಕ್ಕೆ ಕಾಮಗಾರಿ ಕೆಲಸವನ್ನು ತೆಗೆದುಕೊಂಡಿಲ್ಲವೆಂದು ಕೇಳಿದರೆ, ನಮಗೆ ಆದೇಶ ಕೊಟ್ಟಿಲ್ಲ ಎಂದು ಹೇಳಿದರು. ಅಲ್ಲಿ ಸುಮಾರು ೧೩ ಲಕ್ಷ ಜನಸಂಖ್ಯೆ ಇದ್ದಾರೆ. ಅಲ್ಲಿ ಸರ್ಕಾರದವರು ಇನ್ನೂ ೨೦೦ ದಿವಸಗಳು ಕೆಲಸವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ೨೦೦ ದಿವಸಗಳಿಗೆ ಸುಮಾರು ೨೦೦ ಕೋಟಿ ರೂಪಾಯಿ ಗಳನ್ನು ರಾಜ್ಯದ ಎಲ್ಲಾಕಡೆಗಳಿಗೂ ತಾವು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಮೂರು ನಾಲ್ಕು ತಿಂಗಳವರೆಗೂ ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕನಿಷ್ಟಪಕ್ಷ ೫೦ ಸಾವಿರ ಜನರಿಗೆ ಕಾಮಗಾರಿ ಕೆಲಸವನ್ನು ತೆಗೆದುಕೊಳ್ಳುವಂತೆ ಆಶ್ವಾಸನೆಯನ್ನು ಕೊಡಬೇಕು. ಮತ್ತೆ ಜಿಲ್ಲಾಧಿಕಾರಿಗಳಿಗೆ ಹಣ ಕೊಡಬೇಕು. ಅಧಿಕಾರವನ್ನು ಅವರಿಗೆ ತಾವು ಕೊಡಬೇಕು ಈ ಬಗ್ಗೆ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮೊದಲೇ ಹೇಳಿದ ಹಾಗೆ ಎಲ್ಲಾ ಮಾನ್ಯ ಸದಸ್ಯರಿಗೂ ಮತ್ತು ಪಾರ್ಲಿಮೆಂಟ್ ಮೆಂಬರ್ಸ್‌ಗೆ ಆಯಾಯಾ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಏನೇನು ಎಷ್ಟೆಷ್ಟು ಅಂದಾಜಿನ ಕಾಮಗಾರಿ ಕೆಲಸಗಳು ತೆಗೆದುಕೊಂಡಿದ್ದೇವೆಂದು ಒಂದು ಪಟ್ಟಿಯನ್ನು ಕಳುಹಿಸಿಕೊಡುವಂತೆ ಆದೇಶ ನೀಡಿದ್ದೇನೆ. Definite instructions have been

given. Taluka wise and district wise figures also have been supplied. I request all the Members to extend their co-operation in their respective constitutiencies.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಒಂದು ಬೋರ್ ವೆಲ್ ಹಾಕಬೇಕಾದರೆ ಚೀಫ್ ಇಂಜಿನಿಯರ್‌ರವರ ಅಪ್ರೂವ್‌ವಲ್ ಬೇಕೆಂದು ಹೇಳುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ ಆ ಎಲ್ಲಾ ಕಾಪಿಗಳನ್ನು ತಮಗೆ ಮತ್ತು ಇತರೆ ಶಾಸಕರಿಗೂ ಕಳುಹಿಸಿಕೊಡುತ್ತಾರೆ.

SRI DHARAMA SINGH NARAYAN SINGH.—For digging borewells Chief Engineer permission is require that is not practical. This is very horrible.

ಶ್ರೀ ಎಸ್. ಆರ್. ಬೊಮ್ಮಾಯಿ.—೧೫ ದಿವಸಗಳ ಹಿಂದೆ ಆದೇಶ ಕೊಟ್ಟಿದ್ದೇನೆ, D.C.s havebeen empowered now.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಈ ಶಾಸನ ಸಭೆ ಮುಗಿದ ಮೇಲೆ ತಾವು ಎಲ್ಲಾ ಜಿಲ್ಲೆಗಳಿಗೂ ಭೇಟಿ ಕೊಡಿ. ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಾಗ ನಾನು ಸಹ ನಿಮ್ಮನ್ನು ಭೇಟಿಯಾಗುತ್ತೇನೆ. ಆಗ ನೋಡುವಿರಂತೆ.

†ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೇ, ಬರಗಾಲದಲ್ಲಿ ಟೌನ್‌ಗಳಿಗೆ, ಸಿಟಿಗಳಿಗೆ ಒಂದು ಕೋಟಿ ಚಿಲ್ಲರೆ ರೊಕ್ಕವನ್ನು ಕೊಡುತ್ತೇವೆ ಎಂದು ಹೇಳಿದರು. ಆದರೆ ಹಣ ಎಂದು ಅವರು ಹೇಳಲಿಲ್ಲ. ಹಣ ಆದರೆ ಒಂದು, ರೊಕ್ಕ ಆದರೆ ಒಂದು ಆಗುತ್ತದೆ.

ಅಧ್ಯಕ್ಷರು.—ಹಣ, ರೊಕ್ಕ, ದುಡ್ಡು ಎಲ್ಲಾ ಒಂದೇ ಆಗುತ್ತದೆ.

ಶ್ರೀ ಎಂ. ರಾಮಪ್ಪ.—ಇವತ್ತು ಬಳ್ಳಾರಿಯ ಜನಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ಕೊಟ್ಟರೂ ಕೂಡಾ ೫–೬ ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅಲ್ಲಿ ಎರಡೂವರೆ ಲಕ್ಷ ಕೂಡಾ ಕೊಡುವುದಕ್ಕೆ ಆಗಿಲ್ಲ. ಸುಮ್ಮನೆ ನೀವು ಇಲ್ಲಿ ಅಂಕಿಅಂಶಗಳನ್ನು ಹೇಳುತ್ತೀರಿ. ಆದರೆ ನಾವು ಅಲ್ಲಿಹೋಗಿ ಕೇಳಿದರೆ, ಕೊಡುತ್ತಾರ್ರೀ, ಅವರು ಕೊಟ್ಟಮೇಲೆ ನಾವು ಕೊಡುತ್ತೇವ್ರೀ ಎಂದು ಹೇಳುತ್ತಾರೆ. ಅದುಬರುವವರೆಗೆ ನಾವು ಮೇನೇಜಿಂಗ್ ಡೈರೆಕ್ಟರ್‌ಗೆ ಕೇಳಬೇಕು, ಛೇರ್ಮನ್ನರಿಗೆ ಕೇಳಬೇಕು. ಇಲ್ಲಿ ಹಣಕಾಸಿನ ಇಲಾಖೆಯವರಿಗೆ ಕೇಳಬೇಕು. ಎಫ್.ಡಿ.ಯವರಿಗೆ ಕೇಳಿದರೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಕೇಳಬೇಕು ಎನ್ನುತ್ತಾರೆ. ಹೀಗೆ ಡಿಲೇ ಆದರೆ ಹೇಗೆ ? ಈಗಾಗಲೇ ೫ ತಿಂಗಳು ಕಳೆದಿದೆ. ಇನ್ನು ೪ ತಿಂಗಳು ಕಳೆದರೆ ಹೇಗೆಯಾಗುತ್ತದೆಯಪ್ಪೋ. ಆ ನಂತರ ಕೆರೆಗೆ ಭತ್ಯೆ ಕೊಡುತ್ತೀರೋ ಏನೋ ಗೊತ್ತಿಲ್ಲ. ಈ ಒಂದು ಪರಿಸ್ಥಿತಿಗೆ ಬಂದಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ನಿಯಮಕ್ಕೆ ಅನುಗುಣವಾಗಿ ನಗರಸಭೆಗಳಲ್ಲಿ ಬರಗಾಲಕ್ಕೆ ಹಣವನ್ನು ಖರ್ಚು ಮಾಡುವುದಕ್ಕೆ ಬರುವುದಿಲ್ಲ. ನಿಯಮಕ್ಕೆ ಅನುಗುಣವಾಗಿ ನಾವು ಕೆಲಸ ಮಾಡುವುದಾದರೆ ಬಳ್ಳಾರಿಗೆ ಏನೂ ಕೊಡುವಹಾಗೆ ಇಲ್ಲ. ಕೇಂದ್ರ ಸರ್ಕಾರದ ಗೈಡ್ ಲೈನ್ ಪ್ರಕಾರ ಅರ್ಬನ್ ಏರಿಯಾಗೆ ಕೊಡುವುದಕ್ಕೆ ಬರುವುದಿಲ್ಲ. ಆದರೂ ಕೂಡಾ ನಾವು ಹೋದ ಸಲ ಬೇಡಿಕೆಯನ್ನು ಇಟ್ಟೆವು. ಅದಕ್ಕೆ ಅವರು ಒಪ್ಪಲಿಲ್ಲ. ಆದರೂ ನಾವು ಒಂದು ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಬರಗಾಲದ ವಿಚಾರದಲ್ಲಿ, ಕುಡಿಯುವ ನೀರಿನ ವಿಚಾರದಲ್ಲಿ ಅರ್ಬನ್ ಏರಿಯ ರೂರಲ್ ಏರಿಯಾ ಎಂದು ಗಣನೆಗೆ ತೆಗೆದುಕೊಳ್ಳಬಾರದು ಎಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಹಾಗೂ ಖರ್ಚು ಮಾಡುತ್ತಾ ಬಂದಿದ್ದೇವೆ. ನಮ್ಮಲ್ಲಿ ಬಳ್ಳಾರಿ ನಗರಕ್ಕಿಂತಲೂ ಚಿಕ್ಕ ಚಿಕ್ಕ ನಗರ ಸಭೆಗಳು ಇವೆ. ಒಂದು ಬೋರ್ವೆಲ್‌ನ್ನೂ ಹಾಕಲು ಶಕ್ತಿ ಇಲ್ಲದಂತಹ ನಗರಸಭೆಗಳು ಇವೆ. ಅಂತಹಕ್ಕೆ ನಾವು ಪ್ರಾಶಸ್ತ್ಯ ಕೊಟ್ಟಿದ್ದೇವೆ. ಬಳ್ಳಾರಿಗೂ ಕೂಡಾ ನಾವು ಹಣವನ್ನು ಕೊಟ್ಟಿದ್ದೇವೆ, ನಾವು ಅಲ್ಲಿಗೆ ಹೋಗಿದ್ದಾಗ ಅವರು ವಿಷಯವನ್ನು ಹೇಳಿದ್ದಾರೆ. ನಾನು ಅಲ್ಲಿ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಎಂ. ರಾಮಪ್ಪ.—ಬಹಳ ಕಡಿಮೆ ಹಣ ಕೊಟ್ಟಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಡಿಮೆ ಕೊಟ್ಟಿರುವುದನ್ನು ಒಪ್ಪುತ್ತೇನೆ. ಅರ್ಬನ್ ವಾಟರ್ ಸಪ್ಲೈ ಸ್ಕೀಮ್‌ಗೆ ಹಿಂದೆ ವಿಶ್ವಬ್ಯಾಂಕ್‌ನಿಂದ ೪೪ ಲಕ್ಷ ರೂ. ಕೇಳಿದ್ದೆವು ಹಾಗೂ ಹತ್ತಿಪ್ಪತ್ತು ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಅದು ಬರುವುದಕ್ಕಿಂತಾ ಮೊದಲೇ ೫ ಕೋಟಿ ಕೇಳಿದ್ದು ೧ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಮತ್ತು ಧರ್ಮಸಿಂಗ್ ಅವರು ಹೇಳಿದ ಹಾಗೆ ಡೆಪ್ಯುಟಿಕಮಿಷನರ್ ಅವರಿಗೆ ಪವರ್ ಕೊಟ್ಟಿದ್ದೇವೆ. ಹಾಗೂ ಈಗಾಗಲೇ ಅವರಿಗೆ ಸೂಚನೆ ಕೊಟ್ಟಿದ್ದೇವೆ. ನೀವು ಅಲ್ಲಿಗೆ ಹೋದಮೇಲೆ ಗೊತ್ತಾಗುತ್ತದೆ,

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ಮಲೆನಾಡಿನ ವಿಶೇಷ ಪರಿಸ್ಥಿತಿಯ ಬರಗಾಲದ ಬಗ್ಗೆ ನಾನು ಮಾತನಾಡಿದ್ದೆ. ಇದರ ಬಗ್ಗೆ ಸಹಾನುಭೂತಿಯಿಂದ ಏನಾದರೂ ಹೇಳುತ್ತಾರಾ ಎಂದು ಕುಳಿತಿದ್ದೆ. ಆದರೆ ಏನೂ ಮಾತನಾಡಲಿಲ್ಲ. ನಮ್ಮ ಸಂಕಷ್ಟವನ್ನು ಮಾನ್ಯ ಸಚಿವರು ಏಕೆ ಅರ್ಥ ಮಾಡಿಕೊಳ್ಳಲಿಲ್ಲ ? ಇದಕ್ಕೆ ಕಾರಣ ಏನು ? ಹಿನ್ನೆಲೆ ಏನು ? ದಯಮಾಡಿ ನಮ್ಮ ಬಗ್ಗೆ ಕರುಣೆ ತೋರಿಸಬೇಕು ಸಹಾನುಭೂತಿ ತೋರಿಸಬೇಕು. ಅತಿ ಕಡಿಮೆ ಮಳೆ ಮತ್ತು ಅತಿ ಹೆಚ್ಚು ಮಳೆಯಿಂದ ಆಗತಕ್ಕ ಅನಾಹುತಗಳ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಲೆನಾಡಿನ ಮಳೆ ಬಗ್ಗೆ ಕೂಡಾ ನಾವು ಮೊನ್ನೆ ಕೇಂದ್ರಕ್ಕೆ ಕೊಟ್ಟ ಮೆಮೊರಾಂಡಮ್‌ನಲ್ಲೇ ತಿಳಿಸಿದ್ದೇವೆ. ಶಿವಮೊಗ್ಗ ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಮಳೆ ಆಗಿಲ್ಲ ಎಂಬ ಬಗ್ಗೆ ಹೇಳಿದ್ದೇನೆ. ಮೊನ್ನೆ ತಾವು ಇರಲಿಲ್ಲ, ಮಲೆನಾಡಿನ ಬಗ್ಗೆ ರೆಫರ್ ಮಾಡುವಾಗ ತೀರ್ಥಹಳ್ಳಿಯನ್ನೆ ಉದಾಹರಿಸಿ ಹೇಳಿದ್ದೇನೆ. ಅಲ್ಲೂ ಕೂಡಾ ಸರಿಯಾಗಿ ಮಳೆಯಾಗಿಲ್ಲ ವೆಂದು ಹೇಳಿದ್ದೇನೆ. ಇಲ್ಲಿ ಸಮಯ ಇಲ್ಲದ್ದರಿಂದ ಆ ವಿವರಗಳನ್ನೆಲ್ಲಾ ನಾನು ಇಲ್ಲಿ ಹೇಳಲಿಲ್ಲ. ನಾವು ಅಲ್ಲೂ ಪರಿಹಾರ ಕೊಡುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಖರ್ಗೆಯವರ ವರದಿಯ ೧೪ನೇ ಪುಟದಲ್ಲಿ ಈ ರೀತಿ ಇದೆ.

"It was also observed by the Committee that there is no adequate supervision by the district authorities. Many of the Deputy Commissioners and Assistant Commissioners have failed to supervise the works and no action has been taken agaist the earing officials who have failed to excute the works properly. In a number of taluks the officers working belonged to the same taluks and they are not taking any intrest in the relief programmes and other developmental works."

ಎಂದು ಹೇಳಿದ್ದಾರೆ. ಇದಕ್ಕೆ ನಿಮ್ಮಿಂದ ಉತ್ತರ ಇಲ್ಲ. ಹಾಗೂ ಇನ್ನೊಂದಕ್ಕೆ ಉತ್ತರ ಕೊಡುವಾಗ "ಹರಿಜನರ ಲೊಕಾಲಿಟೀಸ್‌ನಲ್ಲಿ ಬೋರ್‌ವೆಲ್ಸ್ ಹಾಕಿಸುತ್ತೇವೆ" ಎಂದು ಹೇಳಿದಿರಿ ೪ ತಿಂಗಳ ಹಿಂದೆ ನಾವು ಹುಕುಮ್ ಮಾಡಿದ್ದೇವೆ. ಇವರನ್ನು ಅನುಸೂಚಿತ ಜಾತಿಯವರು ಎಂದು ಹೇಳಿದ್ದೇವೆ, ದಯಮಾಡಿ ಸರ್ಕಾರದವರು ಇನ್ನು ಮುಂದೆ ಈ ಕೆಲಸ ಮಾಡುವುದು ಬೇಡ. ಇದನ್ನು ಏಕೆ ಹೇಳುತ್ತಿದ್ದೇನೆ. ಎಂದರೆ, ಯಾರೊ ಒಬ್ಬನಿಗೆ ನೀವು ಈ ಜನಾಂಗಕ್ಕೆ ಈ ಜಾತಿಗೆ ಸೇರಿದವನು ಎಂದು ಹೇಳಿದರೆ ಆತನಿಗೆ ಎಷ್ಟು ಬೇಜಾರು ಆಗುವುದಿಲ್ಲ ? ಲಿಂಗಾಯಿತ ಜಾತಿಗೆ ಸೇರಿದ ಬೊಮ್ಮಾಯಿಯವರು ಎಂದರೆ, ರೆಡ್ಡಿ ಜಾತಿಗೆ ಸೇರಿದ ಕೆ.ಹೆಚ್. ಪಾಟೀಲರು ಎಂದರೆ, ಬ್ರಾಹ್ಮಣ ಜಾತಿಗೆ ಸೇರಿದ ಕೆ.ಹೆಚ್. ಶ್ರೀನಿವಾಸ್ ಎಂದರೆ ಹೇಗೆ ಅವರುಗಳಿಗೆ ನೋವು ಆಗುತ್ತದೋ ಹಾಗೆ ನಮಗೂ ಆ ರೀತಿ ಹೇಳಿದರೆ ನೋವು ಆಗುತ್ತದೆ. ದಯಮಾಡಿ ಇದನ್ನು ಬದಲಾವಣೆ ಮಾಡಿಕೊಳ್ಳಬೇಕು. ಇನ್ನು ಈ ವರ್ಷದ ಮೊದಲಿನಿಂದ ಈ ಸರ್ಕಾರದವರು ಏನೇನು ವಾಗ್ದಾನಗಳನ್ನು ಮಾಡಿದ್ದಾರೋ ಅವನ್ನೆಲ್ಲಾ ಲೆಕ್ಕ ಹಾಕಿ, ಅದರ ಪ್ರಕಾರ ಎಲ್ಲಾ ವಾಗ್ದಾನಗಳನ್ನು ಜಾರಿಗೆ ತರುವುದಕ್ಕೆ ಸುಮಾರು ೫,೦೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ ಈ ಸಾರಿ ಇವರು ಆಯುವ್ಯಯದಲ್ಲಿ ಕೇವಲ ೨,೦೧೬ ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಇವತ್ತು ಏನು ಇವರು ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದಾರೆ ಅದಕ್ಕೆ ಲೆಟರ್ ಆಫ್ ಕ್ರೆಡಿಟ್ ಫೈನಾನ್ಸ್‌ನಿಂದ ಹೋಗದೆ ಯಾವ

ಖರ್ಚು ಕೂಡಾ ಆಗುತ್ತಾ ಇಲ್ಲ. ಇದರಿಂದ ಇವತ್ತು ಯಾವ ಬ್ಯಾಂಕಿನಲ್ಲಿಯಾಗಲೀ, ಟ್ರೆಸರಿಯಲ್ಲಾಗಲೀ ಯಾವ ಚೆಕ್ಕಿಗೂ ಹಣವನ್ನು ಕೊಡುವುದಿಲ್ಲ. ಇಂತಹದೆಲ್ಲಾ ಇರುವಾಗ ನೀವು ಏನು ಮಾಡುತ್ತೀರಿ ಎಂದು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ನಾನು ಕೆಲವು ಜಿಲ್ಲೆಗಳಿಗೆ ಹೋಗಿದ್ದಾಗ ಸಭೆ ಮಾಡಿದ್ದೇನೆ. ಅಲ್ಲಿಗೆ ಶಾಸಕರು ಸಹಾ ಬಂದಿದ್ದರು. ಡೆಪ್ಯುಟಿ ಕಮೀಷನರ್ ಅವರು, ಅಸಿಸ್ಟೆಂಟ್ ಕಮೀಷನರ್ ಅವರು ಎಷ್ಟು ಸೂಪರ್‌ವಿಷನ್ ಮಾಡಬೇಕು ಎಷ್ಟು ಚೆಕ್ ಮಾಡಬೇಕು ಎನ್ನುವುದರ ಬಗ್ಗೆ ಆದೇಶ ಕೊಟ್ಟಿದ್ದೇನೆ. ಎಲ್ಲಿ ಕೆಲಸ ಮಾಡಿಲ್ಲ ಅಲ್ಲಿ ತರಾಟೆಗೆ ತೆಗೆದುಕೊಂಡು ಅವರ ಮೇಲೆ ಕ್ರಮ ಕೂಡ ತೆಗೆದುಕೊಂಡಿದ್ದೇನೆ. ಇವತ್ತು ಸರ್‌ಪ್ರೈಸ್ ಚೆಕ್ ಮಾಡತಕ್ಕದ್ದರ ಬಗ್ಗೆ ಶಾಸಕರಿಗೂ ಕೂಡಾ ಅಧಿಕಾರವನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅಸಿಸ್ಟೆಂಟ್ ಕಮೀಷನರ್‌ಗೇ ಪೂರ್ಣ ಅಧಿಕಾರ ಕೊಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾವು ಕೊಟ್ಟಿದ್ದೇವೆ. ಆಗಲೇ ನಾವು ಪೂರ್ಣ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಆದರೆ ಅವರು ಮಾಡುತ್ತಾ ಇಲ್ಲ. ಇವತ್ತು ಬರೀ ಇನ್‌ಸ್ಪೆಕ್ಟ್ ಮಾಡುವುದೇ ಅಲ್ಲ, ಮಾಡಿದ ಮೇಲೆ ಅಲ್ಲಿ ಮೂವ್‌ಮೆಂಟ್ ಪುಸ್ತಕದಲ್ಲಿ ಸಹಿ ಕೂಡ ಹಾಕಬೇಕು. ಎಂದು ಹೇಳಿದ್ದೇವೆ. ಅಲ್ಲಿ ಡಿ.ಸಿ. ಗಳು ಪುಸ್ತಕದಲ್ಲಿ ಸೈನ್ ಹಾಕುತ್ತಾ ಇರಲಿಲ್ಲ. ಎ.ಇ. ಗಳು ಹಾಗೂ ಇ.ಇ.ಗಳೂ ಸಹಾ ಸೈನ್ ಹಾಕುತ್ತಿರಲಿಲ್ಲ. ಏಕೆಂದರೆ ಅವರು ಸಿಕ್ಕುಬೀಳುತ್ತಾರಲ್ಲಾ, ಅದಕ್ಕೆ ಇವತ್ತು ನೀವು ಹೋಗಿ ಬಂದಿದ್ದು ಗೊತ್ತಾಗಬೇಕಾದರೆ ಸೈನ್ ಹಾಕಬೇಕೆಂದು ಹೇಳಿದ್ದೇವೆ. ಸೈನ್ ಇಲ್ಲದಿದ್ದರೆ ಇನ್ಸ್‌ಪೆಕ್ಷನ್ ಮಾಡಿಲ್ಲ ಎಂದು ಅರ್ಥ. ಇಷ್ಟೆಲ್ಲಾ ಡೈರೆಕ್ಷನ್ ಕೊಟ್ಟಿದ್ದು ಸಮಯ ಇಲ್ಲದ್ದರಿಂದ ನಾನು ಇಲ್ಲಿ ಎಲ್ಲವನ್ನೂ ವಿವರವಾಗಿ ಹೇಳಲಿಲ್ಲ. ಇನ್ನು ಸ್ಕೇರ್ಸಿಟಿ ರಿಲೀಫ್‌ನಲ್ಲಿ ಲೆಟರ್ ಆಫ್ ಕ್ರೆಡಿಟ್ ಇಲ್ಲ. ಹಣವನ್ನು ಬಿಡುಗಡೆ ಮಾಡಿರುತ್ತೇವೆ. ಅದು ಡಿ.ಸಿ. ಯವರ ಕಡೆ ಇರುತ್ತದೆ. ಅವರು ಅದನ್ನು ಖರ್ಚು ಮಾಡುತ್ತಾರೆ. ಕೆಲವೊಂದು ಕಡೆ ತಪ್ಪು ಅಭಿಪ್ರಾಯದಿಂದ ಮಾನ್ಯ ಸದಸ್ಯರು ಹೇಳಿದಂತೆ ಆಗಿರಬಹುದು. ನಾವು ಹಣ ಬಿಡುಗಡೆ ಮಾಡಿದ್ದೇವೆ, ತಾಲ್ಲೂಕು ವೈಸ್ ಹಣವನ್ನು ಖರ್ಚುಮಾಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಇವತ್ತು ಬೇರೆ ಇಲಾಖೆಯು, ವರ್ಕ್ಸ್ ಇವೆ. ಅರಣ್ಯ ಇಲಾಖೆಯು ವ್ಯವಸಾಯ ಇಲಾಖೆಯು, ಲೋಕೋಪಯೋಗಿ ಇಲಾಖೆಯಲ್ಲಿನ ಕೆಲಸ ಕಾರ್ಯಗಳಿಗೆ ಲೆಟರ್ ಆಫ್ ಕ್ರೆಡಿಟ್ ಇಲ್ಲದೇ ಯಾವ ಹಣವನ್ನು ರಿಲೀಸ್ ಮಾಡಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹಣ ಬಿಡುಗಡೆ ಮಾಡುತ್ತಾರೆ. ಪಿ.ಡಬ್ಲ್ಯೂ.ಡಿ. ನಲ್ಲಿ ವರ್ಕ್ಸ್ ಹೆಚ್ಚು ಆಗಿತ್ತು ಉಳಿದವುಗಳಲ್ಲಿ ಏನೂ ಇಲ್ಲ ಉಳಿದ ಕಡೆ ಏನೂ ತೊಂದರೆ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಉತ್ತರವನ್ನು ಕೇಳಿದೆ. ಅದನ್ನು ಕೇಳುವ ಸಮಯದಲ್ಲಿ ಏಕೆ ಈ ರೀತಿ ಕತ್ತಲೆಯಲ್ಲಿ ಪರದಾಟ ಎಂದು ನನಗನಿಸಿತು. ಮಾನ್ಯ ಖರ್ಗೆಯವರು ವರದಿಯನ್ನು ಕೊಟ್ಟು ಕಡೇ ಪಕ್ಷ ಒಂದೊಂದು ಪಂಚಾಯಿತಿಗೆ ಎರಡೆರಡು ಕೆಲಸಗಳನ್ನು ಕೊಡಬೇಕೆಂದು ಹೇಳಿದ್ದಾರೆ, ಆ ಪ್ರಕಾರ ಇವತ್ತು ಸುಮಾರು ೩೫ ಲಕ್ಷ ೬೯ ಸಾವಿರ ಮಂದಿ ಸ್ಮಾಲ್ ಫಾರ್ಮರ್ಸ್, ಅಗ್ರಿಕಲ್ಚರಲ್ ಲೇಬರರ್ಸ್ ಮತ್ತು ಮಾರ್ಜಿನಲ್ ಫಾರ್ಮರ್ಸ್ ಇದ್ದಾರೆ. ಅವರಿಗೆ ೧೦೦ ಡೇಸ್ ವರ್ಕ್ ಕೊಡಿ ಎಂದು ಹೇಳಿದ್ದಾರೆ, ಇವತ್ತು ಯಾರು ಯಾರು ಕೆಲಸ ಬೇಕು ಎಂದು ಮುಂದೆ ಬರುತ್ತಾರೋ ಅವರಿಗೆ ಕೊಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಕೇಳಿದವರಿಗೆ ಕೆಲಸ ಕೊಡುತ್ತೇವೆ ಎನ್ನುವುದು ನಮ್ಮ ಕಾಲದಲ್ಲೂ ಇತ್ತು ನಿಮ್ಮ ಕಾಲದಲ್ಲೂ ನಡೆದುಕೊಂಡು ಬಂದಿದೆ. ಆದರೆ ಇವತ್ತು ಪಂಚಾಯಿತಿಗಳಲ್ಲಿ ಕೆಲಸ ಇಲ್ಲ. ಇದಕ್ಕೆ ಹಣ ಇಲ್ಲ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ನಿಮ್ಮ ಲೆಟೆಸ್ಟ್ ಮೆಮೊರಾಂಡಮನಲ್ಲಿ ಕೊಟ್ಟಿರುವ ಪ್ರಕಾರ ಎಂದರೆ ಆಗಸ್ಟ್ ೧ನೇ ತಾರೀಖು ನಾರ್ಮಲ್ ಪ್ರೋಗ್ರಾಮ್‌ನಲ್ಲಿ ೬೯.೪೨ ಕೋಟಿ ರೂ. ನಿಮ್ಮ ಹತ್ತಿರ ಇತ್ತು ಇದಾದ ಮೇಲೆ ಕೇಂದ್ರದವರು ೧೦ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದೀರಿ. ಹಿಂದೆ ೧೮ ಕೋಟಿ ರೂಪಾಯಿ ಅವರು ಬಿಡುಗಡೆ ಮಾಡಿದ್ದಾರೆ. ಇದೆಲ್ಲಾ ಸೇರಿದರೆ ಸುಮಾರು ೬೦ ಕೋಟಿ ರೂಪಾಯಿ ಈಗ ಲಿಕ್ವಿಡ್ ಕ್ಯಾಷ್ ನಿಮ್ಮ ಹತ್ತಿರ ಇದೆ. ಇವನ್ನೆಲ್ಲಾ ನೀವು ರಿಲೀಸ್ ಮಾಡಿ ಪಂಚಾಯಿತಿಗಳಿಗೆ ೨ ಕೆಲಸಗಳಂತೆ ಕೊಟ್ಟರೂ ೩೫ ಲಕ್ಷ ಮಂದಿಗೆ ಒಂದೇ ಸಾರಿ ಕೆಲಸ ಕೊಡುವುದಕ್ಕೆ ಆಗದಿದ್ದರೂ ೩–೪ ಲಕ್ಷ ಮಂದಿಗೆ ಆದರೂ ಕೆಲಸ ಕೊಟ್ಟು ಇನ್ನು ಒಂದು ತಿಂಗಳಲ್ಲಿ ೧೦ ಲಕ್ಷ ಮಂದಿ

ಗಾದರೂ ಕೆಲಸ ಕೊಡತಕ್ಕ ವರದಿಯನ್ನು ಒಪ್ಪಿಸಿ. ಎಲ್ಲೆಲ್ಲಿ ಪಂಚಾಯ್ತಿಗೆ ೨ ಕೆಲಸಗಳನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುವ ಬಿ.ಡಿ.ಒ. ಗಳನ್ನು ಡಿ.ಸಿ. ಗಳನ್ನು ಸಸ್ಪೆಂಡ್‌ನಲ್ಲಿ ಇಡತಕ್ಕ ಬಗ್ಗೆ ಆಜ್ಞೆ ಹೊರಡಿಸಿದರೆ ಇದು ಸಾಲ್ವ್ ಆಗುತ್ತದೆ. ತಾವು ಇದನ್ನು ಜಾರಿಗೆ ತಂದರೆ ಒಂದು ಪಂಚಾಯಿತಿಗೆ ಎರಡು ಕೆಲಸಗಳಂತೆ ಆಗುತ್ತವೆ. ಈ ಎರಡು ಕೆಲಸಗಳು ಆಗುತ್ತಿದೆಯೋ ಇಲ್ಲವೋ ಎನ್ನುವುದರ ಬಗ್ಗೆ ಶಾಸಕರು ಇನ್ಸ್‌ಪೆಕ್ಟ್ ಮಾಡುತ್ತಾರೆ. ಅಲ್ಲಿ ೨ ಕೆಲಸಗಳು ಆಗುತ್ತಾ ಇಲ್ಲ ಎಂದರೆ

೭-೦೦ ಪಿ. ಎಂ.

ಎಷ್ಟು ಹಣ ಬಿಡುಗಡೆ ಮಾಡಿದರೂ ಕೂಡ, ಕೆಲಸ ಕೊಡುವುದಕ್ಕೆ ಸಾಕಾಗುವುದಿಲ್ಲ. ಮತ್ತೊಂದು ಸೂಚನೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಖರ್ಗೆಯವರು ಈಗಾಗಲೇ ವರದಿಯನ್ನು ಕೊಟ್ಟಿದ್ದಾರೆ. ಇನ್ನು ೧೫ ದಿವಸದಲ್ಲಿ ಫೀಲ್ಡ್‌ನಲ್ಲಿ ಯಾವರೀತಿ ಕೆಲಸ ಕಾರ್ಯಗಳು ನಡೆಯುತ್ತವೆ ಎಂಬುದನ್ನು ತಿಳಿದುಕೊಂಡು ಮತ್ತೊಂದು ವರದಿಯನ್ನು ಕೊಡುವವರೆಗೆ, ಸಮಿತಿಯು ಮುಂದುವರಿಯಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಪಂಚಾಯಿತಿಗೆ ಎರಡು ಕೆಲಸ ಕೊಡಬೇಕೆಂದು ಮಾನ್ಯ ಮೊಯಿಲಿಯವರು ಹೇಳುತ್ತಿದ್ದಾರೆ. ಶಾಸಕರು ಅಧಿವೇಶನ ಮುಗಿಸಿಕೊಂಡು ಊರುಗಳಿಗೆ ಹೋಗುವುದರಿಂದ, ಎಲ್ಲಿ ಜನರು ಕೆಲಸಕ್ಕೆ ಬರುತ್ತಾರೆ, ಅಲ್ಲಿ ಕೆಲಸ ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಕೆಲವು ಕಡೆ ಕೆಲಸ ಪ್ರಾರಂಭ ಮಾಡಿದರೂ ಕೂಡ, ಜನಗಳು ಬರುವುದಿಲ್ಲ. ಮುಂದಿನವಾರ ಎಲ್ಲಾ ಜಿಲ್ಲೆಯಲ್ಲಿಯೂ ಸ್ಕೇರ್ಸಿಟಿ ವಿಚಾರದಲ್ಲಿ ಶಾಸಕರ ಸಭೆಯನ್ನು ಕರೆಸಿ, ಅವರು ಎಲ್ಲಾ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಹೇಳುತ್ತಾರೆ, ಅಂತಹ ಕಡೆ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸುತ್ತೇನೆ, ಯಾವ ಅಧಿಕಾರಿ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲವೋ, ಅಂತಹ ಅಧಿಕಾರಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. I will direct the Deputy Commissioners to call a meeting next week.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಅನೇಕ ಸದಸ್ಯರು ಕೆಲಸ ನಡೆಯುವ ಬಗ್ಗೆ ಅನೇಕ ಲೋಪದೋಷಗಳಾಗುತ್ತಿವೆ, ಅವುಗಳನ್ನು ಸರಿಪಡಿಸಬೇಕೆಂದು ಕೇಳಿಕೊಂಡಿದ್ದಾರೆ. ಮಾನ್ಯ ಬೊಮ್ಮಾಯಿಯವರೂ ಕೂಡ, ಒಪ್ಪಿಕೊಂಡಿದ್ದರು. ಅದರ ಬಗ್ಗೆ ಏನೂ ಹೇಳಲಿಲ್ಲ. ಮತ್ತೆ, ಯುವಕ ಸಂಘಗಳ ಮೂಲಕ ಕೆಲಸ ಒದಗಿಸುವ ವಿಷಯವನ್ನು ಪ್ರಸ್ತಾಪ ಮಾಡಿದ್ದೆವು. ಸಮಿತಿಯವರೂ ಕೂಡಾ ಇದರ ಬಗ್ಗೆ ವರದಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ತಮ್ಮ ಹೇಳಿಕೆಯಲ್ಲಿ ಪ್ರಸ್ತಾಪವಿಲ್ಲ. ಇದರ ಬಗ್ಗೆ ಸ್ಪಷ್ಟಪಡಿಸಬೇಕೆಂದು ಹೇಳುತ್ತೇನೆ. ಬರೀ ಕೆಲಸ ಕೊಡಿಸುವುದು ಮಾತ್ರವಲ್ಲ, ನ್ಯಾಯವಾಗಿ ಅದರ ಉಪಯೋಗ ಗ್ರಾಮೀಣ ಜನರಿಗೆ ದೊರೆಯುವಂತೆ ಸೂಕ್ತ ನಿರ್ದೇಶನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಯಾರು ಕೆಲಸ ಬೇಕೆಂದು ಮುಂದೆ ಬರುತ್ತಾರೆ, ಅಂತಹವರಿಗೆ ಕೆಲಸ ಕೊಡುತ್ತೇವೆನ್ನುವ ಮಾತನ್ನು ಈಗಾಗಲೇ ಸದನದಲ್ಲಿ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಇದುವರೆವಿಗೂ ಅಲ್ಪಸ್ವಲ್ಪ ಮಳೆ ಆಗಿದ್ದು, ಕೆಲಸವನ್ನೂ ಕೂಡಾ ತೆಗೆದುಕೊಂಡಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ೧೦ ಪಟ್ಟು ಕೆಲಸವನ್ನು ತೆಗೆದುಕೊಂಡರೂ, ಜನರನ್ನೂ ತೃಪ್ತಿಪಡಿಸುವುದಕ್ಕಾಗುವುದಿಲ್ಲ. ಆದ್ದರಿಂದ, ಹೆಚ್ಚು ಹೆಚ್ಚು ಕೆಲಸತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ ಕೊಟ್ಟಂತಹ ಕೆಲಸಗಳು ಪೂರ್ತಿಯಾಗಿವೆ, ಕೆಲಸ ಯಾವುದೂ ಇಲ್ಲ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಇದರ ಬಗ್ಗೆ ಸೂಕ್ತ ನಿರ್ದೇಶನ ತಾವು ಕೊಡಬೇಕು. ಅಲ್ಲದೆ ಜಿಲ್ಲಾಧಿಕಾರಿಗಳಿಗೆ ರೋಲರ್ಸ್ ತೆಗೆದುಕೊಳ್ಳತಕ್ಕಂತಹ ಅಧಿಕಾರವನ್ನೂ ಕೊಡಿ. ಇದು ಪರ್ಮನೆಂಟ್ ವ್ಯವಸ್ಥೆಯಾಗುತ್ತದೆ. ಈಗ ಬರಗಾಲ ಕಾಮಗಾರಿಗಳಲ್ಲಿ ಶಾಶ್ವತವಾದ ಕೆಲಸಗಳು ನಡೆಯುತ್ತಿವೆ. ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಜಿಲ್ಲಾಧಿಕಾರಿಯವರಿಗೆ ರೋಲರ್ಸ್ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ. ಶಿವಮೊಗ್ಗ ಜಿಲ್ಲೆಯಲ್ಲಿಯೂ ಕೂಡ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಡುತ್ತೇನೆ. ಕೆಲವು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಈಗಾಗಲೇ ಕೊಂಡುಕೊಂಡಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದೆವು. ಮತ್ತೆ ಬರಗಾಲಕ್ಕೆ ಸಂಬಂಧಪಟ್ಟಂತೆ ಕೇಂದ್ರದಿಂದ ಒತ್ತಡ ತರುವ ಬಗ್ಗೆ ಒಂದು ನಿಯೋಗವನ್ನು ಕಳಿಸುವ ವಿಚಾರವನ್ನು ಪ್ರಸ್ತಾಪ ಮಾಡಿದ್ದೆವು. ಅದರ ಬಗ್ಗೆ ತಾವೇನೂ ಹೇಳಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಶುಲ್ಕದ ವಿಚಾರದಲ್ಲಿ ಆಲೋಚನೆ ಮಾಡಿ, ಹೇಳಬೇಕಾಗುತ್ತದೆ. ಅವಶ್ಯಕತೆ ಬಿದ್ದರೆ ನಿಯೋಗವನ್ನು ಕರೆದುಕೊಂಡು ಹೋಗುವ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ಬಿ. ಲಕ್ಕಪ್ಪ.—ಸ್ವಾಮಿ, ತುಮಕೂರು ಜಿಲ್ಲೆ ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನಲ್ಲಿ ಭೀಕರವಾದಂಥಹ ಕ್ಷಾಮವಿದ್ದು, ಸಮಿತಿಯವರು ಕೂಡ ತಮ್ಮ ವರದಿಯಲ್ಲಿ ಅದರ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಆದರೆ, ಸರ್ಕಾರದವರು ಜಾಸ್ತಿ ಜನಸಂಖ್ಯೆ ಇರತಕ್ಕಂತಹ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಗ್ರ್ಯಾಂಟ್ ಕೊಡತಕ್ಕ ಕಾಲದಲ್ಲಿ ೮ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ೪೦ ಪರ್ಸೆಂಟ್ ಬಿತ್ತನೆ ಆಗಿರತಕ್ಕಂತಹ ತಾಲ್ಲೂಕುಗಳಿಗೆ ೧೧ ಲಕ್ಷ, ೧೨ ಲಕ್ಷ, ೧೩ ಲಕ್ಷ ರೂಪಾಯಿಗಳವರೆಗೂ ಹಣ ಕೊಟ್ಟಿದ್ದಾರೆ. ಕುಡಿಯುವ ನೀರಿನ ವಿಷಯದಲ್ಲಿ ತಾರತಮ್ಯ ತೋರಿಸಿರತಕ್ಕಂಥಾದ್ದು ನಿಜವಾಗಿಯೂ ಕೂಡ ವ್ಯಥೆ ಪಡುವಂತಾಗಿದೆ. ನಾವು ಕುಡಿಯುವ ನೀರಿಗೆ ಸಂಬಂಧಪಟ್ಟಂತೆ, ಬೋರ್ ವೆಲ್‌ಗಳನ್ನು ಹಾಕಿಸಿಕೊಡಬೇಕೆಂದು ಕೇಳಿದರೂ ಹಾಕಿಸಿಕೊಟ್ಟಿಲ್ಲ. ಕಾಂಗ್ರೆಸ್‌ನವರು ಇರತಕ್ಕಂತಹ ಕಡೆ ಒಂದೊಂದು ಬೋರ್‌ವೆಲ್‌ನ್ನು ಕೊಟ್ಟಿಲ್ಲ. ಕೆಲವು ಕಡೆ ಏಳೆಂಟು, ಹತ್ತು ಬೋರ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ವಸ್ತುಸ್ಥಿತಿಯನ್ನು ಸರ್ಕಾರಕ್ಕೆ ತಿಳಿಸಿದರೂ, ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ತುಮಕೂರಿನಲ್ಲಿ ನಡೆಸಿದಂತಹ ಸಭೆಗೆ ಬಂದಿದ್ದೆ ತಾವು ಇರಲಿಲ್ಲ. ಅಲ್ಲಿ ಈ ವಿಷಯವನ್ನು ಯಾರೂ ಹೇಳಲಿಲ್ಲ. ಇದರ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಆದೇಶಕೊಡುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ.—ತಹಶೀಲ್ದಾರ್‌ರವರ ಹತ್ತಿರ ಒಂದು ಲಕ್ಷ ರೂಪಾಯಿಗಳ ಎಮರ್ಜೆನ್ಸಿ ಫಂಡ್ ಇಟ್ಟು ತುರ್ತಾಗಿ ಹಳ್ಳಿಯ ಜನ ಬಂದಾಗ ನಾಲ್ಕೈದು ಸಾವಿರ ರೂಪಾಯಿಗಳ ಕೆಲಸ ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಜಾನುವಾರುಗಳ ಮೇವಿಗೆ ಸಂಬಂಧಪಟ್ಟಂತೆ, ಸಣ್ಣ ರೈತರಿಗೆ, ಅತಿ ಸಣ್ಣ ರೈತರಿಗೆಕೊಡತಕ್ಕಂತಹ ವ್ಯವಸ್ಥೆಮಾಡಿದ್ದೀರಿ ದೊಡ್ಡ ರೈತರಿಗೂ ಕೂಡ ಮೇವನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಸ್ಕೇರ್ಸಿಟಿ ಏರಿಯಾದಲ್ಲಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿಯೆಂದು ಸಂಬಂಧಪಟ್ಟ ಚೀಫ್ ಇಂಜಿನೀಯರ್‌ರವರು ವರದಿ ಕೊಟ್ಟರೂ ಕೂಡ ಜಿಲ್ಲಾಧಿಕಾರಿಗಳು ಮಂಜೂರು ಮಾಡುವುದರಲ್ಲಿ ನಿಧಾನವಾಗುತ್ತಿದೆ, ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ತಾವು ಸೂಕ್ತ ಆದೇಶಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸಣ್ಣ ಮತ್ತು ಅತಿಸಣ್ಣ ರೈತರಿಗೆ ಮೇವನ್ನು ಉಚಿತವಾಗಿ ಕೊಡಲಾಗುತ್ತದೆ. ದೊಡ್ಡ ರೈತರು ಸಾಗಾಣಿಕೆ ವೆಚ್ಚವನ್ನು ಕೊಡಬೇಕಾಗುತ್ತದೆ. ತಾಸೀಲ್ದಾರ್‌ರವರ ಹತ್ತಿರ ಒಂದು ಲಕ್ಷ ರೂಪಾಯಿಗಳ ಎಮರ್ಜೆನ್ಸಿ ಪಂಡ್ ಇಡಬೇಕಾದ ಅವಶ್ಯಕತೆ ಇಲ್ಲ. ನಾರ್ಮಲ್ಲಾಗಿ ಎನ್‌ಆರ್‌ಇಪಿ ಮತ್ತು ಆರ್‌ಎಲ್‌ಜಿಪಿಯಲ್ಲಿ ಹಣವಿದ್ದು ಅದನ್ನು ಉಪಯೋಗಿಸಿಕೊಂಡು ಕೆಲಸ ಮಾಡಿಸಬಹುದು. ನಂತರ, ಖರ್ಚುಮಾಡಿದಂತಹ ಹಣವನ್ನು ಹೊಂದಿಸಿಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸಭಾಧ್ಯಕ್ಷರೆ, ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದನೇನೂ ಇಲ್ಲ. ಈ ಸದನದ ಎಲ್ಲಾ ೧೫ ಜನ ಸದಸ್ಯರೂ ಸೇರಿ, ಒಮ್ಮತದಿಂದ ವರದಿಯನ್ನು ಕೊಟ್ಟಿದ್ದಾರೆ. ಆದಕ್ಕಾಗಿಯೇ ನಾನು ಅವರನ್ನು ಅಭಿನಂದಿಸುತ್ತೇನೆ. ರಾಜ್ಯದಲ್ಲಿರತಕ್ಕಂಹ ಭೀಕರ ಬರಗಾಲ ಪರಿಸ್ಥಿತಿಯನ್ನು ಖುದ್ದಾಗಿ ನೋಡಿ, ಅಧಿಕಾರಿಗಳನ್ನು ಭೇಟಿಯಾಗಿ ಕೆಲಸಕಾರ್ಯಗಳು ಯಾವರೀತಿ ನಡೆಯುತ್ತವೆ,ಮುಂದೆ ಯಾವರೀತಿ ಕೆಲಸಕಾರ್ಯಗಳನ್ನು ಕೈಗೊಳ್ಳಬೇಕು. ಎನ್ನುವುದನ್ನು ತಿಳಿದುಕೊಳುವುದಕ್ಕೆ ಅನುಕೂಲಮಾಡಿಕೊಟ್ಟಿದ್ದಕ್ಕಾಗಿ ನಾನು ಸರ್ಕಾರದವರನ್ನೂ ಕೂಡ ಅಭಿನಂದಿಸುತ್ತೇನೆ. ಇವತ್ತು ಪ್ರತಿ ದಿವಸ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆಮಾಡಿ ಕೆಲಸ

ಕೊಡಬೇಕೆನ್ನುವುದನ್ನು ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ೩೬ ಲಕ್ಷ ಜನರಿಗೆ ಕೆಲಸ ಕೊಡಬೇಕಾಗಿದೆ. ಕನಿಷ್ಟ ಪಕ್ಷ, ೧೩ ಲಕ್ಷ ಜನರಿಗೆ ಕೆಲಸ ಕೊಡಬೇಕಾದರೂ ಒಂದು ಕೋಟಿ ರೂಪಾಯಿಗಳನ್ನು ಪ್ರತಿದಿವಸ ಬಿಡುಗಡೆಮಾಡಬೇಕಾಗಿದೆ. ೩ ಲಕ್ಷ ಜನರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಪ್ಲಾನ್‌ವರ್ಕ್‌ನಲ್ಲಿ ಕೊಡುವುದನ್ನು ಬಿಟ್ಟು, ಇಷ್ಟು ಹಣವನ್ನು ಕೊಡಬೇಕಾಗುತ್ತದೆ.

ಈಗಾಗಲೇ ತಾವು ಎನ್‌ಆರ್‌ಇಪಿ, ಡಿಪಿಎಪಿ, ಪಿಡಬ್ಲ್ಯೂಡಿ ವರ್ಕ್ಸ್, ಮೈನರ್ ಇರಿಗೇಷನ್ ಇದೆಲ್ಲವನ್ನು ಮಾಡಿಸಿ ಕೊಡುವುದಾಗಿ ಒಪ್ಪಿಕೊಂಡಿರುತ್ತೀರಿ, ಮೊಟ್ಟಮೊದಲನೆಯದಾಗಿ ನಾವು ಹೇಳಿರುವಂತೆ ಬರಗಾಲ ಎಫೆಕ್ಟ್ ಆಗಿ ಎಲ್ಲಿ ಜನರು ತೊಂದರೆಗೆ, ಒಳಗಾಗಿರುತ್ತಾರೋ ಅಂಥ ಕಡೆ ಜನರಿಗೆ ಕೆಲಸಗಳನ್ನು ಒದಗಿಸಿಕೊಡಬೇಕಾದರೆ ಒಂದು ಕೋಟಿ ರೂಪಾಯಿಗಳು ಬೇಕಾಗುತ್ತದೆ, ಪ್ರತಿವರ್ಷ ೨೦೦ ದಿವಸಗಳ ಕೆಲಸವನ್ನು ಕೊಡಬೇಕೆಂದರೆ ೨೦ ಕೋಟಿ ರೂಪಾಯಿ ಬೇಕಾಗುತ್ತದೆ. ಕನಿಷ್ಟ ಪಕ್ಷ ದನಕರುಗಳಿಗೆ ಮೇವನ್ನು ಒದಗಿಸತಕ್ಕಂಥ ವ್ಯವಸ್ಥೆಯಾದರೂ ಆಗಬೇಕೆಂದು ಹೇಳಿದ್ದೇನೆ ತಾವೂ ಕೂಡ ಅದಕ್ಕೆ ಒಪ್ಪಿಕೊಂಡಿರುತ್ತೀರಿ. ಇಷ್ಟೆಲ್ಲ ಹೇಳಿದ ಮೇಲೆ ನಾವು ಕೊಟ್ಟಿರತಕ್ಕಂಥ ೩೫ ರೆಕಮೆಂಡೇಷನ್ಸ್‌ಗಳಿಗೆ ಉತ್ತರವಾಗಿ ೨೦ಕ್ಕೆ ಮಾತ್ರ ಹೇಳಿದ್ದೀರಿ. ಇದರಲ್ಲಿ ಸ್ಪಷ್ಟವಾಗಿ ಹೇಳಿದ ೫–೬ ವಿಚಾರಗಳು ಎಂದರೆ ಅಡ್ಮಿನಿಸ್ಟ್ರೇಷನ್‌ಗೆ ಇನ್‌ಸ್ಟ್ರಕ್ಷನ್ ಕೊಟ್ಟಿರುವ ಬಗ್ಗೆ ಮಾತ್ರ ಹೇಳಿದ್ದೀರಿ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆಯಾಗಲಿ, ಇನ್ನಿತರ ಕೆಲಸಗಳ ಬಗ್ಗೆಯಾಗಲಿ ತಾವುಏನು ಹೇಳುತ್ತೀರೆಂದರೆ ಒಂದು ಸಬ್ ಕಮಿಟಿ ಮಾಡಿ ೨–೩ ದಿವಸಗಳಲ್ಲಿಯೇ ಪರಿಶೀಲನೆ ಮಾಡುತ್ತೇವೆಂದು ತಾವು ಹೇಳಿದ್ದೀರಿ. ತಮ್ಮ ಲೆಕ್ಕದ ಪ್ರಕಾರ ತೆಗೆದುಕೊಂಡರೆ ಏಪ್ರಿಲ್ ಒಂದರಿಂದ ಸುಮಾರು ಈ ೫ ತಿಂಗಳ ಕಾಲದಲ್ಲಿ ಖರ್ಚು ಮಾಡಿರತಕ್ಕಂಥದ್ದು ೩೬ ಕೋಟಿ ರೂಪಾಯಿಗಳು ಅಂದರೆ ಕೇವಲ ೧೦ ಪರ್ಸೆಂಟ್ ಉಳಿದುಕೊಂಡರೂ ಕೂಡ ಕೇವಲ ೩೬ ದಿವಸಗಳಷ್ಟು ಕೆಲಸ ಕೊಟ್ಟಂತೆ ಅಂದಾಜಾಗುತ್ತದೆ. ಇದು ನನ್ನ ಒಬ್ಬನ ಅಭಿಪ್ರಾಯವಲ್ಲ ಎಲ್ಲ ಸದಸ್ಯರೂ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ೩೨ ಜನ ಸದಸ್ಯರು ಈ ವರದಿಯ ಬಗ್ಗೆ ಮಾತನಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ತಾವೂ ಕೂಡ ಇದನ್ನು ಒಪ್ಪಿಕೊಂಡಿರುತ್ತೀರಿ. ಆದರೆ ವರದಿಯನ್ನು ಬಿಡುಗಡೆ ಮಾಡುವಾಗ ಕೆಕಮೆಂಡೇಶನ್ಸ್‌ನ್ನು ಒಪ್ಪಲಾಗಿದೆ ಎಂದು ಒಂದು ಸಂಕುಚಿತ ಭಾವನೆಯಿಂದಲೇ ಹೇಳಿದ್ದೀರಿ. ಇದಕ್ಕೆ ಸ್ಪಷ್ಟವಾಗಿ ಹೇಳುತ್ತೇನೆ, ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ ಇದು ಒಂದು ಅನುಮಾನ ಬಂದಿರತಕ್ಕಂಥ ರಿಪೋರ್ಟ್ ಆಗದೆ ವ್ಯವಸ್ಥಿತವಾದ ಕಾರ್ಯಕ್ರಮವನ್ನು ತೆಗೆದು ಕೊಂಡು ಪ್ರತಿವರ್ಷ ಒಂದು ಕೋಟಿ ರೂ. ಗಳನ್ನು ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ಸ್ಪಷ್ಟವಾದ ಅಶೂರೆನ್ಸ್ ಕೊಟ್ಟರೆ ಈ ವರದಿಯನ್ನು ಸಲ್ಲಿಸಿದ್ದಕ್ಕೆ ಉಪಯೋಗವಾಗುತ್ತದೆ. ಪಂಚಾಯತಿಗಳಿಗೆ ಎರಡು ಕೆಲಸಗಳನ್ನು ವಹಿಸಿದ್ದೀರಿ. ನಾವು ಪ್ರತಿಯೊಂದು ಜಿಲ್ಲೆಯಲ್ಲೂ ನೋಡಿಕೊಂಡು ಬಂದಿರುತ್ತೇನೆ. ಜಿಲ್ಲಾಧಿಕಾರಿಗಳು ನಮ್ಮ ಜೊತೆಯಲ್ಲಿ ಸಹಕರಿಸಿದ್ದುದಕ್ಕೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅವರು ಕ್ಲಿಯರ್‌ಕಟ್ ಆಗಿ ಹೇಳಿದ್ದಾರೆ. ದುಡ್ಡು ಬಂದೇ ಇಲ್ಲವೆಂದು ಹೇಳಿದ್ದಾರೆ. ಕೆಲವು ಕಡೆ ಹಣವನ್ನು ಕೊಟ್ಟಿದ್ದರೂ ಖರ್ಚುಮಾಡದೆ ಇರತಕ್ಕಂಥದ್ದು ಸ್ಪಷ್ಟವಾಗಿ ಹೇಳಿರುತ್ತಾರೆ, ತಾವು ಇವತ್ತಿನ ದಿವಸ ಸ್ಪಷ್ಟವಾಗಿ ಅಶುರೆನ್ಸ್ ಕೊಡಬೇಕು. ನಿಮ್ಮ ಇನ್‌ಸ್ಟ್ರಕ್ಷನ್ ಫಾಲೋ ಮಾಡಲು ಅಧಿಕಾರಿಗಳು ರಿವ್ಯೂ ಮಾಡಲು ತಾವು ಏನಾದರೂ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೀರಾ ? ಇದನ್ನು ತಮ್ಮ ನಜರಿಗೆ ಬಂದಾಗ ಕೆಲವು ಸೂಚನೆಗಳನ್ನು ಕೊಟ್ಟ ಮೇಲೆ ತಾವು ಬೋರ್‌ವೆಲ್‌ಗಳನ್ನು ಮಾಡಿಸಿದ್ದೀರಿ. ಆದಕ್ಕೆ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ೩೫ ಸೂಚನೆಗಳನ್ನು ನಾವು ಏನು ಕೊಟ್ಟಿರುತ್ತೇವೆ ಅದನ್ನು ತಾವು ಒಪ್ಪಿಕೊಳ್ಳಬೇಕು. ಏತಕ್ಕೆಂದರೆ ಇದರಲ್ಲಿ ಅಂಥ ಮಹತ್ವ ವಿಶೇಷವಿಲ್ಲ, ವಿಶೇಷವಾಗಿ ನಾವು ರೆಕಮೆಂಡೇಷನ್ಸ್ ಮಾಡಿದ್ದು ಏನೆಂದರೆ ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟ ಹಾಗೆ ಇರುತ್ತದೆ. ಮತ್ತು ಪರ್ಮನೆಂಟ್ ಮೆಷರ್ಸ್‌ಗಳ ಸಂಬಂಧಪಟ್ಟಂಥ ವಿಷಯಗಳಾಗಿರುತ್ತದೆ. ಪ್ಲಾನಿಂಗ್ ಮಂತ್ರಿಗಳಾಗಿ ಈ ಕೆಲಸಗಳನ್ನು ತಾವು ತೆಗೆದುಕೊಳ್ಳಬೇಕು, ಮತ್ತು ಇದರ ಬಗ್ಗೆ ಒಂದು ಆ್ಯಕ್ಟ್ ಮಾಡಬೇಕೆಂದು ಕೂಡ ನಾವು ಸಲಹೆ ಕೊಟ್ಟಿದ್ದೇವೆ. ದಯವಿಟ್ಟು ಇದರ ಬಗ್ಗೆ ತಾವು ಹೇಳಬೇಕು. ಇನ್ನು ವಾಟರ್ ರೇಟ್ ಬಗ್ಗೆ ಹೇಳುವುದಾದರೆ ಟ್ಯಾಂಕ್ ಏರಿಯಗಳು ಅಂದರೆ ಕೋಲಾರ, ಮತ್ತು ಮಲೆನಾಡು ಪ್ರದೇಶಗಳಲ್ಲಿ ಮಳೆ ಬಂದರೂ ಸಹ ನೀರು ಇರುವುದಿಲ್ಲ. ಆದ್ದರಿಂದ ಇಂತಹ ಕಡೆಗಳು ವಾಟರ್‌ರೇಟ್‌ನ್ನು ಎಕ್ಸಮ್ಷನ್ ಮಾಡಬೇಕು. ಅದರ ಬಗ್ಗೆ ತಾವು ಏನೂ ಹೇಳಲಿಲ್ಲ. ಲ್ಯಾಂಡ್ ರೆವಿನ್ಯೂ ಬಗ್ಗೆ ಹೇಳಿದ್ದೇವೆ. ಅದರ ಬಗ್ಗೆಯೂ ತಾವು ಸ್ಪಷ್ಟವಾಗಿ ಹೇಳಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ನಾನು ಪುನಃ ವರದಿಯ ಬಗ್ಗೆ ಮಾತನಾಡಲು ಒಪ್ಪಿಗೆ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—೩೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುತ್ತೇವೆ. ಇದರಲ್ಲಿ ಡಿಪಿಎಪಿ, ಪಿಡಬ್ಲ್ಯೂಡಿ, ಮೈನರ್ ಇರಿಗೇಷನ್, ಮೇಜರ್ ಇರಿಗೇಷನ್, ಅಗ್ರಿಕಲ್ಚರ್ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಖರ್ಚು ಮಾಡಿರತಕ್ಕಂಥದ್ದು ಟೋಟಲ್ ಫಿಗರ್ಸ್ ನೂರು ಕೋಟಿ ರೂಪಾಯಿಗಳಾಗಿರುತ್ತದೆ. ಎಕ್ಸಾಕ್ಟ್ ಫಿಗರ್ಸ್ ನನ್ನ ಹತ್ತಿರ ಇಲ್ಲ. ಮಾನ್ಯ ಮಲ್ಲಾರಿಗೌಡ ಪಾಟೀಲ್ ರವರಿಗೂ ಮತ್ತು ಮಾನ್ಯ ಖರ್ಗೆಯವರಿಗೂ ಅವರ ಜಿಲ್ಲೆ ಯಾವ ಕಾರ್ಯಕ್ರಮದಡಿಯಲ್ಲಿ ಬರುತ್ತದೆ ಎಂಬುದು ಅವರಿಗೆ ಗೊತ್ತಿರುತ್ತದೆ. ಎಷ್ಟು ಹಣವನ್ನು ಖರ್ಚು ಮಾಡಿರುತ್ತೇವೆಂದು ಅವರಿಗೆ ಗೊತ್ತಿರುತ್ತದೆ. ಗುರುಮಿಟ್‌ಕಲ್‌ನಿಂದ ಕೂಲಿ ಆಳುಗಳನ್ನು ಕರೆಸಿಕೊಂಡಿರುತ್ತೇವೆ. ಸುಮಾರು ೧–೨ ಕೋಟಿ ರೂ. ಗಳ ಹಣ ಖರ್ಚಾಗಿರತಕ್ಕಂಥದ್ದು ಅವರಿಗೆ ಗೊತ್ತಿರುತ್ತದೆ.

ಅಧ್ಯಕ್ಷರು.—ಮಾನ್ಯ ಸಚಿವರ ಸುದೀರ್ಘವಾದ ಉತ್ತರದಿಂದ ಬರಗಾಲದ ಮೇಲಿನ ಚರ್ಚೆ ಮುಕ್ತಾಯವಾಗಿರುತ್ತದೆ. ಇನ್ನು ಮುಂದಿನ ವಿಷಯ ಕುದುರೆಮೋತಿಯಲ್ಲಿ ನಡೆದಂಥ ಘಟನೆಗೆ ಸಂಬಂಧಪಟ್ಟ ವಿಷಯದ ವರದಿ ಬಗ್ಗೆ ಚರ್ಚೆ.

ಕುದುರೆ ಮೋತಿ ಪ್ರಕರಣದ ಬಗ್ಗೆ ವಿಶೇಷ ಸಮಿತಿಯವರು ಕೊಟ್ಟಿರುವ ವರದಿ ಮೇಲಿನ ಚರ್ಚೆ

ಶ್ರೀ ಎಸ್. ಬಂಗಾರಪ್ಪ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ......

ಶ್ರೀ ಬಿ.ಎ. ಉಪ್ಪಿನ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ. ಕುದುರೆಮೋತಿ ವಿಚಾರ ಈಗಾಗಲೇ ಕೋರ್ಟಿನ ಮುಂದೆ ಇರುವುದರಿಂದ ಅದನ್ನು ಇಲ್ಲಿ ಚರ್ಚೆ ಮಾಡುವುದಾದರೆ ಸಬ್ ಜ್ಯುಡೀಸ್ ಆಗುತ್ತದೆಂದು ನನ್ನ ಕ್ರಿಯಾಲೋಪ.

ಶ್ರೀ ಕೆ. ಹೆಚ್. ಪಾಟೀಲ್.—ತೆಲುಗು ಗಂಗಾ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ (ವಿರೋಧಪಕ್ಷದ ನಾಯಕರು).—ಸನ್ಮಾನ್ಯ ಅಧ್ಯಕ್ಷರೇ, ಕುದುರೆ ಮೋತಿ ಪ್ರಕರಣದ ವಿಚಾರದಲ್ಲಿ ಈಗಾಗಲೇ ಉಭಯ ಸದನಗಳ ಸದಸ್ಯರುಗಳು ಸಮಿತಿಯ ಆಶ್ರಯದಲ್ಲಿ ಅಲ್ಲಿಗೆ ಹೋಗಿ ಬಂದಿದ್ದಾರೆ. ಅಲ್ಲಿ ಅನೇಕ ವಿವರಗಳನ್ನುಗಳನ್ನು ಪಡೆಯುತಕ್ಕಂಥ ಪ್ರಯತ್ನ ಮಾಡಿದ್ದಾರೆ. ನಾನು ಪುನಃ ಎಲ್ಲ ವಿವರಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಪಾರ್ವತಮ್ಮ ಗೌಡ, ಮತ್ತು ಹುಸೇನಬೀ ಎನ್ನತಕ್ಕಂಥ ಮುಸ್ಲೀಮ್ ಮಹಿಳೆಯ ವಿಚಾರ ಮೊದಲನೆಯದಾಗಿ ಇರುತ್ತದೆ. ವಿವರವಾಗಿ ಹೋಗತಕ್ಕಂಥ ಅವಶ್ಯಕತೆ ಇಲ್ಲವೆಂದು ತಿಳಿದುಕೊಂಡರೂ ಈ ಸಂದರ್ಭದಲ್ಲಿ ಈ ಸದನದ ಸಮಿತಿಯು ಹೋದಮೇಲೆ ಈಗಾಗಲೇ ಒಂದು ವರದಿಯನ್ನು ಶ್ರೀಮಾನ್ ಹೆಚ್.ಟಿ. ಕೃಷ್ಣಪ್ಪನವರ ನೇತೃತ್ವದಲ್ಲಿ ಹೋದಂಥ ಸಮಿತಿಯವರು ಕೊಟ್ಟಿದ್ದಾರೆ. ಈ ಸಮಿತಿಯು ಅಲ್ಲಿಗೆ ಹೋದಾಗ ಅಲ್ಲಿರತಕ್ಕಂಥ ಪರಿಸ್ಥಿತಿ ಏನು ಇತ್ತು ಎನ್ನುವ ಬಗ್ಗೆ ಸಾಕಷ್ಟು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಸಮಿತಿಯು ಹೋದಾಗ ಅಲ್ಲಿರತಕ್ಕಂಥ ಪರಿಸ್ಥಿತಿಯ ಬಗ್ಗೆ ಯಾರು ಸಮಿತಿಯ ಮುಂದೆ ಬಂದು ಹೇಳಿಕೆಯನ್ನು ನೀಡಬೇಕಾಗಿತ್ತೋ, ಅವರು ಬಂದು ತಮ್ಮ ಅಭಿಪ್ರಾಯಗಳನ್ನು ನಿರ್ಭೀತಿಯಿಂದ, ಹೆದರಿಕೆ, ಬೆದರಿಕೆ ವಾತಾವರಣಕ್ಕೆ ಒಳಗಾಗದೆ ತಮ್ಮ ಹೇಳಿಕೆಯನ್ನು ಕೊಡತಕ್ಕಂಥ ಪರಿಸ್ಥಿತಿ ಇರಲಿಲ್ಲ. ಇದು ಪತ್ರಿಕೆಗಳಲ್ಲೂ ಕೂಡ ಬಂದಿದೆ. ಅದರ ಜೊತೆಗೆ ಸಮಿತಿಯ ಮಾನ್ಯ ಸದಸ್ಯರು ಸಹ ಹೋಗಿ ಬಂದಿದ್ದಾರೆ.........

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹಮಂತ್ರಿಗಳು ಈ ಸಭೆಯಲ್ಲಿ ಇಲ್ಲ. ಈ ಪ್ರಕರಣವು ಗೃಹ ಸಚಿವರಿಗೆ ಸಂಬಂಧಪಟ್ಟ ವಿಷಯವಾಗಿರುತ್ತದೆ. ಪೋಲೀಸ್ ಖಾತೆಗೆ ಸಂಬಂಧಪಟ್ಟ ವಿಚಾರವಾಗಿರುತ್ತದೆ. ಆದ್ದರಿಂದ ಅವರು ಇದ್ದರೆ ಒಳ್ಳೆಯದೆಂದು ಹೇಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ವಿಷಯಕ್ಕೆ ಪುಷ್ಟಿಯನ್ನು ಕೊಡುತ್ತಾ ಮಾನ್ಯ ಸಚಿವರನ್ನು ತಕ್ಷಣ ಕರೆಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ ಅವರು ನಿರ್ಭೀತಿಯಿಂದ ತಮ್ಮ ಹೇಳಿಕೆಯನ್ನು, ತಮ್ಮ ಅಭಿಪ್ರಾಯವನ್ನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.